Sub : According to administrative approval to the estimates for construction of ANM Sub-Centres in alternate places under SICF component of KHSDRP- reg.

Read : 1) Govt Order No. HFW/KHSDRP/SECT/Civ-1/2007-08 Bangalore dt. 9-11-2007.

2) Proceedings of the 19th meeting of Programme Steering Committee dt.04-01-2010.

Preamble :

In the Government Order read at (1) above, Government have accorded administrative approval to the estimates for construction of ANM Sub-Centres at Benal in Basavana Bagewadi Taluk, Bijapur District and Budihal in Indi Taluk, Bijapur District. They were approved for Rs. 16.00 lakhs each under SICF Component of World Bank assisted Karnataka Health System Development and Reform Project (KHSDRP). Since, the site at Budihal is not available, it is decided to take up the construction of ANM

Sub-Centre at Bathagunki instead of Budihal as decided earlier. Likewise the tender for construction of ANM Sub-Centre at Benal was not called for, because, KBJNL had already taken up the work. Therefore, it is decided to take up the work at Mannur, Basavana Bagewadi Taluk instead of Benal.

The Executive Engineer, KHSDRP Division, Dharwad have submitted detailed fresh estimates amounting to Rs. 17.50 lakhs each, based on SR of PWD, Belgaum Circle for 2008-09 for construction of ANM Sub-Centres in the alternate places and have sought administrative approval for the same.

Accordingly, Programme Steering Committee in its meeting held on 4.1.2010 has accorded approval for the above fresh estimates and take up the works as per Local Shopping Procedure of the World Bank's approved Procurement Plan.

Hence the following Order.

Govt. Order No. HFW/KHSDRP/Sect/Civil-3/2007-08, Bangalore, dated : 15-02-2010

Under the circumstances stated above, administrative approval is accorded for the estimates for construction of ANM Sub-Centres in alternate places at Mannur in lieu of Benal in Basavana Bagewadi Taluk, Bijapur district and Bathagunki in lieu of Budihal in Indi Taluk, Bijapur Diustrict each amounting to Rs. 17.50 lakhs and to take up the works as per local shopping procedure of the World Bank approved Procument Plan.

The above expenditure is debitable to the Head of Account "4210-01-110-1-87-139 (SICF Component)" for the corresponding financial year.

By Order and in the name of the Governor of Karnataka

M. SHASHIDHAR

Deputy Secretary to Government

KHSDRP

Health and Family Welfare Department.

P.R.454

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಮೈಸೂರು ಸಕ್ಕರೆ ಕಾರ್ಖಾನೆ (ನಿ) ಇದರ ಪುನಃಶ್ಚೇತನಕ್ಕೆ ಸರ್ಕಾರದಿಂದ ಆರ್ಥಿಕ ನೆರವು-2009-10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣದ ಬಿಡುಗಡೆ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ಸಿಐ 70 ಎಸ್‌ಜಿಎಫ್ 2009 ದಿನಾಂಕ : 03-08-2009.
ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಸಕ್ಕರೆ ಕಾರ್ಖಾನೆ ರವರ ಪತ್ರ ಸಂಖ್ಯೆ : ಎಂಎಸ್‌ಕೋ/ಎಂಡಿ/ಡಿಬ/790 ದಿನಾಂಕ : 01-01-2010.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿರುವ ಸರ್ಕಾರದ ಆದೇಶದಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯ ಪುನಶ್ಚೇತನಕ್ಕಾಗಿ ರೂ. 10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (2) ರಲ್ಲಿರುವ ವ್ಯವಸ್ಥಾಪಕ ನಿರ್ದೇಶಕರು ಮೈಸೂರು ಸಕ್ಕರೆ ಕಾರ್ಖಾನೆ ರವರ ಪತ್ರದಲ್ಲಿ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸುವ ಯೋಜನಾ ವರದಿಯನ್ನು 50.00 ಕೋಟಿ ರೂ.ಗಳ ಬದಲಿಗೆ 61.70 ಕೋಟಿ ರೂ.ಗಳಿಗೆ ಪರಿಷ್ಕರಿಸಿಕೊಳ್ಳುವಂತೆ ವರದಿ ಮಾಡಿ 2009-10ನೇ ಸಾಲಿನ ಆಯವ್ಯಯದಲ್ಲಿ ಕಾರ್ಖಾನೆಯ ಪುನಃಶ್ಚೇತನಕ್ಕಾಗಿ ಒದಗಿಸಲಾಗಿರುವ 50.00 ಕೋಟಿ ರೂ.ಗಳ ಅನುದಾನದಲ್ಲಿ ದುಡಿಯುವ ಬಂಡವಾಳಕ್ಕಾಗಿ ರೂ. 6.20 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ 2009-10ನೇ ಸಾಲಿನ ಅನುದಾನದಲ್ಲಿ ಒದಗಿಸಲಾಗಿರುವ 50.00 ಕೋಟಿ ರೂ.ಗಳಲ್ಲಿ ಕಾರ್ಖಾನೆಗೆ ಬಂಡವಾಳ ಹೂಡಿಕೆಗಾಗಿ 5.00 ಕೋಟಿ ರೂ.ಗಳನ್ನು ಕಾರ್ಖಾನೆಗೆ ಬಿಡುಗಡೆಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಐ 70 ಎಸ್‌ಜಿಎಫ್ 2009 (2), ಬೆಂಗಳೂರು, ದಿನಾಂಕ : 15ನೇ ಫೆಬ್ರವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಮೈಸೂರು ಸಕ್ಕರೆ ಕಾರ್ಖಾನೆ (ನಿ), ಮಂಡ್ಯ, ಈ ಕಾರ್ಖಾನೆಗೆ 2009-10ನೆ ಸಾಲಿಗೆ ಕಾರ್ಖಾನೆಯ ಪುನಶ್ಚೇತನ ಸಂಬಂಧ ಬಂಡವಾಳ ಹೂಡಿಕೆಗಾಗಿ 5.00 ಕೋಟಿ ರೂ.ಗಳನ್ನು (ಐದು ಕೋಟಿ ರೂ.ಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2009-10ನೇ ಸಾಲಿನ ಅನುದಾನದಲ್ಲಿ ಕಾರ್ಖಾನೆಯ ಪುನಃಶ್ಚೇತನ ಸಂಬಂಧ ಲೆಕ್ಕಶೀರ್ಷಿಕೆ "4852-02-190-0-04 (ಯೋಜನೆ) 211 - ಹೂಡಿಕೆ" ಅಡಿಯಲ್ಲಿ ಒದಗಿಸಲಾಗಿರುವ 50.00 ಕೋಟಿ ರೂ.ಗಳಲ್ಲಿ ಎರಡನೆಯ ಕಂತು 5.00 ಕೋಟಿ ರೂ.ಗಳನ್ನು ಬಿಡುಗಡೆಗೆ ಮಂಜೂರು ಮಾಡಲಾಗಿದೆ.

ಹಣ ಸೆಳೆಯುವ ಅಧಿಕಾರಿಯು ಸಹಾಯಕ ನಿರ್ದೇಶಕರು (ಹೆಚ್.ಆರ್.ಡಿ ಆಡಳಿತ ಮತ್ತು ಇಎಂ) ಜಿಲ್ಲಾ ಕೈಗಾರಿಕಾ ಕೇಂದ್ರ ಮಂಡ್ಯ, ಆಗಿದ್ದು ಸದರಿಯವರು ಹಣ ಸೆಳೆಯುವ ಬಿಲ್ಲನ್ನು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸಬೇಕು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 185 ವೆಚ್ಚ-1/2010 ದಿನಾಂಕ : 08-02-2010 ರಲ್ಲಿ ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ಆನಂದಕುಮಾರ್
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್.455

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿ ಅಧೀಕ್ಷಕ ಅಭಿಯಂತರ ಮುಖ್ಯ ಕಛೇರಿಯಲ್ಲಿ ಮತ್ತು ಹೊಸದಾಗಿ ಸೃಜಿಸಲಾಗಿರುವ 7 ಉಪ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ/ಕಿರಿಯ ಅಭಿಯಂತರರಿಗೆ, ಭಾರತ ಸಂಚಾರ ನಿಗಮ ನಿಯಮಿತ, ಬೆಂಗಳೂರು, ಇವರ ಸಿಯುಜಿ, ನೆಟ್‌ವರ್ಕ್ ಯೋಜನೆಯಡಿಯಲ್ಲಿ ಸಿಮ್ ಕಾರ್ಡ್‌ಗಳನ್ನು ಖರೀದಿಸುವ ಬಗ್ಗೆ.

ಓದಲಾಗಿದೆ : 1) ಅಧೀಕ್ಷಕ ಅಭಿಯಂತರರು, ಕೆಹೆಚ್‌ಎಸ್‌ಡಿಆರ್‌ಪಿರವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಕುಕ/ ಕೆಹೆಚ್‌ಎಸ್‌ಡಿಆರ್‌ಪಿ/ಅಅ/ಬೆಂ/ಸಿ3/ಸಿಮ್/2009-10/1207 ದಿನಾಂಕ: 7-12-2009.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯನ್ವಯ ಅಭಿಯಂತರರ ಶಾಖೆಯ ಮುಖ್ಯ ಕಛೇರಿಗೆ ಕೆಲವು ಹುದ್ದೆಗಳನ್ನು ಹೊಸದಾಗಿ ಸೃಜಿಸಲಾಗಿರುತ್ತದೆ ಮತ್ತು ಹೊಸ ಉಪ ವಿಭಾಗಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ/ಕಿರಿಯ ಅಭಿಯಂತರರು ಇವರುಗಳೊಂದಿಗೆ ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಬೇಕಾದ/ಕೈಗೊಳ್ಳಬೇಕಾದ ಯೋಜನೆಗಳ ಕಾಮಗಾರಿಗಳ ಬಗ್ಗೆ ಸಂಪರ್ಕಿಸಬೇಕಾಗುತ್ತದೆ ಮತ್ತು ಆಗಿಂದಾಗ್ಗೆ ಕಾಮಗಾರಿಗಳ ಪ್ರಗತಿಯ ಬಗ್ಗೆ ಮಾಹಿತಿಯನ್ನು ಪಡೆಯಲು, ಅಂತರ್ಜಾಲ ಆಧಾರಿತ ಯೋಜನಾ ನಿರ್ವಾಹಣಾ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಂದ ಅಗತ್ಯ ಮಾಹಿತಿಗಳನ್ನು ಪಡೆಯಲು ಮತ್ತು ಸದರಿ ಶಾಖೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ ಬೆಂಗಳೂರು ಇವರ ವತಿಯಿಂದ ಕಾರ್ಯನಿರ್ವಹಿಸುತ್ತಿರುವವರನ್ನು ಎಲ್ಲಾ ವಿಭಾಗ ಮತ್ತು ಉಪ ವಿಭಾಗದವರು ಸಂಪರ್ಕಿಸಬೇಕಾಗಿರುದರಿಂದ ಅಭಿಯಂತರರ ಶಾಖೆಯ ಮುಖ್ಯ ಕಛೇರಿಗೆ ಹಾಗೂ ಹೊಸದಾಗಿ ಸೃಜಿಸಲಾಗಿರುವ ಏಳು ಉಪ ವಿಭಾಗಗಳಿಗೆ ಅಗತ್ಯವಿರುವ ಒಟ್ಟು 41 ಸಿಮ್ ಕಾರ್ಡ್‌ಗಳನ್ನು ಒದಗಿಸುವಂತೆ ಅಧೀಕ್ಷಕ ಅಭಿಯಂತರರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಭಾರತ ಸಂಚಾರ ನಿಗಮ ನಿಯಮಿತ, ಬೆಂಗಳೂರು, ಇವರಿಂದ ಸಿಯುಜಿ, ನೆಟ್‌ವರ್ಕ್ ಯೋಜನೆಯಡಿಯಲ್ಲಿ ಅಭಿಯಂತರ ಮುಖ್ಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳ ಮತ್ತು ಇತರೆ ಅಧಿಕಾರಿಗಳ ಬಳಕೆಗೆ ಒದಗಿಸಲಾಗುವ ಸಿಮ್ ಕಾರ್ಡ್ ಮತ್ತು ಮಾಸಿಕೆ ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

ಅನುಬಂಧ

ಕ್ರ. ಸಂ	ಪದನಾಮ	ಸಂಖ್ಯೆ	ಸಿ.ಯು.ಜಿ ಯೋಜನೆ	ಮಾಸಿಕ ವೆಚ್ಚ	ಒಟ್ಟು ವೆಚ್ಚ
1	ಉಪ ಮುಖ್ಯ ಇಂಜಿನಿಯರ್	1	525/-	350-00	875-00
2	ತಾಂತ್ರಿಕ ಸಹಾಯಕರು	1	525/-	350-00	875-00
3	ಸಹಾಯಕ ಇಂಜಿನಿಯರ್	16	525/-	350-00	14,000-00
4	ಕಿರಿಯ ಇಂಜಿನಿಯರ್	14	525/-	350-00	12,250-00
5	ಸಾಂಖ್ಯಿಕ ಅಧಿಕಾರಿ	1	525/-	350-00	875-00
6	ಡಬ್ಲ್ಯೂಜಿಪಿಎಮ್‌ಎಸ್	1	525/-	350-00	875-00
7	ಸಹಾಯಕ ಕಾರ್ಯಪಾಲಕ ಅಭಿಯಂತರರು	7	525/-	350-00	6125-00
	ಒಟ್ಟು	41			35,875-00

ಅದರಂತೆ ಈ ಕೆಳಕಂಡ ಆದೇಶ

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಎಫ್‌ಡಬ್ಲ್ಯೂ/ ಕೆಹೆಚ್‌ಎಸ್‌ಡಿಆರ್‌ಪಿ/ಸೆಕ್ಟ್/ 59/2007,ಬೆಂಗಳೂರು ದಿನಾಂಕ 28ನೇ ಜನವರಿ 2010

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿ ಮೇಲೆ ಅನುಬಂಧದಲ್ಲಿ ನಮೂದಿಸಿರುವ ಅಧಿಕಾರಿಗಳಿಗೆ ಭಾರತ ಸಂಚಾರ ನಿಗಮ ನಿಯಮಿತದ, ಸಿಯುಜಿ ನೆಟ್‌ವರ್ಕ್ ಯೋಜನೆಯಡಿಯಲ್ಲಿ ಸಿಮ್ ಕಾರ್ಡ್ ಒಂದಕ್ಕೆ 525/- ರಂತೆ ಒಪ್ಪಿ 41 (ನಲವತ್ತೊಂದು) ಮೊಬೈಲ್ ಸಿಮ್‌ಕಾರ್ಡ್ ಒದಗಿಸುವುದಕ್ಕೆ ಮತ್ತು ಸದರಿ ಮೊಬೈಲ್ ದೂರವಾಣಿಗಳ ವೆಚ್ಚವನ್ನು ಮಾಹೆಯಾನ ಒಂದಕ್ಕೆ ವೆಚ್ಚ ರೂ. 350/- ಗಳವರೆಗೆ ನಿಗದಿಪಡಿಸಿದೆ. ಒಂದು ವೇಳೆ ಅನುಮತಿ ನೀಡಿರುವ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ಪಾವತಿಸಬೇಕಾದಲ್ಲಿ ಆಯಾ ಅಧಿಕಾರಿಗಳ ಸ್ವತ: ಹೆಚ್ಚುವರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ "0210-04-800-0-02 (Miscellaneous Receipt) ಅಡಿಯಲ್ಲಿ ತಮ್ಮ ಸ್ವಂತ ಹಣದಿಂದ ಪಾವತಿಸುವುದು ಎಂಬ ಷರತ್ತಿನ ಮೇರೆಗೆ ಒಟ್ಟು ವೆಚ್ಚ ರೂ. 35,875-00 (ರೂಪಾಯಿ ಮೂವತ್ತೈದು ಸಾವಿರದ ಎಂಟುನೂರ ಎಪ್ಪತ್ತೈದು ಮಾತ್ರ) ಗಳಿಗೆ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯ ದೂರವಾಣಿ ಲೆಕ್ಕ ಶೀರ್ಷಿಕೆ " 2210-06-800-0-84 (ಯೋ) 052" ಯಡಿ 2009-10ನೇ ಸಾಲಿನಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ. ಶಶಿಧರ್)
ಸರ್ಕಾರದ ಉಪ ಕಾರ್ಯದರ್ಶಿ,
ಕೆಹೆಚ್‌ಎಸ್‌ಡಿಆರ್‌ಪಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪಿಆರ್-321

HEALTH AND FAMILY WELFARE SECRETARIAT

CORRIGENDUM

No HFW (PR) 4 WBA 2010, Bangalore, Dated : 29-01-2010

In the Government Order No. HFW (PR) 4 WBA 2010 Bangalore dated 23-01-2010 in the page No.2 Para No. 1 instead of "1 year " it shall be read as " 2 years."

By Order and in the name of the Governor of Karnataka

(M. Shashidhar)
Deputy Secretary to Government
KHSDRP
Health and Family Welfare Department

P.R 322

HEALTH AND FAMILY WELFARE SECRETARIAT

Sub :- Consultancy Services for " Preparation of Medium Term Expenditure Framework (MTEF) and Public Expenditure Review (PER) of the activities of the Health & Family Welfare Dept. of the Govt. of Karnataka for the period of five years from 2010-11 reg.

Read :- Proceedings of the 19th meeting of Programme Steering Committee dated 04-01-2010

Preamble:

Karnataka Health System Development and Reform Project (KHSDRP) is being implemented from 11-1-2007 by the Govt. of Karnataka (GoK) with the World Bank assistance at a cost of US $ 206.48 million (Rs. 898 crores) with the main objective of increasing utilization of essential health services (curative, preventive and public health), particularly in the underserved areas and among vulnerable groups, to accelerate achievement of the health related Millennium Development Goals (MDGs) Under the Programme Finance window of the project, Bank assistance of US $ 55 million is provided over a period of 5 years from 2006-07 by way of incentive funding linked to real growth in the spending on Primary Health Care by the GoK.

Programme Financing aims to contribute to realistic budgetary growth in the H& FW expenditure in accordance with the projections in the Medium Term Fiscal Plan (MTFP) to ensure that the process of planning, execution and monitoring of Public and Primary Health Care activities are strengthened. As a strategic plan to manage the resources for improving the Healthcare infrastructure to derive optimal benefits of the multiple investments in the health care sector and a step in the implementation of the Programme Finance Support, preparation of a Medium Term Expenditure Framework (MTEF) is proposed. MTEF is to be used as a tool for the medium term planning of the activities to be carried out by the Department of Health & Family Welfare (DoH& FW), over a period of five years. This is also one of the agreed action points in the last Implementation Support Mission held in October 2009.

Services of a Consultancy firm is to be hired for the preparation of the MTEF. After obtaining approval of the World Bank for the Terms of Reference (ToR) for assigning the consultancy work for preparation of the MTEF, Project has gone through process of shortlisting eligible Consultancy firms by inviting Expression of interest (EOI) in leading newspaper, issue of Request for Proposal (RFP) to the shortlisted firms for submission of technical and financial bids, evaluation & qualification of the technical bids and opening financial bids of the technically qualified firms, 75 points were fixed as the cut off point for Technical qualification. Quality and Cost Based Selection (QCBS) method of selection has been followed in selecting the Consultancy firm with 80% weightage for technical score and 20 % weightage for the financial score. 13 firms responded to the notification seeking EOI of which 6 were shortlisted for issue of RFP and 3 firms responded to the RFP, all of whom technically qualified. On the basis of the combined score obtained under the QCBS selection method, ICRA Management Consulting Services Limited (IMaCS) NOIDA have emerged as L-1 and they have bid Rs. 20.56 lakhs+ service tax extra, as applicable, for the assignment. IMaCS have handled the assignment of Preparation of MTEF for Uttarakhand State Health Development Project in 2008 for World Bank and feedback received from the Bank for the quality and adherence to deliverables under the Project by IMaCS is satisfactory.

Proposal to award the Consultancy Services for "Preparation of Medium Term expenditure Framework (MTEF) and Public Expenditure Review (PER) of the activities of the Health & Family Welfare

Dept. of the Govt. Karnataka for the period of five years from 2010-11" to IMaCS, NOIDA is considered and approved by the Programme steering Committee at the meeting held on 4-1-2010.

Hence the following Order.

Government Order No. HFW (PR) 6 WBA 2009 Bangalore, dated : 29-01-2010

In the circumstances explained above, approval is accorded to award Consultancy Services for Preparation of Medium Term Expenditure Framework (MTEF) and Public Expenditure Review (PER) of the activities of the Health & Family Welfare Dept. of the Govt. of Karnataka for the period of five years from 2010-11" to ICRA management Consulting Service Limited (IMaCS), NOIDA at Rs. 20.56 lakhs (fee for PER & MTEF is Rs. 8.43 lakhs & Reimbursable Expenses is Rs. 4.60 Lakhs and Fee for Rolling MTEF is Rs. 5.08 lakhs & Reimbursable Expenses is Rs. 2.45 lakhs), including traveling and other expenses, service tax being extra, as applicable. Scope of the work under the Consultancy Services shall comprise of :

(i) Preparation of MTEF for the period 2010-15;

(ii) Training the staff of the Health & Family Welfare Department and other relevant Departments, to facilities them, both in the use of the MTEF and in preparation of the rolling MTEF year on year;

(iii) Help/Handhold the Project/GoK in the preparation of the Rolling MTEF for the next 2 years i.e., 2010 for 2011-2016 & 2011 for 2012-2017 after the MTEF for the period 2010-15 is prepared.

Deliverables under the Consultancy assignment, time limit for submission of the reports and terms and payment are :

Report	Brief Contents	Time limit	Payment
Report 1	Brief resume of all the materials that are examined and proposed to be used for various steps of the assignment.	Within 3 weeks of signing the contract agreement	10% of the agreed fee for PER & MTEF
Report 2	Updation of the PER (Step 1 of the assignment as detailed in the ToR). This will also include a template in excel spreadsheet linking budget codes to alternative classifications.	Within 6 weeks of signing of the contract agreement	
Report 3	MTEF report covering Steps 2 to 6 of the assignments as detailed in the ToR will be delivered within the following schedules:		
Report 3.1	Inception report indicating approach to the MTEF (steps 2 to 6) with the framework of the chapters and the source materials analyzed. At this stage, clarity must be demonstrated in the way objectives, programmes, activities, outputs and outcomes are being linked along with expenditure outlays. Clarity must also be demonstrated about the way resource envelopes are being enlisted and analysed.	Within 6 weeks of signing of the contract agreement	10% of the agreed fee for PER & MTEF
Report 3.2 Draft Report	This will inter alia also include the tables and spreadsheets linking objectives, programmes and activities and expenditure levels to outputs and outcomes in a	Within 12 weeks of signing of the contract agreement	20% of the agreed fee for PER & MTEF

	multiyear frame work. Draft report must be as near complete as possible.]		
Report 3.3 Draft Final Report	State Government/KHSDRP will give comments on the draft report within 2 weeks of receipt of the report.	Within 3 weeks of the receipt of comments from the Govt./KHSDRP	20% of the agreed fee for PER & MTEF
Final Report	State Government/KHSDRP will give comments on the draft final report within 2 weeks of receipt of the report.	Within 3 weeks of the receipt of final comments from the Govt./KHSDRP	20% of the agreed fee for PER & MTEF
Balance 20% of the fee for PER & MTEF would be released to the extent of 10% each after preparation of Rolling MTEF for the years 2011-2016 and 2012-17 along with the remuneration quoted for preparation of the respective Rolling MTEF.			

A Review Committee consisting of the following shall review the progress of the work and the reports submitted by the Consultancy firm from time to time, give its suggestions/views for modification/improvement and approve the draft reports submitted by the Consultant firm :

1. The Commissioner of Health and Family Welfare, Chairman
2. The Project Administrator, KHSDRP and Mission Director, NRHM, Member
3. The Director of Health and Family Welfare, Member
4. The Deputy Secretary (Budget & Resources), Finance Department, Member
5. The Joint/Deputy Director (H & FW Schemes), Dept. of Planning, Statistics & Institutional Finance, Member
6. The JD (Planning), Health and Family Welfare Department, Member
7. The Chief Administrative Officer, KHSDRP, Member
8. The Chief Accounts Officer, Health and Family Welfare Department, Member
9. The CFO, KHSDRP and NRHM, Member Secretary

The Official Memorandum Constituting the above Committee will be issued separately.

Expenditure towards this consultancy contract is debitable to the Head of Account "2210-06-800-0-84 KHSDRP Project Management & Evaluation – EAP – 051 ".

ICRA Management Consulting Services Limited (IMaCS), NOIDA shall enter into a contract with the project detailing therein the team to be deployed, services and reports to be provided by them under the Contract and other terms & conditions governing the Consultancy assignment.

By Order and in the name of the Governor of Karnataka

(M.Shashidhar)
Deputy Secretary to Government
KHSDRP
Health and Family Welfare Department

P.R. 323

HEALTH AND FAMILY WELFARE SECRETARIAT

Sub :- Training of Master Resource Persons for the VHSC under Capacity Building of VHSCs-Reg.

Read :- Proceedings of the 19th meeting of Programme Steering Committee dated 04-01-2010.

Preamble:

The Karnataka Health System Development and Reform Project has planned to undertake the capacity building of Village Health Sanitation Committee/Arogya Raksha Samithi (VHSC/ARS) in the State. In this context, it is decided to conduct training of Master Resource Persons who will in turn train the VHSCs/ARSs. The Master Resource Persons are selected from the shortlisted organizations and District Programme Officers. It is proposed to conduct the training programme in 4 batches of 40

members each, totaling 160 Master Resource Persons in the State to carry out the capacity building of VHSCs/ARSs. In this regard, M/s Bharath Gyan Vigyan Samithi has been shortlisted to provide and facilitate this training on a single source basis. The approval has been accorded in the 19th meeting of the Programme Steering Committee held on 4th January 2010. The estimated costs for the training programme are as below :

Estimated Cost per batch

Duration : 5 days **No. of Trainees : 40 Members**

Sl. No.	*Particulars*	*Amount in Rupees*
1	Food & Accomodation (40x600x5)	Rs. 1,20,000.00
2	Facilitator Honorarium @ Rs. 600 per session x 20 sessions	Rs. 12,000.00
3	Travelling allowance actual for Facilitators	Rs. 10,000.00
4	Travelling allowance for trainees (40x600)	Rs. 24,000.00
5	Daily allowance for trainees (40x500x5)	Rs. 1,00,000.00
6	Folder, Pen & Pad @ Rs. 200x40	Rs. 8,000.00
7	Stationery	Rs.6,000.00
8	Transportation (actual)	Rs. 15,000.00
9	Registration, Banner, Photo	Rs. 3,000.00
10	Conference Hall Rent (2000x5)	Rs. 10,000.00
11	CD Projector	Rs. 5,000.00
	Total	**Rs. 3,13,000.00**

Budget for workshop and inauguration programme

Sl. No.	*Particulars*	*Amount in Rupees*
1	Food @ Rs. 200x100 persons	Rs. 20,000.00
2	Travelling allowance @ Rs. 600x30 – NGO Representatives (actual)	Rs. 18,000.00
3	Registration, Banner & Photo	Rs. 5,000.00
4	Other Expenses	Rs. 2,000.00
	Total	Rs. 45,000.00

Total Cost for the Training Programme for Training of Master Resource persons :

Sl. No.	*Particulars*	*Amount in Rupees*
1	Inauguration Programme	Rs. 45,000.00
2	Four batches trainings @ Rs. 3,13,000 x4	Rs. 12,52,000.00
3	Programme Monitoring Fees to M/s BGVS, Bangalore	Rs. 50,000.00
4	Printing and Photo Copying charges for Training Manuals	Rs. 50,000.00
	Total	Rs. 13,97,000.00

(Rupees Thirteen Lakhs Ninety Seven Thousand Only)

Thus the total estimated cost for the training programme for training of the Master Resource Persons of is likely to be approximately Rs. 13.97 lakhs.

Hence the following Order.

Government Order No. HFW (PR) 06 WBA 2010, Bangalore, dated 30-01-2010.

Under the circumstances mentioned in the preamble, Government are pleased to accord approval to undertake the training of Master Resource Persons under Capacity Building of VHSCs/ARSs.

Approval is also accorded for the estimated budget of Rs. 13,97,000/- (Rupees thirteen lakhs ninety seven thousand only) as detailed in the preamble.

The expenditure shall be incurred under the Head of Account "2210-06-800-0-82 (Plan) " under PHCF component for the corresponding financial year.

By Order and in the name of the Governor of Karnataka
(M.Shashidhar)
Deputy Secretary to Government
KHSDRP
Health and Family Welfare Department

P.R. 324

ವಸತಿ ಸಚಿವಾಲಯ

ವಿಷಯ : ಚಿತ್ರದುರ್ಗ ಜಿಲ್ಲೆ, ಹೂಳಲ್ಕರೆ ತಾಲ್ಲೂಕು ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂ.ವಇ/42/ಹೆಚ್ಎಎಂ.1999, ದಿನಾಂಕ : 10-05-2000

2) ಸರ್ಕಾರದ ಆದೇಶ ಸಂ.ವಇ/18/ಹೆಚ್ಎಎಸ್.2008, ದಿನಾಂಕ : 16-09-2009

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ (1)ರಲ್ಲಿ ಓದಲಾದ ಆದೇಶದನ್ವಯ ಮತ್ತು ಮೇಲೆ (2) ರಲ್ಲಿ ಓದಲಾದ ಆದೇಶವನ್ನು ಮುಂದುವರೆಸುತ್ತಾ ಚಿತ್ರದುರ್ಗ ಜಿಲ್ಲೆ, ಹೂಳಲ್ಕರೆ ತಾಲ್ಲೂಕು ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ವಇ 02 ಹೆಚ್ಎಎಸ್ 2010, ಬೆಂಗಳೂರು, ದಿನಾಂಕ 19ನೇ ಜನವರಿ, 2010.

ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್‌ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1.	ಶ್ರೀ ಬಸವರಾಜ್ ಬಿನ್ ಹಾಲಪ್ಪ, ಹೊಳಲ್ಕೆರೆ	ಸಾಮಾನ್ಯ
2.	ಶ್ರೀ ವೆಂಕಟೇಶ್ ಬಿನ್ ಸಣ್ಣ ಹನುಮಪ್ಪ, ಹೊಳಲ್ಕೆರೆ	ಪರಿಶಿಷ್ಟ ಜಾತಿ
3.	ಶ್ರೀ ನಜೀರ್ ಸಾಬ್ ಬಿನ್ ಸೈಯದ್ ಬಷೀರ್ ಸಾಬ್, ಹೊಳಲ್ಕೆರೆ	ಅಲ್ಪಸಂಖ್ಯಾತರು
4.	ಶ್ರೀಮತಿ ಸುಧಾ ಕೋಂ ಹೆಚ್. ಸಿ. ಬಸವರಾಜ್, ಹೊಳಲ್ಕೆರೆ	ಹಿಂದುಳಿದ ವರ್ಗ (ಮಹಿಳೆ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಕೆ. ಆರ್. ವಲ್ಲೂರ)
ಪೀಠಾಧಿಕಾರಿ-2 ವಸತಿ ಇಲಾಖೆ

ಪಿಆರ್-325

ಶಿಕ್ಷಣ ಸಚಿವಾಲಯ

ವಿಷಯ : 2009-10ನೇ ಸಾಲಿಗೆ ರಾಜ್ಯ ವಲಯ ಯೋಜನೆಯ ಮುಂದುವರಿಕೆ ಕಾರ್ಯಕ್ರಮದಡಿ ಉಪ ನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಹಾಗೂ ದುರಸ್ತಿಗಾಗಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ ಇಡಿ 76 ಯೋಯೋಕ 2009, ದಿನಾಂಕ 24-04-2009

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ : ಯೋ (7) ಉ.ನಿ.ಕ್ಷೇ.ಶಿ.ಕ.ದು.ಅನು3/2009-10, ದಿನಾಂಕ 16-12-2009

ಪ್ರಸ್ತಾವನೆ :

1. ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2009-10ನೇ ಸಾಲಿಗೆ ಮುಂದುವರಿಕೆ ಕಾರ್ಯಕ್ರಮಗಳಿಗೆ ಅನುಮೋದನೆ ನೀಡಿ, ಉಪ ನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಹಾಗೂ ದುರಸ್ತಿಗಾಗಿ 300.00 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

2. ಮೇಲೆ (2)ರಲ್ಲಿ ಓದಲಾದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರದಲ್ಲಿ 2009-10ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2202-01-104-0-00-059 (ಯೋಜನೆ) ಪರಿವೀಕ್ಷಣೆ ಅಡಿ ಒದಗಿಸಲಾಗಿರುವ ಅನುದಾನ 60.00 ಲಕ್ಷ ರೂಪಾಯಿಗಳಲ್ಲಿ ಇದುವರೆವಿಗೂ ಕೇವಲ 10.00 ಲಕ್ಷ ರೂಪಾಯಿಗಳು ಮಾತ್ರ ವೆಚ್ಚವಾಗಿದ್ದು, ಸದರಿ ಮೊತ್ತದಿಂದ ರಾಮನಗರ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ದುರಸ್ತಿಗಾಗಿ 15.00 ಲಕ್ಷ ರೂಪಾಯಿ ಮತ್ತು ಮೈಸೂರು ಜಿಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಕಛೇರಿ ದುರಸ್ತಿಗಾಗಿ 15.00 ಲಕ್ಷ ರೂಪಾಯಿಗಳು ಹೀಗೆ ಒಟ್ಟು 30.00 ಲಕ್ಷ ರೂಪಾಯಿಗಳನ್ನು ಲೆಕ್ಕ ಶೀರ್ಷಿಕೆ 2202-02-800-1-10-059 ಗೆ ಮರು ಹಂಚಿಕೆ ಮಾಡಿ ಆದೇಶ ಹೊರಡಿಸಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ.

3. ಸದರಿ ಅನುದಾನ ಹಂಚಿಕೆ ಮಾಡಿ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 100 ಯೋಸಕ 2009, ಬೆಂಗಳೂರು, ದಿನಾಂಕ 29-01-2010
(ಇಡಿ 13 ಸ್ಕೀಮರ (ಯುನಿಕ್) 2009, ದಿನಾಂಕ 29-01-2010)

4. 2009-10ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2202-01-104-0-00-059 (ಯೋಜನೆ) ಪರಿವೀಕ್ಷಣೆ ಅಡಿ ಒದಗಿಸಲಾಗಿರುವ ಅನುದಾನದಲ್ಲಿ ಉಳಿತಾಯವಾಗುವ ಮೊತ್ತದಿಂದ ರಾಮನಗರ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ದುರಸ್ತಿಗಾಗಿ 15.00 ಲಕ್ಷ ರೂಪಾಯಿಗಳು (ಹದಿನೈದು ಲಕ್ಷ ರೂಪಾಯಿಗಳು ಮಾತ್ರ) ಮತ್ತು ಮೈಸೂರು ಜಿಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಕಛೇರಿ ದುರಸ್ತಿಗಾಗಿ 15.00 ಲಕ್ಷ ರೂಪಾಯಿಗಳು (ಹದಿನೈದು ಲಕ್ಷ ರೂಪಾಯಿಗಳು ಮಾತ್ರ) ಹೀಗೆ ಒಟ್ಟು 30.00 ಲಕ್ಷ ರೂಪಾಯಿಗಳನ್ನು (ಮೂವತ್ತು ಲಕ್ಷ ರೂಪಾಯಿಗಳು ಮಾತ್ರ) ಲೆಕ್ಕ ಶೀರ್ಷಿಕೆ 2202-02-800-1-10-059 (ಯೋಜನೆ)ಗೆ ಮರು ಹಂಚಿಕೆ ಮಾಡಲಾಗಿದೆ. ಈ ಮೊತ್ತವನ್ನು ವೆಚ್ಚ ಮಾಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

5. ಮರುಹೊಂದಾಣಿಕೆ ಪ್ರಪತ್ರ 22-ಎ ಅನ್ನು ಖಜಾನಾ ಇಲಾಖೆಯ ಎನ್.ಎಂ.ಸಿ. ಸೆಂಟರ್‌ಗೆ ಸಲ್ಲಿಸಿ ಮೊತ್ತವನ್ನು ಗಣಕದಲ್ಲಿ ಅಪ್ ಲೋಡ್ ಮಾಡಿಸಲು ಕ್ರಮ ವಹಿಸತಕ್ಕದ್ದು.

6. ಆ ಮೊತ್ತದಲ್ಲಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲು ಸೂಚಿಸಿದೆ

7. ಪ್ರತಿ ಮಾಹೆಯೂ ಎಂಎಂಆರ್ ವರದಿಯಲ್ಲಿ ಕಾಮಗಾರಿಯ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ತಪ್ಪದೇ ಸಲ್ಲಿಸತಕ್ಕದ್ದು.

8. ಕಾಮಗಾರಿಯ ಗುಣಮಟ್ಟದ ಬಗ್ಗೆ ಇಲಾಖೆಯ ಜವಾಬ್ದಾರಿಯುತ ಅಧಿಕಾರಿಗಳು ಆಗಿಂದಾಗ್ಗೆ ಪರಿಶೀಲನೆ ನಡೆಸಲು ಆದೇಶಿಸಲಾಗಿದೆ.

9. ಖರೀದಿಗಳಿಗೆ ಸಂಬಂಧಿಸಿದಂತೆ, ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸತಕ್ಕದ್ದು.

10. ಈ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ತಮ್ಮ ಅನಧಿಕೃತ ಟಿಪ್ಪಣಿ ಸಂಖ್ಯೆ : ಶಿಇ/43/ಐ.ಎಫ್ (ಬಿ ಮತ್ತು ಎ) 2010, ದಿನಾಂಕ 08-01-2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಐ. ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ಪಿಆರ್ 334

ಶಿಕ್ಷಣ ಸಚಿವಾಲಯ

ವಿಷಯ : ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ನಾನ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ತುಂಬಲು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಮಾರ್ಪಡಿಸಿ ಕಾರ್ಯಕಾರಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 165 ಡಿಟಿಇ 2007, ದಿನಾಂಕ : 6-9-2008
2) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ : ಟಿಟಿಇ/90/ಇಎಸ್‌ಟಿ (4) ಎ 06/1881, ದಿನಾಂಕ 10/11-09-2008.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 06-09-2008ರ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರುಗಳ ಇಂಜಿನಿಯರಿಂಗ್ ವಿಷಯಗಳ ಹುದ್ದೆಗಳನ್ನು ಭರ್ತಿ ಮಾಡಲು ಎ.ಐ.ಸಿ.ಟಿ.ಇ. ನಿಗದಿಪಡಿಸಿರುವ ವಿದ್ಯಾರ್ಹತೆಯನ್ವಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಲಾಗಿದೆ.

Assistant Professor Engineering College (Engineering Subjects) (Rs. 12000-18300) (AICTE)	By direct recruit-ment	**For direct recruitment :-** (1) Must posses Ph.D. degree with the first class in Bachelor's degree or Master's degree level in the appropriate branch of Engineering / Technology with three years experience in Teaching in an institution recognized by AICTE or an University established by law or in an Industry or Research the level of lecturer; or (2) First Class Master's degree in the appropriate branch of Engineering/Technology with five years experience in Teaching/ Industry at the level of lecturer or equivalent. Such candidates shall be required to obtain Ph.D. degree within a period of seven years from the date of appointment as Assistant Professor : Provided that in respect of candidates from Industry/profession with First Class Bachelor's degree/First class Master's degree in the appropriate branch of Engineering/Technology must have not less than five years Industrial/Professional experience. Age : Must not have attained the age of forty five years

ಆದರೆ ಸದರಿ ನಿಯಮಗಳಲ್ಲಿ ಸಹಾಯಕ ಪ್ರಾಧ್ಯಾಪಕರು ನಾನ್-ಇಂಜಿನಿಯರಿಂಗ್ ವಿಷಯಗಳ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವನ್ನು ಕಲ್ಪಿಸಿರುವುದಿಲ್ಲ. 1987 ರಲ್ಲಿನ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನ ನಾನ್ ಇಂಜಿಯಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗೆ ಈ ಕೆಳಗಿನಂತೆ ಅವಕಾಶವನ್ನು ಕಲ್ಪಿಸಲಾಗಿತ್ತು.

Assistant Professor, B.D.T. College of Engineering, Davanagere (Non-Engineering subjects)	**By promotion** : From the cadre of Lecturer in the respective branch of Non-Engineering subjects. If no suitable person available for promotion by Direct Recruitment. Or By deputation of an official of the equivalent grade from any of the State Universities or State or Central Civil Services	**For promotion :-** (1) Must posses have put in not less than three years of service in the cadre specified in column (2) **For Direct Recruitment :-** Must be holder of a Second class Master's Degree in the appropriate subjects. Must have put in not less than five years of experience in teaching or research in any of the recognised institution. Age : Must not have attained forty years

1987 ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸಹಾಯಕ ಪ್ರಾಧ್ಯಾಪಕರು, ನಾನ್ ಇಂಜಿನಿಯರಿಂಗ್ ಹುದ್ದೆಗಳ ನೇರ ನೇಮಕಾತಿಗೆ "Must be holder of a second class Master Degree in the appropriate subjects" ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿತ್ತು. ಆದರೆ ಎಐಸಿಟಿಇ ಯು ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನೇರನೇಮಕಾತಿಯಿಂದ ಭರ್ತಿ ಮಾಡಲು ಮತ್ತು ಪಿಹೆಚ್.ಡಿ ವಿದ್ಯಾರ್ಹತೆಯನ್ನು ಪಡೆದಿರಬೇಕೆಂದು ನಿಗದಿಪಡಿಸಿರುತ್ತದೆ.

ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಇಂಜಿನಿಯರಿಂಗ್ ವಿಭಾಗದಲ್ಲಿನ ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಯ ನೇಮಕಾತಿಗೆ ಅವಕಾಶವನ್ನು ಕಲ್ಪಿಸಿರುವುದರಿಂದ ನಾನ್-ಇಂಜಿನಿಯರಿಂಗ್ ವಿಭಾಗವಲ್ಲಿನ ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಯ ನೇರ ನೇಮಕಾತಿಗೆ ಅವಕಾಶವನ್ನು ಕಲ್ಪಿಸುವುದು ವಿದ್ಯಾರ್ಥಿಗಳ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಅವಶ್ಯಕತೆಯಿದೆಯೆಂದು ಸರ್ಕಾರವು ತೀರ್ಮಾನಿಸಿ, ಈ ರೀತಿ ನಾನ್ ಇಂಜಿನಿಯರಿಂಗ್ ವಿಭಾಗದ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಪಿ.ಹೆಚ್.ಡಿ. ವಿದ್ಯಾರ್ಹತೆಯನ್ನು ನಿಗದಿಪಡಿಸಿ ನೇರನೇಮಕಾತಿಗೆ ವಯೋಮಿತಿಯನ್ನು 45 ವರ್ಷಗಳಿಗೆ ನಿಗದಿಪಡಿಸಿ ಸೂಕ್ತ ತಿದ್ದುಪಡಿ ತರಲು ನಿರ್ಧರಿಸಿದೆ.

ಅದರಂತೆ ಈ ಆದೇಶ

ಸರ್ಕಾರಿ ಆದೇಶ ಸಂಖ್ಯೆ : ಇಡಿ 3 ಟಿಇಸಿ 2010 ಬೆಂಗಳೂರು, ದಿನಾಂಕ 30ನೇ ಜನವರಿ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ ಹೊರಡಿಸಿರುವ ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 165 ಡಿಟಿಇ 2007, ದಿನಾಂಕ 06-09-2008ರ ನಿಯಮಾವಳಿಗಳಿಗೆ ತಿದ್ದುಪಡಿ ಮಾಡುವುದನ್ನು ಕಾಯ್ದಿರಿಸಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ನಾನ್-ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳ ನೇರ ನೇಮಕಾತಿಗೆ ಈ ಕೆಳಕಂಡಂತೆ ನೇಮಕಾತಿ ವಿಧಾನವನ್ನು ರೂಪಿಸಲಾಗಿದೆ.

Assistant Professor Engineering College (Non-Engineering Subjects) (Rs. 12000-18300) (AICTE)	By direct recruit-ment	**For direct recruitment :-** (1) Must posses Ph.D., degree with the first class in the Master's degree level in the appropriate subjects. Must have put in five years experience in Teachng in an institution recognised by university established by law level of lecturer ; **Age :** Must not have attained the age of forty five years

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಬಿ. ಎಸ್. ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಪಿಆರ್ 335

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಶ್ರೀ ಬಿ. ಪ್ರಭಾಕರ್, ಉಪ ಅರಣ್ಯ ಸಂರಕ್ಷಣಾಧಿಕಾರಿ (ನಿವೃತ್ತ) ಇವರ ರಜಾ ಅವಧಿ ಸಕ್ರಮಗೊಳಿಸುವ ಬಗ್ಗೆ :-

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ಅಪಜೀ 75 ಅಪಸೇ 2007, ದಿನಾಂಕ 17-07-2009
2) ಮಹಾಲೇಖಪಾಲರ ಪತ್ರ ಸಂಖ್ಯೆ : GEX/D/PF/106/09-10/757, ದಿನಾಂಕ 10-08-2009

ಸರ್ಕಾರದ ಆದೇಶ ಸಂಖ್ಯೆ : ಅಪಜೀ 202 ಅಪಸೇ 2009, ಬೆಂಗಳೂರು, ದಿನಾಂಕ 30-01-2010

ಸರ್ಕಾರದ ಆದೇಶ ಸಂಖ್ಯೆ : ಅಪಜೀ 75 ಅಪಸೇ 2007, ದಿನಾಂಕ 17-07-2009ರ ಆದೇಶವನ್ನು ಪರಿಷ್ಕರಿಸಿ ಶ್ರೀ ಬಿ. ಪ್ರಭಾಕರ್, ಉಪ ಅರಣ್ಯ ಸಂರಕ್ಷಣಾಧಿಕಾರಿ (ನಿವೃತ್ತ) ಇವರ ದಿನಾಂಕ 19-06-1989 ರಿಂದ 16-10-1995 ರವರೆಗಿನ ಸಕ್ರಮಗೊಳ್ಳದೆ ಇರುವ ಅವಧಿಯನ್ನು ವೈಯಕ್ತೀಯ ಕಾರಣಗಳ ಮೇಲೆ ಈ ಕೆಳಕಂಡಂತೆ ಸಂಯುಕ್ತ ರಜೆಯೆಂದು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 198 ರನ್ವಯ ಪರಿಗಣಿಸಿ ಸಕ್ರಮಗೊಳಿಸಲು ಸರ್ಕಾರದ ಮಂಜೂರಾತಿ ನೀಡಿದೆ.

1	ದಿನಾಂಕ 19-06-1989 ರಿಂದ 16-10-1989 ರವರೆಗೆ	ಕರ್ನಾಟಕ ನಾಗರೀಕ ನಿಯಮಾವಳಿಯ ನಿಯಮ 112 (9) (ಎ) ರನ್ವಯ 120 ದಿನಗಳ ಗಳಿಕೆ ರಜೆ
2	ದಿನಾಂಕ 17-10-1989 ರಿಂದ 30-12-1989 ರವರೆಗೆ	75 ದಿನಗಳ ಅರ್ಧ ವೇತನ ರಜೆ
3	ದಿನಾಂಕ 31-12-1989 ರಿಂದ 31-05-1990 ರವರೆಗೆ	152 ದಿನಗಳ ಅರ್ಧ ವೇತನ ರಜೆ
4	ದಿನಾಂಕ 03-11-1992 ರಿಂದ 01-02-1993 ರವರೆಗೆ	90 ದಿನಗಳ ಅರ್ಧ ವೇತನ ರಜೆ
5	ದಿನಾಂಕ 06-04-1994 ರಿಂದ 25-10-1994 ರವರೆಗೆ	203 ದಿನಗಳ ಅರ್ಧ ವೇತನ ರಜೆ
6	ದಿನಾಂಕ 26-10-1994 ರಿಂದ 16-10-1995 ರವರೆಗೆ	356 ದಿನಗಳ ವೇತನ ರಹಿತ ರಜೆ

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಹಿಂಬರಹ ಸಂಖ್ಯೆ : ಅಪಜೀ 127 ಆಂಆಸ 09, ದಿನಾಂಕ 25-11-2009 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ವಡಗಾವ ಬಸವರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, (ಸೇವೆಗಳು)

ಪಿಆರ್ 336

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಅಂಕದ ಮುರಿಗೇಶ ಹುಚ್ಚಪ್ಪ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ರಾಣೆಬೆನ್ನೂರು ಅವರ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ :-

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ : ಒಇ 845 ಪಿಪಿಇ 2005, ದಿನಾಂಕ 03-01-2007
2) ನಿರ್ದೇಶಕರು, ಅಭಿಯೋಗ ಇಲಾಖೆ ಇವರ ಪತ್ರ ಸಂಖ್ಯೆ : ಡಿಪಿಎನ್.ಸಿಶಾ 1.122/2008-09, ದಿನಾಂಕ 02-09-2009

ಪ್ರಸ್ತಾವನೆ :

ಶ್ರೀ ಅಂಕದ ಮುರಿಗೇಶ ಹುಚ್ಚಪ್ಪ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ರಾಣೆಬೆನ್ನೂರು, ಇವರು ಮೇಲೆ (1) ರಲ್ಲಿ ಓದಲಾದ ದಿನಾಂಕ 03-01-2007ರ ಅಧಿಸೂಚನೆಯ ಹೆಚ್ಚುವರಿ ಪಟ್ಟಿಯ ಕ್ರ.ಸಂ. 1ರಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇಮಕಗೊಂಡು ದಿನಾಂಕ 10-01-2007ರ ಪೂರ್ವಾಹ್ನದಿಂದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಸದರಿ ಅಧಿಕಾರಿಯು ಎರಡು ವರ್ಷಗಳ ಪರಿವೀಕ್ಷಣಾ ಅವಧಿಯನ್ನು ನಿಯಮಾನುಸಾರ ದಿನಾಂಕ 09-01-2009 ರಂದು ಪೂರೈಸಿರುತ್ತಾರೆ. ಸದರಿ ಅಧಿಕಾರಿಯವರು ಸದರಿ ಹುದ್ದೆಗೆ ನಿಗಧಿ ಪಡಿಸಿರುವ ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್ ಮತ್ತು ಜನರಲ್ ಲಾ ಭಾಗ-1 ಪತ್ರಿಕೆ-2ರಲ್ಲಿ ಉತ್ತೀರ್ಣರಾದ ಬಗ್ಗೆ ಪರೀಕ್ಷಾ ಫಲಿತಾಂಶವನ್ನು ದಿನಾಂಕ 6-11-2008ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಅಭ್ಯಸಿಸಿರುವ ಕಾರಣ, ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದಕ್ಕೆ ವಿನಾಯಿತಿ ನೀಡಲಾಗಿದೆ.

ಸದರಿ ಅಧಿಕಾರಿಯವರಿಗೆ ಸಂಬಂಧಪಟ್ಟಂತೆ ಜನವರಿ 2007 ರಿಂದ ಏಪ್ರಿಲ್ 2007, 2007-08 ಮತ್ತು 2008-09ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ಸದರಿ ಅಧಿಕಾರಿಯವರ ವಿರುದ್ಧ ಯಾವುದೇ ವ್ಯತಿರಿಕ್ತ ಷರಾ ಇರುವುದಿಲ್ಲ. ಪರಿವೀಕ್ಷಣಾ ಅವಧಿಯಲ್ಲಿ ಯಾವುದೇ ವೇತನ ರಹಿತ ರಜೆಯನ್ನು ಪಡೆದಿರುವುದಿಲ್ಲ ಹಾಗೂ ಇಲಾಖಾ ಅವಕೃಪೆಗೆ ಒಳಗಾಗಿರುವುದಿಲ್ಲ. ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆಯನ್ನು ಹೂಡಿರುವುದಿಲ್ಲ ಮತ್ತು ಸಧ್ಯದ ಪರಿಸ್ಥಿತಿಯಲ್ಲಿ ಹೂಡುವ ಅವಶ್ಯಕತೆಯು ಇರುವುದಿಲ್ಲ.

ಆದುದರಿಂದ ಶ್ರೀ ಅಂಕದ ಮುರಿಗೇಶ ಹುಚ್ಚಪ್ಪ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ರಾಣೆಬೆನ್ನೂರು ಇವರ ಪರಿವೀಕ್ಷಣಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1)(ಎ)ರ ಅನುಸಾರ ದಿನಾಂಕ 10-01-2009 ರಿಂದ ತೃಪ್ತಿಕರವಾಗಿ ಪೂರೈಸುತ್ತಾರೆಂದು ಘೋಷಿಸುವಂತೆ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರು ಮೇಲೆ ಓದಲಾದ (2)ರ ಪತ್ರ ದಿನಾಂಕ 02-09-2009ರಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 396 ಪಿಪಿಇ 2009, ದಿನಾಂಕ 29ನೇ ಜನವರಿ, 2010

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕರ್ನಾಟಕ ನಾಗರೀಕ ಸೇವೆಗಳ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1)(ಎ)ರ ಅನುಸಾರ ಶ್ರೀ ಅಂಕದ ಮುರಿಗೇಶ ಹುಚ್ಚಪ್ಪ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೆಬೆನ್ನೂರು ಇವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ 10-01-2009 ರಿಂದ ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಸರ್ಕಾರವು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸಿ. ಸಿದ್ದಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗ)

ಪಿಆರ್ 337

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಅನಿಲ್ ಕುಮಾರ್ ಆರ್.ತೊರವಿ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ್ ಅವರ ಪರಿವೀಕ್ಷಣಾ ಅವಧಿಯನ್ನು, ವಿಸ್ತರಿಸಿ ತೃಪ್ತಿಕರವೆಂದು ಘೋಷಿಸುವ ಬಗ್ಗೆ :-

ಉಲ್ಲೇಖ :
1) ಸರ್ಕಾರದ ಆದೇಶ ಸಂಖ್ಯೆ : ಒಇ 193 ಪಿಪಿಇ 2003, ದಿನಾಂಕ 06-05-2004
2) ಕರ್ತವ್ಯಕ್ಕೆ ಹಾಜರಾಗಲು ಕಾಲಮಿತಿ ವಿಸ್ತರಣೆಯ ಸರ್ಕಾರದ ಆದೇಶ ಸಂ.ಒ.ಇ. 375 ಪಿಪಿಇ 2006, ದಿನಾಂಕ 27-11-2006.
3) ನಿರ್ದೇಶಕರು, ಅಭಿಯೋಗ ಇಲಾಖೆ ಇವರ ಪತ್ರ ಸಂಖ್ಯೆ : ಡಿಪಿಎನ್.ಸಿಶಾ/1/122/2008-09, ದಿನಾಂಕ 05-09-2009.

ಪ್ರಸ್ತಾವನೆ :

ಶ್ರೀ ಅನಿಲ್ ಕುಮಾರ್ ಆರ್. ತೊರವಿ ಇವರು ಮೇಲೆ ಓದಲಾದ (1) ರ ಅಧಿಸೂಚನೆ ದಿನಾಂಕ 06-05-2004ರ ಕ್ರಮ ಸಂ. 23ರ ಅನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಮೂಲಕ ಆಯ್ಕೆಯಾಗಿರುತ್ತಾರೆ. ಮೇಲೆ ಓದಲಾದ (2)ರ ಅಧಿಸೂಚನೆ ದಿನಾಂಕ 27-11-2006ರಲ್ಲಿ ಅವರು ಕರ್ತವ್ಯಕ್ಕೆ ಹಾಜರಾಗಲು ಕಾಲಮಿತಿ ವಿಸ್ತರಣೆಯನ್ನು ದಿನಾಂಕ 30-11-2006ರವರೆಗೆ ವಿಸ್ತರಿಸಲಾಗಿದೆ. ಸದರಿ ಅಧಿಕಾರಿಯವರು ದಿನಾಂಕ 29-11-2006ರ ಪೂರ್ವಾಹ್ನ ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಿದ್ಧಾಪುರ ಇಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಸದರಿ ಅಧಿಕಾರಿಯು ಎರಡು ವರ್ಷಗಳ ಪರಿವೀಕ್ಷಣಾ ಅವಧಿಯನ್ನು ನಿಯಮಾನುಸಾರ ದಿನಾಂಕ 28-11-2008ರಂದು ಪೂರೈಸಬೇಕಾಗಿದ್ದು. ಈ ಇಲಾಖೆಗೆ ಸೇವೆಗೆ ಸೇರುವ ಪೂರ್ವದಲ್ಲಿ ಅಬಕಾರಿ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸಿದ್ದು ಅಲ್ಲಿಯೇ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನಿಗಧಿಪಡಿಸಿದ ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್ ಮತ್ತು ಜನರಲ್ ಲಾ ಭಾಗ-1 ಪತ್ರಿಕೆ-2ರಲ್ಲಿ ಉತ್ತೀರ್ಣರಾದ ಬಗ್ಗೆ ಪರೀಕ್ಷಾ ಫಲಿತಾಂಶವನ್ನು ದಿನಾಂಕ 28-04-2005ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಅಭ್ಯಸಿಸಿರುವ ಕಾರಣ, ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದಕ್ಕೆ ವಿನಾಯಿತಿ ನೀಡಲಾಗಿದೆ.

ಸದರಿ ಅಧಿಕಾರಿಯವರಿಗೆ ಸಂಬಂಧಪಟ್ಟಂತೆ 2006-07, 2007-08 ಮತ್ತು 2008-09ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ಸದರಿ ಅಧಿಕಾರಿಯವರ ವಿರುದ್ಧ ಯಾವುದೇ ವ್ಯತಿರಿಕ್ತ ಷರಾ ಇರುವುದಿಲ್ಲ. ಪರಿವೀಕ್ಷಣಾ ಅವಧಿಯಲ್ಲಿ 02 ದಿನಗಳ ಅಸಾಧಾರಣ ರಜೆಯನ್ನು ಪಡೆದಿರುತ್ತಾರೆ ಹಾಗೂ ಇಲಾಖಾ ಅವಕೃಪೆಗೆ ಒಳಗಾಗಿರುವುದಿಲ್ಲ. ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆಯನ್ನು ಹೂಡಿರುವುದಿಲ್ಲ ಮತ್ತು ಸಧ್ಯದ ಪರಿಸ್ಥಿತಿಯಲ್ಲಿ ಹೂಡುವ ಅವಶ್ಯಕತೆಯು ಇರುವುದಿಲ್ಲ.

ಆದುದರಿಂದ ಶ್ರೀ ಅನಿಲ್ ಕುಮಾರ್, ಆರ್. ತೊರವಿ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ್ ಇವರ ಪರಿವೀಕ್ಷಣಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 4ರ ಉಪನಿಯಮ 1(i)ರ ಪ್ರಕಾರ ದಿನಾಂಕ 29-11-2008 ರಿಂದ 30-11-2008ರವರೆಗೆ

ವಿಸ್ತರಿಸಿ, ಸದರಿ ನಿಯಮಾವಳಿಯ ನಿಯಮ 5(1)(ಎ)ರ ಅನುಸಾರ ದಿನಾಂಕ 01-12-2008 ರಿಂದ ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವಂತೆ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರು ಮೇಲೆ ಓದಲಾದ (3)ರ ಪತ್ರ ದಿನಾಂಕ 05-09-2009ರಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 401 ಪಿಪಿಇ 2009, ದಿನಾಂಕ 29ನೇ ಜನವರಿ, 2010

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕರ್ನಾಟಕ ನಾಗರೀಕ ಸೇವೆಗಳ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 4ರ ಉಪನಿಯಮ 1(i) ರ ಪ್ರಕಾರ ದಿನಾಂಕ 29-11-2008 ರಿಂದ 30-11-2008 ರವರೆಗೆ ವಿಸ್ತರಿಸಿ, ಸದರಿ ನಿಯಮಾವಳಿಯ ನಿಯಮ 5(1)(ಎ)ರ ಅನುಸಾರ ಶ್ರೀ ಅನಿಲ್ ಕುಮಾರ್ ಆರ್. ತೊರವಿ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮುಧೋಳ್ ಇವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ 01-12-2008ರಿಂದ ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಸರ್ಕಾರವು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಕೆ. ಸಿ. ಸಿದ್ದಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗ)

ಪಿಆರ್ 338

ಕಂದಾಯ ಸಚಿವಾಲಯ

ವಿಷಯ : ಶ್ರೀ ಎ. ವಿ. ನಾಡಗೌಡ, ಹಿಂದಿನ ತಹಶೀಲ್ದಾರ್, ಮುದ್ದೇಬಿಹಾಳ್ ಹಾಗೂ ಶ್ರೀ ಎಂ. ಪಿ. ಚವ್ಹಾಣ್, ಹಿಂದಿನ ತಹಶೀಲ್ದಾರ್, ಮುದ್ದೇಬಿಹಾಳ್ ಇವರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸುವ ಬಗ್ಗೆ :-

ಓದಲಾಗಿದೆ :
1) ಬಿಜಾಪುರ ಜಿಲ್ಲಾಧಿಕಾರಿಗಳ ಪತ್ರ ಸಂ. ಆರ್‌ಬಿ/ಇಎಸ್‌ಟಿ/3/ಸಿಆರ್/40/04-05, ದಿನಾಂಕ 16-05-2005.
2) ದಿನಾಂಕ 05-01-2006ರ ಕಾರಣ ಕೇಳುವ ನೋಟೀಸ್ ಸಂ. ಆರ್‌ಡಿ 42 ಎಡಿಇ 2006
3) ಆಪಾದಿತ ನೌಕರರು ಕಾರಣ ಕೇಳುವ ನೋಟೀಸಿಗೆ ನೀಡಿದ ಲಿಖಿತ ಸಮಜಾಯಿಷಿ ಹೇಳಿಕೆ :
   a) ಶ್ರೀ ಎಂ. ಪಿ. ಚವ್ಹಾಣ್, ದಿನಾಂಕ 30-01-2006
   b) ಎ. ವಿ. ನಾಡಗೌಡ, ದಿನಾಂಕ 15-03-2006
4) ಸರ್ಕಾರದ ಆದೇಶ ಸಂ. ಆರ್‌ಡಿ 42 ಎಡಿಇ 2005, ದಿನಾಂಕ 20-07-2006
5) ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ ಅವರ ಪತ್ರ ಸಂ. ಸಿಬ್ಬಂದಿ : 3 ಸಿಆರ್/40/2004-05, ದಿನಾಂಕ 12-05-2007.
6) ಸರ್ಕಾರದ ಪತ್ರ ಸಂ. ಆರ್‌ಡಿ 42 ಎಡಿಎ 2005, ದಿನಾಂಕ 11-05-2009

ಪ್ರಸ್ತಾವನೆ :

ಬಿಜಾಪುರ ಜಿಲ್ಲೆ, ಮುದ್ದೇಬಿಹಾಳ್ ತಾಲ್ಲೂಕಿನ ನ್ಯಾಯಾಲಯ ಪ್ರಕರಣ ಸಂ.: ಸಿ.ಹೆಚ್.ಎಸ್.ಆರ್. 44/03-04ರಲ್ಲಿ ದಿನಾಂಕ 09-03-2004ರಂದು ನ್ಯಾಯ ನಡವಳಿಕೆಯನ್ನು ಪ್ರಾರಂಭಿಸಿ 9 ಜನ ಪಕ್ಷಗಾರರಿಗೆ ನೋಟೀಸ್ ನೀಡುವಾಗ ಯಾವುದೇ ನಿಯಮಗಳನ್ನು ಪಾಲಿಸದೇ ಹಾಗೂ ಎಫ್.ಐ.ಆರ್. ಮೇಲೆ ದಿನಾಂಕ ಹಾಗೂ ಸಮಯ ನಮೂದಿಸದೇ ನಿಯಮದ ವಿರುದ್ಧವಾಗಿ ಪ್ರಕರಣವನ್ನು ಪ್ರಾರಂಭಿಸಿ, ಮುಂದುವರೆಸಿ ಕರ್ತವ್ಯ ಲೋಪ ಎಸಗಿರುವ ಕಾರ್ಯ ನಿರ್ವಾಹಕ ದಂಡಾಧಿಕಾರಿಗಳ ಈ ಲೋಪದ ಬಗ್ಗೆ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಿಜಾಪುರ ಅವರ ಕಾರ್ಯಾಲಯದ ಪ್ರಕರಣ ಸಂ. ಸಿ.ಆರ್.ಪಿ. 58/2004 ರಲ್ಲಿ ದಿನಾಂಕ 18-11-2004 ರಂದು ಹೊರಡಿಸಿದ ಆದೇಶದಲ್ಲಿ ಗಂಭೀರವಾಗಿ ಪರಿಗಣಿಸಿ, ಸದರಿ ಕಾರ್ಯ ನಿರ್ವಾಹಕ ದಂಡಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿರ್ಧರಿಸಿರುತ್ತಾರೆಂದು ಹಾಗೂ ಕೈಗೊಂಡ ಕ್ರಮದ ಬಗ್ಗೆ ನ್ಯಾಯಾಲಯಕ್ಕೆ ವರದಿ ಮಾಡಲು ಸೂಚಿಸಿದರೆಂದು ಈ ಕರ್ತವ್ಯ ಲೋಪ ಎಸಗಿದ ಕಾರಣಕ್ಕಾಗಿ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸುವಂತೆ ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ದಿನಾಂಕ 16-05-2005ರ ಪತ್ರದಲ್ಲಿ ಬಿಜಾಪುರ ಜಿಲ್ಲಾಧಿಕಾರಿಗಳು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಶ್ರೀ ಎಂ. ಪಿ. ಚವ್ಹಾಣ್, ಹಿಂದಿನ ತಹಶೀಲ್ದಾರ್, ಮುದ್ದೇಬಿಹಾಳ್

ಶ್ರೀ ಎ. ವಿ. ನಾಡಗೌಡ, ಹಿಂದಿನ ತಹಶೀಲ್ದಾರ್, ಮುದ್ದೇಬಿಹಾಳ್ ತಾಲ್ಲೂಕು

ಸದರಿ ಅಧಿಕಾರಿಗಳ ವಿರುದ್ಧ ದೋಷಾರೋಪಣ ಪಟ್ಟಿಗಳನ್ನು ಅನುಬಂಧ-1 ರಿಂದ 4 ರವರೆಗೆ ಮೇಲೆ ಕ್ರ.ಸಂ. (2) ರಲ್ಲಿ ಓದಲಾದ ದಿನಾಂಕ 05-01-2006ರ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿಗೊಳಿಸಿ, ಆ ಬಗ್ಗೆ ಅವರುಗಳ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು, ಅದಕ್ಕೆ ಉತ್ತರವಾಗಿ ಮೇಲೆ ಕ್ರ.ಸಂ. (3)ರ ದಿನಾಂಕ 30-01-2006ರ ಮತ್ತು 15-03-2006ರಲ್ಲಿ ಕ್ರಮವಾಗಿ ಶ್ರೀ ಎಂ. ಪಿ. ಚವ್ಹಾಣ್, ಶ್ರೀ ಎ. ವಿ. ನಾಡಗೌಡ ಅವರುಗಳು ಲಿಖಿತ ಸಮಜಾಯಿಷಿ ಹೇಳಿಕೆಯನ್ನು ಸಲ್ಲಿಸಿ, ತಮ್ಮ ಆರೋಪಗಳನ್ನು ನಿರಾಕರಿಸಿದ್ದು, ಒಪ್ಪಿಕೊಂಡಿರುವುದಿಲ್ಲ ಹಾಗೂ ತಮ್ಮನ್ನು ಆರೋಪ ಮುಕ್ತರನ್ನಾಗಿಸಲು ಕೋರಿರುತ್ತಾರೆ.

ಆಪಾದಿತರು ಸಲ್ಲಿಸಿರುವ ಲಿಖಿತ ಉತ್ತರಗಳನ್ನು ಪರಿಶೀಲಿಸಲಾಗಿ, ಒಪ್ಪಲು ಸಮರ್ಪಕ ಅಂಶಗಳಿರುವುದಿಲ್ಲ ಮತ್ತು ಅವರುಗಳು ಆರೋಪಿತ ದುರ್ನಡತೆಗಳನ್ನು ಎಸಗಿದ್ದಾರೆಂದು ದಾಖಲೆಗಳಿಂದ ಮೇಲ್ನೋಟಕ್ಕೆ ಬಂದಿರುತ್ತದೆ. ಆದ್ದರಿಂದ ಅವರ ವಿರುದ್ಧ ಹೊರಡಿಸಲಾದ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಜಂಟಿ ಇಲಾಖಾ ವಿಚಾರಣೆ ಜರುಗಿಸಲು ತೀರ್ಮಾನಿಸಿ ಮೇಲೆ ಕ್ರ.ಸಂ. (4)ರಲ್ಲಿ ಓದಲಾದ ದಿನಾಂಕ 20-07-2006ರ ಆದೇಶದಲ್ಲಿ ಶ್ರೀ ಎಸ್. ಎನ್. ಧಾರವಾಡಕರ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ನಂ. 1, ಸೆಕ್ಟರ್ 33, ಓಲ್ಡ್ ಡಿ.ಸಿ. ರೆಸಿಡೆನ್ಸಿ, ನವನಗರ, ಬಾಗಲಕೋಟೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿ ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು ಬಿಜಾಪುರ ಜಿಲ್ಲಾಧಿಕಾರಿಗಳ ಕಛೇರಿಯ ಕೇಂದ್ರಸ್ಥಾನಿಕ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ಶ್ರೀ ಎಸ್. ಎನ್. ಧಾರವಾಡಕರ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರು ಪ್ರಸ್ತುತ ಬಾಗಲಕೋಟೆ ಜಿಲ್ಲೆಯಲ್ಲಿ ಇರುವುದಿಲ್ಲವೆಂದು ತಿಳಿದು ಬಂದಿರುತ್ತದೆಂದು ಬೇರೊಬ್ಬ ವಿಚಾರಣಾಧಿಕಾರಿಗಳನ್ನು ನೇಮಿಸುವಂತೆ ಮೇಲೆ ಓದಲಾದ ಕ್ರ. ಸಂ. (5)ರ ದಿನಾಂಕ 12-05-2007ರ ಪತ್ರದಲ್ಲಿ ಬಾಗಲಕೋಟೆ ಜಿಲ್ಲಾಧಿಕಾರಿಗಳು ಸರ್ಕಾರವನ್ನು ಕೋರಿರುತ್ತಾರೆ.

ಶ್ರೀ ಎಸ್. ಎನ್. ಧಾರವಾಡಕರ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಇವರಿಗೆ ವಿಚಾರಣೆ ಜರುಗಿಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಒದಗಿಸುವಂತೆ ಮೇಲೆ ಓದಲಾದ ಕ್ರ.ಸಂ. (6)ರ ದಿನಾಂಕ 11-05-2009ರ ಪತ್ರದಲ್ಲಿ ಕೋರಲಾಗಿತ್ತು. ಸದರಿಯವರಿಗೆ ಕಳುಹಿಸಿದ ಪತ್ರವು No such addressee ಎಂದು ಅಂಚೆ ಮೂಲಕ ವಾಪಸ್ಸು ಆಗಿರುತ್ತದೆ.

ಸರ್ಕಾರವು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಪ್ರಕರಣದಲ್ಲಿ ನೇಮಿಸಿರುವ ವಿಚಾರಣಾಧಿಕಾರಿಯನ್ನು ಬದಲಿಸಿ, ಬೇರೊಬ್ಬ ವಿಚಾರಣಾಧಿಕಾರಿಯನ್ನು ನೇಮಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 42 ಎಟಿಇ 2005, ಬೆಂಗಳೂರು, ದಿನಾಂಕ 27-01-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂ. ಆರ್‌ಡಿ 42 ಎಟಿಇ 2005, ದಿನಾಂಕ 20-07-2006 ರಲ್ಲಿ ಶ್ರೀ ಎ. ವಿ. ನಾಡಗೌಡ, ಹಿಂದಿನ ತಹಶೀಲ್ದಾರ್ ಮತ್ತು ಶ್ರೀ ಎಂ. ಪಿ. ಚವ್ಹಾಣ್, ಹಿಂದಿನ ತಹಶೀಲ್ದಾರ್, ಮುದ್ದೇಬಿಹಾಳ್ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 13ರಡಿಯಲ್ಲಿ ಶ್ರೀ ಎಸ್. ಎನ್. ಧಾರವಾಡಕಾರ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುವುದನ್ನು ಮಾರ್ಪಡಿಸಿ, ಶ್ರೀ ಎನ್. ಎಸ್. ಪಾಟೀಲ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಬಸವ ನಿಲಯ, ಬರೀಬ್ ಬವಡಿ ಹತ್ತಿರ, ಅಕ್ಕಮಹಾದೇವಿ ಬೈಲೈನ್, ಬಿಜಾಪುರ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ ಹಾಗೂ ತಹಶೀಲ್ದಾರ್, ಮುದ್ದೇಬಿಹಾಳ್ ತಾಲ್ಲೂಕು ಇವರನ್ನು ಪ್ರಕರಣದ ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ. ಉಳಿದಂತೆ ದಿನಾಂಕ 20-7-2006ರ ಆದೇಶದಲ್ಲಿರುವ ಸೂಚನೆಗಳು ಅನ್ವಯವಾಗುತ್ತವೆ. ವಿಚಾರಣಾಧಿಕಾರಿಗಳು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು 1957ರ ನಿಯಮ 11 ಮತ್ತು 11 ಎ ರಲ್ಲಿನ ವಿಧಿ ವಿಧಾನಗಳನ್ನು ಅನುಸರಿಸಿ ಇಲಾಖಾ ವಿಚಾರಣೆ ಜರುಗಿಸಿ ವಿಚಾರಣಾ ವರದಿಯನ್ನು 2 ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಸ್. ಬಿ. ಸಸಾಲಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಪಿಆರ್ 339

ಕಂದಾಯ ಸಚಿವಾಲಯ

ವಿಷಯ : ಶ್ರೀ ಜಿ. ಪ್ರಭಾಕರರೆಡ್ಡಿ, ತಹಸೀಲ್ದಾರ್, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರಿಗೆ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ :-

ಓದಲಾಗಿದೆ : 1) ಜಿಲ್ಲಾಧಿಕಾರಿಗಳು ತುಮಕೂರು ಜಿಲ್ಲೆ, ತುಮಕೂರು ಇವರ ಪತ್ರ ಸಂಖ್ಯೆ : ಸಿಬ್ಬಂದಿ (1) ವಿವ/69/09-10, ದಿನಾಂಕ 29-12-2009.

2) ಶ್ರೀಯುತರ ಮನವಿ ದಿನಾಂಕ 10-8-2009

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ದಿನಾಂಕ 29-12-2009ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರು ಶ್ರೀ ಜಿ. ಪ್ರಭಾಕರರೆಡ್ಡಿ, ತಹಸೀಲ್ದಾರ್, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರ ಸ್ವಯಂ ನಿವೃತ್ತಿ ಕುರಿತಂತೆ ಅವರು ತಮ್ಮ ಸೇವಾ ಅವಧಿಯಲ್ಲಿ ಸೇವೆ ಸಲ್ಲಿಸಿದ ಎಲ್ಲಾ ಕಾರ್ಯಾಲಯಗಳಿಂದ ಬೇಬಾಕಿ ಪತ್ರಗಳನ್ನು ಪಡೆದು, ಅವುಗಳ ಪರಿಶೀಲನೆಯಿಂದ ಶ್ರೀಯುತರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಆಗಲೀ ಮತ್ತು ಹೂಡುವ ಸಂಭವ ಇಲ್ಲವೆಂದು ದೃಢಪಟ್ಟಿರುತ್ತದೆ ಎಂದು ಹಾಗೂ ಸದರಿಯವರಿಂದ ಸರ್ಕಾರಕ್ಕೆ ಸಂದಾಯವಾಗತಕ್ಕ ಯಾವುದೇ ಆರ್ಥಿಕ ಬಾಕಿ ಇರುವುದಿಲ್ಲವೆಂದು ತಿಳಿಸುತ್ತಾ, ಮೇಲೆ ಓದಲಾದ ಕ್ರಮ ಸಂಖ್ಯೆ : (2) ರಲ್ಲಿನ ಶ್ರೀ ಜಿ. ಪ್ರಭಾಕರರೆಡ್ಡಿ, ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರ ಮನವಿಯಲ್ಲಿನ ಕೋರಿಕೆಯಂತೆ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಬಹುದೆಂದು ವರದಿಯಲ್ಲಿ ತಿಳಿಸಿರುತ್ತಾರೆ. ಅದರಂತೆ ಸರ್ಕಾರವು ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ಶ್ರೀ ಜಿ. ಪ್ರಭಾಕರರೆಡ್ಡಿ, ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲವೆಂದು ಹಾಗೂ ಹೂಡಲು ಉದ್ದೇಶಿಸಿಲ್ಲವೆಂದು ಮತ್ತು ಶ್ರೀಯುತರಿಂದ ಸರ್ಕಾರಕ್ಕೆ ಯಾವುದೇ ಬಾಕಿ ಬರಬೇಕಾಗಿಲ್ಲವೆಂದು ದೃಢೀಕರಿಸಿಕೊಂಡು ಶ್ರೀಯುತರಿಗೆ ದಿನಾಂಕ 30-01-2010 ರಂದು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 285(1)(ಎ) ಪ್ರಕಾರ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಂಇ 549 ಎಎಸ್‌ಡಿ 2009, ಬೆಂಗಳೂರು, ದಿನಾಂಕ 28-01-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಜಿ. ಪ್ರಭಾಕರರೆಡ್ಡಿ, ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರ ಕೋರಿಕೆಯಂತೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 285(1)(ಎ) ಪ್ರಕಾರ ದಿನಾಂಕ 30-01-2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ. ಎಸ್. ದೇಸಾಯಿ)
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು ಮತ್ತು ವಿ.ನಿ.)

ಪಿಆರ್ 340

ಇಂಧನ ಸಚಿವಾಲಯ

ವಿಷಯ : ಮೆ : ಆರ್.ಆರ್.ಬಿ. ಎನರ್ಜಿ ಲಿಮಿಟೆಡ್ ಇವರಿಗೆ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಬಗ್ಗೆ.

ಓದಲಾಗಿದೆ: 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08 ಆರ್.ಆರ್.ಬಿ./2009/915, ದಿನಾಂಕ 18/21-2-2009.

2. ದಿನಾಂಕ 23-10-2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಆರ್.ಆರ್.ಬಿ. ಎನರ್ಜಿ ಲಿಮಿಟೆಡ್ ಇವರಿಗೆ ಬೆಳಗಾಂ ಜಿಲ್ಲೆಯಲ್ಲಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಮೆ:: ಆರ್.ಆರ್.ಬಿ. ಎನರ್ಜಿ ಲಿಮಿಟೆಡ್ ಇವರಿಗೆ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್

ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 92 ಎನ್‌ಸಿಇ 2008, ಬೆಂಗಳೂರು, ದಿನಾಂಕ: 29-1-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೆ: ಆರ್.ಆರ್.ಬಿ. ಎನರ್ಜಿ ಲಿಮಿಟೆಡ್ ಇವರಿಗೆ ಬೆಳಗಾಂ ಜಿಲ್ಲೆಯಲ್ಲಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗೆ ವಿವರಿಸಿರುವಂತೆ ಈ ಆದೇಶದಲ್ಲಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ :-

Topo sheet No.	Proposed capacity MW	Near by villages of the proposed area and district	Geographical area description of the project
48I/13	5MW	Nuganhatti, Hulikere, Murgod,Subapur Belgaum District	Proposed area is a complex terrain located on the S-E of Murgod town. Further, it is described as fairly dense scrub with reserve forest status. The area is held in the following Geographical co-ordinates : Latitude : $15^0$53'34"-$15^0$56'21"N Longitude : $74^0$56'7"-$75^0$0'0"E Ridge peaks : 687.4,761 & 814m Amsl

1. ಸದರಿ ಯೋಜನೆಯನ್ನು Financial closure ಸಾಧಿಸಿದ 24 ತಿಂಗಳುಗಳ ಒಳಗಾಗಿ ಪ್ರಾರಂಭ ಮಾಡತಕ್ಕದ್ದು.
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳೊಳಗಾಗಿ ಯೋಜನಾಭಿವೃದ್ಧಿದಾರರು ರೂ. 400ರ ಛಾಪಾ ಕಾಗದದಲ್ಲಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.
3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗ ಸೂಚಿಗಳಿಗನುಗುಣವಾಗಿ ಮೈಕ್ರೊ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂದನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್ ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್‌ಗಳ ಸಂಖ್ಯೆ
> 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
> 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
> 500 ಕಿ.ವ್ಯಾ. ನಿಂದ 750 ಕಿ.ವ್ಯಾ	12	1
> 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.

6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು.

7. ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ/ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ನೀತಿ ನಿಯಮಗಳಿಗನುಗುಣವಾಗಿ ವೀಲಿಂಗ್ ಮತ್ತು ಬ್ಯಾಂಕಿಂಗ್/ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಸಲಾಗಿದೆ.

8. ಕಾಲ ಕಾಲಕ್ಕೆ ಇರುವ ನೀತಿ ನಿಯಮಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

9. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವಂತೆ ವಿನಂತಿಸಲಾಗಿದೆ.

10. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.

11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 354

(ಎಸ್.ಜಿ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ: ಅಕ್ಷಯ ಹೈಡ್ರೊ ಪವರ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ : ಕೆಆರ್ಇಡಿ/06/ಜಡ್ಕಲ್/ಎಂಹೆಚ್ಎಸ್/09/1390, ದಿನಾಂಕ : 19/28-3-2009 ಮತ್ತು ಸಂಖ್ಯೆ : ಕೆಆರ್ಇಡಿ/06/ ಜಡ್ಕಲ್/2009/3079, ದಿನಾಂಕ : 16/19-9-2009.

2. ದಿನಾಂಕ : 23-10-2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಅಕ್ಷಯ ಹೈಡ್ರೊ ಪವರ್ ಇವರಿಗೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಜಡ್ಕಲ್ ಗ್ರಾಮದ ಬಳಿ ಕನ್ನಿ ತೊರೆಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ನಡವಳಿಯ ಪ್ರಕಾರ ದಿನಾಂಕ 23-10-2009 ರಂದು ಜರುಗಿದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು ಮೆ: ಅಕ್ಷಯ ಹೈಡ್ರೊ ಪವರ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 295 ಎನ್‌ಸಿಇ 2009, ಬೆಂಗಳೂರು, ದಿನಾಂಕ: 29-01-2010.

ಮೆ: ಅಕ್ಷಯ ಹೈಡ್ರೋ ಪವರ್ ಇವರಿಗೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಜಡ್ಕಲ್ ಗ್ರಾಮದ ಬಳಿ ಕಬ್ಬಿ ತೊರೆಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು (Weir Latitude : 13°47'01" Longitude : 75°50'50" Power House-Latitude: 13°23'27" Longitude : 74°50'00") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ.

1. (ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

45	3336	Patagondi. A.Y	01-04-1950	27-01-2001	"
46	3360	Krishnappa Poojari	10-08-1947	27-01-2001	"
47	3363	Chikkonda. N.Y	01-06-1948	27-01-2001	"
48	3365	Jamadhar. H.R	01-03-1945	27-01-2001	"
49	3372	Patil.C.P	12-10-1946	27-01-2001	"
50	3376	Naganoori. A.G	12-12-1946	27-01-2001	"
51	3377	Joshi.V.S	04-05-1950	27-01-2001	"
52	3378	Bilagi. P.B	01-05-1950	27-01-2001	"
53	3380	Yardakeri. V.R	01-07-1950	27-01-2001	"
54	3384	Vardarajan	08-01-1944	27-01-2001	"
55	3398	Jaikumar. S	08-12-1946	27-01-2001	"
56	3420	Sajjanshettar.C.B	01-06-1949	27-01-2001	"
57	3423	Kittur. S.B	10-11-1948	27-01-2001	"
58	3424	Chandrashekar Mudadkar	11-03-1949	27-01-2001	"
59	3425	Vijayarao. R	20-05-1949	27-01-2001	"
60	3426	Guntakalle. S.C	31-05-1949	27-01-2001	"
61	3427	Koppad. M.H	01-06-1949	27-01-2001	"
62	3428	Chipkar. P.V	01-06-1949	27-01-2001	"
63	3429	Shukla.V.R	26-08-1948	27-01-2001	"
64	3430	Rani.S.V	13-04-1949	27-01-2001	"
65	3435	Kulkarni. M.R	10-10-1949	27-01-2001	"
66	3436	Krishnappa. M.	10-04-1950	27-01-2001	"
67	3437	Ramaiah. T.P	12-05-1950	27-01-2001	"
68	3453	Narayanaswamy. V	01-01-1949	27-01-2001	"

Sl. No.	Sl. No. feeder Cadre	Name of Tahsildar	Date of Birth	Qualifying Date	Remarks
1	2	3	4	5	6
69	3465	Reddy. R.M	29-05-1950	27-01-2001	"
70	3467	Jagati Shivakumar	01-07-1950	27-01-2001	"
71	3485	Rozi.N.M	15-02-1950	19-08-2002	"
72	3540	Vijayakumar Jacob	02-10-1947	19-08-2002	"
73	3545	Vishwanath. H.V	07-05-1946	19-08-2002	"
74	3548	Lakshmipathi Reddy. M.V	10-10-1945	19-08-2002	"
75	3563	Basappa. H.C	05-01-1947	19-08-2002	"
76	3564	Doddachannegowda. M	08-06-1948	19-08-2002	"
77	3571	Anilvas Manuel	06-12-1948	19-08-2002	"
78	3572	Nagabhushan Shastri	01-01-1950	19-08-2002	"
79	3577	Shankunthala. K.N	15-05-1949	19-08-2002	"
80	3578	Thulasi. P.P	15-04-1949	19-08-2002	"
81	3580	Md. Sadik	18-04-1950	19-08-2002	"
82	3582	Lakshminarayanappa	10-01-1950	19-08-2002	"
83	3583	Mohan. R.L	15-08-1948	19-08-2002	"
84	3584	Rudreshwaraiah. H.N	14-04-1949	19-08-2002	"
85	3586	Jayalaxmi. K.R	08-04-1946	19-08-2002	"
86	3587	Indira. H.N	01-08-1947	19-08-2002	"
87	3588	Kumaraswamy. H.G	02-01-1947	19-08-2002	"
88	3589	Marappa Gowda. D.C	01-04-1948	19-08-2002	"
89	3590	Nagaraj. G.H	06-05-1948	19-08-2002	"
90	3591	Krishnegowda. B.T	21-05-1948	19-08-2002	"
91	3592	Janaardhan. S	28-04-1947	19-08-2002	"
92	3594	Seethalakshmamma	05-01-1950	19-08-2002	"
93	3595	Gayathri. S.N	15-01-1950	19-08-2002	"
94	3596	Lakkegowda. T	07-01-1946	19-08-2002	"
95	3597	Nagaiah Reddy. M.S	10-05-1949	19-08-2002	"
96	3600	Subbarao. M.N	02-03-1945	19-08-2002	"

Sl. No.	Sl. No. feeder Cadre	Name of Tahsildar	Date of Birth	Qualifying Date	Remarks
1	2	3	4	5	6
97	3605	Krishnamurthy. G.V	16-10-1948	19-08-2002	"
98	3606	Srikantaswamy	14-10-1948	19-08-2002	"
99	3607	Somaiah. K.P	30-10-1948	19-08-2002	"
100	3608	Subramanya.K	30-05-1949	19-08-2002	"
101	3609	Neenakumari. A	21-08-1948	19-08-2002	"
102	3611	Vijayalaxmi. I.M	19-07-1949	19-08-2002	"
103	3612	Jagannath. M.B	07-06-1949	19-08-2002	"
104	3614	Manjachar. G.S	07-10-1949	19-08-2002	"
105	3637	Dhale.S.S(SC)	01-06-1949	19-08-2002	"
106	3638	Chincholi.S.L (SC)	01-06-1947	19-08-2002	"
107	3650	Gheevari. S.T	17-01-1948	19-08-2002	"
108	3651	Trivikrama Rao. M.L	15-05-1949	19-08-2002	"
109	3652	Patil. R.A	01-06-1949	19-08-2002	"
110	3653	Kulkarni. M.R	21-01-1949	19-08-2002	"
111	3655	Ramachandra. K.B	09-02-1950	19-08-2002	"
112	3656	Prakashan. C	28-01-1950	19-08-2002	"
113	3658	Patil.S.K	06-03-1950	19-08-2002	"
114	3674	Muthappa. N.P	22-10-1945	19-08-2002	"
115	3675	Srishaila. B.D	18-02-1948	19-08-2002	"
116	3701	Vamane. K.A	25-04-1948	19-08-2002	"
117	3702	Javeregowda. H	12-09-1947	19-08-2002	"
118	3703	Bangaramamma (SC)	04-09-1949	19-08-2002	"
119	3707	Md. G.M. Bhagavan	02-06-1948	19-08-2002	"
120	3708	Gangadhar. M.B	10-05-1945	19-08-2002	"
121	3709	Talwar. B.G	05-12-1948	19-08-2002	"
122	3712	Gundakalle. A.S	01-06-1948	19-08-2002	"
123	3713	Fernandis. M.B	06-11-1947	19-08-2002	"
124	3714	Kamble. C.S	06-03-1946	19-08-2002	"

Sl. No.	Sl. No. feeder Cadre	Name of Tahsildar	Date of Birth	Qualifying Date	Remarks
1	2	3	4	5	6
125	3715	Chinnareddy. P.V	10-04-1948	19-08-2002	"
126	3716	Kalagi.R.J	01-05-1948	19-08-2002	"
127	3717	Shanthinarayana Nayak	01-06-1947	19-08-2002	"
128	3719	Devendra. N	13-02-1945	19-08-2002	"
129	3720	Ramalingappa	03-08-1945	19-08-2002	"
130	3721	Dadachannappasanraj	01-09-1945	19-08-2002	"
131	3722	Ramappa. P	15-02-1945	19-08-2002	"
132	3723	Swamy. H.C	14-03-1946	19-08-2002	"
133	3724	Haleshappa. B	16-12-1946	19-08-2002	"
134	3727	Nadagowdar. N.B	05-06-1947	19-08-2002	"
135	3728	Chandrashekharappa. D.B	06-04-1947	19-08-2002	"
136	3729	Rathnaiah Shetty. V	13-11-1945	19-08-2002	"
137	3730	Jayanna	02-03-1948	19-08-2002	"
138	3731	Sarasu. R	06-06-1946	19-08-2002	"
139	3815	Kadaiah (SC)	22-12-1949	31-12-2002	"
140	4058	Kamble. V.P (SC)	21-06-1949	31-12-2002	"
141	4193	Chowhan. D.B (SC)	12-04-1947	31-12-2002	"
142	4431	Sangamesh. R.Y(SC)	01-06-1950	31-12-2002	"

S.B. Sasalatti
Under Secretary to Govt
Revenue Department (Services-3)

PR-340

DEPARTMENT OF COMMERCIAL TAXES

OFFICE OF THE COMMISSIONER OF COMMERCIAL TAXES IN KARNATAKA, VTK, GANDHINAGAR, BANGALORE

NOTIFICATION

No.KSA.CR.165/09-10, Bangalore, Dated:22nd February, 2010

In exercise of the powers under sub-section (1) of Section 18-A of the Karnataka Value Added Tax Act, 2003, it is specified with effect from the 1st day of March, 2010, that a dealer registered under the said Act, who is a developer of any special economic zone or a unit located in any special economic zone in the State, shall deduct tax at source as specified under the said Section in respect of goods purchased by him from another dealer registered under the said Act and on which he is liable for refund or deduction of tax paid under sub-section (2) of Section 20 of the said Act.

PRADEEP SINGH KHAROLA
Commissioner of Commercial Taxes
(Karnataka), Bangalore.

PR-371

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ವೀರಾಜಪೇಟೆ ವಿಭಾಗ, ವೀರಾಜಪೇಟೆಯವರ ನ್ಯಾಯಾಲಯ

ಪ್ರಕಟಣೆ

ಸಂಖ್ಯೆ: ಎಲ್‌ಎನ್‌ಡಿ:ಟಿಎಸ್‌ಎ:ಕೇಸ್ ನಂ.8/2007-08, ದಿನಾಂಕ:26ನೇ ಫೆಬ್ರವರಿ, 2010

ವಿಷಯ: ಅರಣ್ಯ ಅಪರಾಧದಲ್ಲಿ ಜಪ್ತಿ ಮಾಡಲಾದ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ.

ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯಲ್ಲಿ ತೊಡಗಿದ್ದ ಈ ಕೆಳಕಂಡ ವಾಹನವನ್ನು ಪೊಲೀಸ್ ವೃತ್ತ ನಿರೀಕ್ಷಕರು, ಮಡಿಕೇರಿ ನಗರ ವೃತ್ತ, ಕೊಡಗು ಜಿಲ್ಲೆ, ರವರು ದಿನಾಂಕ:14.01.2008ರಂದು ಜಪ್ತಿ ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಾಯ್ದೆ 71(ಎ) ಪ್ರಕಾರ ಕ್ರಮ ಕೈಗೊಳ್ಳಲು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ವೀರಾಜಪೇಟೆ ಇವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ವಾಹನ ಹಾಗೂ ಸ್ವತ್ತಿನ ವಿವರಗಳು ಈ ಕೆಳಕಂಡಂತಿವೆ:

1. ಕೇಸ್ ನಂ.8/2007-08: ಪೊಲೀಸ್ ವೃತ್ತ ನಿರೀಕ್ಷಕರು, ಮಡಿಕೇರಿ ನಗರ ವೃತ್ತ.

1) ವಾಹನ ಸಂಖ್ಯೆ: ಸ್ವರಾಜ್ ಮಜ್ದಾ ಮಿನಿ ಲಾರಿ ಸಂಖ್ಯೆ: ಕೆಎ-12-2515

2) ಇಂಜೀನ್ ಸಂಖ್ಯೆ: SLC 6 A 26575

3) ಚಾಸೀಸ್ ಸಂಖ್ಯೆ: A 96 ZGL 4G MDO 34148

4) ಸ್ವತ್ತು : ಬೀಟೆ ಮರದ ತುಂಡು 3 ಸಂಖ್ಯೆ.

ಮೇಲ್ಕಂಡ ವಾಹನವನ್ನು ಹಾಗೂ ಸ್ವತ್ತುಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಾಯ್ದೆ 71ಎ ಪ್ರಕಾರ ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದಕ್ಕೆ ತಕರಾರು ಇದ್ದಲ್ಲಿ ಸಂಬಂಧಪಟ್ಟವರು ವಾಹನ ಮತ್ತು ಸ್ವತ್ತಿನ ಮೂಲ ದಾಖಲಾತಿಗಳ ಜೊತೆ ವಿವರಣೆಯನ್ನು ಈ ಪ್ರಕಟಣೆ ದಿನಾಂಕದಿಂದ 30 ದಿನಗಳಲ್ಲಿ ಈ ಕೆಳಗೆ ಸಹಿ ಮಾಡಿರುವವರಿಗೆ ಖುದ್ದಾಗಿ ಅಥವಾ ಅವರ ನ್ಯಾಯಾವಾದಿಗಳ ಮುಖಾಂತರ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ, ಸದರಿ ವಾಹನ ಮತ್ತು ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ದಿನಾಂಕ:06.03.2008ರಂದು ಪ್ರಕಟಣೆ ಹೊರಡಿಸಲಾಗಿತ್ತು. ಸದರಿ ಪ್ರಕಟಣೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಭಾಗ-6ಎ ಪುಟ 1011 ದಿನಾಂಕ:03.04.2008ರಂದು ಪ್ರಕಟವಾಗಿರುತ್ತದೆ. ಹಾಗೂ ರಾಷ್ಟ್ರಬಂಧು ದಿನ ಪತ್ರಿಕೆಯಲ್ಲಿ ದಿನಾಂಕ:04.03.2008ರಂದು ಪ್ರಕಟವಾಗಿರುತ್ತದೆ. ಶ್ರೀ ಎಸ್. ರಾಜೀವ್, ಡೆಪ್ಯೂಟಿ ಮೇನೇಜರ್, ಶ್ರೀರಾಮ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂ.ಲಿ., ಚೆನ್ನೈರವರು ದಿನಾಂಕ:19.04.2008ರಂದು ಅರ್ಜಿ ಸಲ್ಲಿಸಿ ಲಾರಿ ನೊಂದಣಿ ಸಂಖ್ಯೆ ಕೆಎ-12-2515 ನ್ನು ಸದ್ರಿಯವರ ಸಂಸ್ಥೆಯಿಂದ ಸಾಲದ ಆಧಾರದಲ್ಲಿ ಶ್ರೀ ಅಬ್ದುಲ್ ಅಜೀಜ್, ನೆಲ್ಲಿಹುದಿಕೇರಿ, ಕೊಡಗು ಜಿಲ್ಲೆ, ರವರಿಗೆ ನೀಡಿದ್ದು, ಸಾಲದ ಮೊತ್ತವನ್ನು ಪಾವತಿಸಿರುವುದಿಲ್ಲ. ಸದ್ರಿ ಸಂಸ್ಥೆಗೆ ಸೇರಿದ ವಾಹನವಾದುದರಿಂದ, ಸಂಸ್ಥೆಯ ಸ್ವಾಧೀನಕ್ಕೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ. ಸದ್ರಿ ಸಂಸ್ಥೆಯ ಪರವಾಗಿ ವಕೀಲರು ದಿನಾಂಕ:14.08.2008ರಂದು ಹಾಜರಾಗಿರುತ್ತಾರೆ. ಪ್ರಕರಣದ ವಿಚಾರಣೆಯನ್ನು ದಿನಾಂಕ:04.09.2008, 23.10.2008, 13.11.2008, 27.11.2008, 26.02.2009, 13.03.2009, 02.04.2009, 24.09.2009, 21.10.2009, 25.11.2009, 18.12.2009 ಹಾಗೂ 28.01.2010 ರಂದು ನಡೆಸಲಾಯಿತು. ಆದರೆ, ವಾಹನದ ಮಾಲೀಕರು ಅಥವಾ ಅವರ ವಕೀಲರು ವಿಚಾರಣೆಗೆ ಹಾಜರಾಗಿರುವುದಿಲ್ಲ. ಆದುದರಿಂದ, ವಾಹನವನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಾಯ್ದೆ 71ಎ ಪ್ರಕಾರ ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದಕ್ಕೆ ತಕರಾರು ಇದ್ದಲ್ಲಿ ಸಂಬಂಧಪಟ್ಟವರು ವಾಹನದ ಮೂಲ ದಾಖಲಾತಿಗಳ ಜೊತೆ ವಿವರಣೆಯನ್ನು ಈ ಪ್ರಕಟಣೆ ದಿನಾಂಕದಿಂದ 30 ದಿನಗಳಲ್ಲಿ ಈ ಕೆಳಗೆ ಸಹಿ ಮಾಡಿರುವವರಿಗೆ ಖುದ್ದಾಗಿ ಅಥವಾ ಅವರ ನ್ಯಾಯವಾದಿಗಳ ಮುಖಾಂತರ ಸಲ್ಲಿಸುವುದು ತಪ್ಪಿದ್ದಲ್ಲಿ ಸದರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದು.

ಪಿ.ಆರ್.351

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಸಂರಕ್ಷಣಾಧಿಕಾರಿ, ವೀರಾಜಪೇಟೆ ವಿಭಾಗ,
ವೀರಾಜಪೇಟೆ.

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ, ಗಾಂಧಿನಗರ, ಬೆಂಗಳೂರು

ಅಧಿಸೂಚನೆ

ಸಂಖ್ಯೆ: ಕೆಎಸ್.ಎ.ಸಿಆರ್.228/2008-09, ದಿನಾಂಕ:31ನೇ ಡಿಸೆಂಬರ್, 2009

2005ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ನಿಯಮಾವಳಿಯ ನಿಯಮ 157ರ ಉಪ ನಿಯಮ (2-ಎ)ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 2010ರ ಜನವರಿ ಒಂದನೇ ದಿನದಿಂದ ಜಾರಿಯಾಗುವಂತೆ ಈ ಮೂಲಕ

ಅಧಿಸೂಚಿಸುವುದೇನೆಂದರೆ, 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದಡಿ ನೋಂದಾಯಿತರಾದಂತಹ ಯಾವ ವ್ಯಾಪಾರಿಯು ಸರಕು ಸಾಗಾಣಿಕೆಗೆ ನಮೂನೆ ವ್ಯಾಟ್ 505 ಅಥವಾ ನಮೂನೆ ವ್ಯಾಟ್ 515ರಲ್ಲಿಯ ರವಾನೆ ಚೀಟಿಯನ್ನು ಹೊಂದಲು ಬಾಧ್ಯನಾಗಿರುತ್ತಾನೊ ಅಂತಹ ವ್ಯಾಪಾರಿಯು ಆ ಸರಕು ಸಾಗಾಣಿಕೆಗೆ ನಮೂನೆ ವ್ಯಾಟ್ 505ರ ರವಾನೆ ಚೀಟಿಯನ್ನು ವಿದ್ಯುನ್ಮಾನ ವಿಧಾನದಲ್ಲಿ ಕೆಳಗಿನ ಕ್ರಮದಂತೆ ಪಡೆಯಬಹುದು:

1) ಅಂತಹ ಪ್ರತಿಯೊಬ್ಬ ವ್ಯಾಪಾರಿಯು http:/vat.kar.nic.in ಜಾಲತಾಣ (website)ಕ್ಕೆ ಸಂಪರ್ಕ ಹೊಂದುವುದು.

2) ವ್ಯಾಪಾರಿಯು ಕ್ಷೇತ್ರ ವ್ಯಾಪ್ತಿಯಿರುವ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪಮೌಲ್ಯ ವರ್ಧಿತ ಅಧಿಕಾರಿಯು ಒದಗಿಸಿದ "ಬಳಕೆದಾರನ ಹೆಸರು" ('user name') ಮತ್ತು "ಸಂಕೇತ ಪದ" ('password') ಗಳನ್ನು ಉಪಯೋಗಿಸಿ ಜಾಲತಾಣದಲ್ಲಿರುವ ಸೂಚನೆಗಳನ್ವಯ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಯನ್ನು ಪಡೆಯತಕ್ಕದ್ದು.

3) ವಿದ್ಯುನ್ಮಾನ ವಿಧಾನದಲ್ಲಿ ಪಡೆದ ಪ್ರತಿ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಯು ಒಂದು ವಿಶಿಷ್ಟ ಸಂಖ್ಯೆಯನ್ನು ಹೊಂದಿರುತ್ತದೆ. ಸರಕುಗಳನ್ನು ಯಾವ ಸ್ಥಳದಿಂದ ಸಾಗಾಣಿಕೆ ಮಾಡಬೇಕಾಗಿದೆಯೋ ಆ ಸ್ಥಳದಲ್ಲಿ ಅಂತರ್ಜಾಲ/ ಗಣಕಯಂತ್ರ ಲಭ್ಯವಿಲ್ಲದ ಕಾರಣದಿಂದಾಗಿ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಗಳನ್ನು ಪಡೆಯುವುದು ಸಾಧ್ಯವಿಲ್ಲದಿದ್ದಲ್ಲಿ, ಆಗಲೂ ಸಹ ಅಂತರ್ಜಾಲ ಅಥವಾ ಗಣಕಯಂತ್ರ ಸೌಲಭ್ಯವಿರುವ ಸ್ಥಳದಿಂದ http:/vat.kar.nic.in ಜಾಲತಾಣದ ಸಂಪರ್ಕ ಹೊಂದಿ ನಿಗದಿತ ವಿವರಗಳನ್ನು ಭರ್ತಿ ಮಾಡಿ ವಿಶಿಷ್ಟ ಸಂಖ್ಯೆಯನ್ನು ಹೊಂದಿರುವ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಯನ್ನು ಪಡೆಯತಕ್ಕದ್ದು. ಈ ವಿಶಿಷ್ಟ ಸಂಖ್ಯೆಯನ್ನು ಸರಕುಗಳನ್ನು ತುಂಬಿಸುವ ಸ್ಥಳಕ್ಕೆ ತಿಳಿಸಿ ಸ್ವ-ಮುದ್ರಿತ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಯ ಉಪಯೋಗ ಮಾಡಬಹುದು. ಆದರೆ ಸ್ವ-ಮುದ್ರಿತ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಯ ಮೇಲೆ ಈ ವಿಶಿಷ್ಟ ಸಂಖ್ಯೆಯನ್ನು ಸ್ಪಷ್ಟ ಹಾಗೂ ಸ್ಫುಟವಾಗಿ ನಮೂದಿಸತಕ್ಕದ್ದು.

4) ಅಂತಹ ವ್ಯಾಪಾರಿಗೆ "ಬಳಕೆದಾರನ ಹೆಸರು" ಮತ್ತು "ಸಂಕೇತ ಪದ"ಗಳು ಕ್ಷೇತ್ರ ವ್ಯಾಪ್ತಿಯಿರುವ ಸ್ಥಳೀಯ ಮೌಲ್ಯ ವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯ ವರ್ಧಿತ ತೆರಿಗೆ ಅಧಿಕಾರಿಗಳಿಂದ ತಲುಪದೇ ಇದ್ದಲ್ಲಿ ಆ ವ್ಯಾಪಾರಿಯು ಸ್ಥಳೀಯ ಮೌಲ್ಯ ವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯ ವರ್ಧಿತ ತೆರಿಗೆ ಅಧಿಕಾರಿಯಿಂದ ಅವುಗಳನ್ನು ಪಡೆಯತಕ್ಕದ್ದು.

5) ಯಾವುದೇ ಅಂತಹ ವ್ಯಾಪಾರಿ ಯಾವುದೇ ಅವಧಿಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ನೀಡಿದ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಯ ವಿವರಗಳನ್ನು ಜಾಲ ತಾಣ: http:/vat.kar.nic.in ದ ಮುಖ್ಯ ಪರದೆಯ "ವರದಿ ಮತ್ತು ಸಹಾಯ" ಎಂಬ ಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಸೌಲಭ್ಯದ ಮೂಲಕ ವೀಕ್ಷಿಸಬಹುದು. ಅನಧಿಕೃತ ವ್ಯಕ್ತಿಗಳಿಂದ ವಿದ್ಯುನ್ಮಾನ ವಿಧಾನದಲ್ಲಿ ನೀಡಲ್ಪಡುವ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಗಳ ದುರುಪಯೋಗವಾಗುವುದನ್ನು ತಡೆಗಟ್ಟಲು, ವ್ಯಾಪಾರಿಯು ತಾನು ನೀಡಿದ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಗಳ ವರದಿಯನ್ನು ಅದರ ಯಥಾರ್ಥತೆಯ ಮತ್ತು ಸರಿಯಾಗಿರುವಿಕೆಯನ್ನು ಖಚಿತಪಡಿಸಿಕೊಳ್ಳಲು ಆಗಿಂದಾಗ್ಗೆ ಪರಿಶೀಲಿಸತಕ್ಕದ್ದು. ಒಂದು ವೇಳೆ ತನ್ನ ಲೆಕ್ಕದಲ್ಲಿ ತಾನು ನೀಡದ ಯಾವುದೇ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿ ನಮೂದಾಗಿರುವುದನ್ನು ಗಮನಿಸಿದಲ್ಲಿ ಅಂತಹ ವ್ಯಾಪಾರಿಯು ತನ್ನ "ಸಂಕೇತ ಪದ" ವನ್ನು ಕೂಡಲೇ ಬದಲಾಯಿಸಿಕೊಳ್ಳತಕ್ಕದ್ದು ಮತ್ತು ಯಾವುದೇ ಕಾರಣದಿಂದಾಗಿ "ಸಂಕೇತ ಪದ" ವನ್ನು ಬದಲಾಯಿಸಿಕೊಳ್ಳುವುದು ಸಾಧ್ಯವಾಗದಿದ್ದಲ್ಲಿ ಈ ವಿಷಯವನ್ನು ಕ್ಷೇತ್ರ ವ್ಯಾಪ್ತಿಯಿರುವ ಸ್ಥಳೀಯ ಮೌಲ್ಯ ವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪಮೌಲ್ಯ ವರ್ಧಿತ ತೆರಿಗೆ ಅಧಿಕಾರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು. ಮುಂದುವರೆದು, ಅಂತಹ ವ್ಯಾಪಾರಿಯು ತಾನು ನೀಡಿಲ್ಲವೆಂದು ಹೇಳಿಕೊಳ್ಳುವಂತಹ ನಮೂನೆ ವ್ಯಾಟ್ 505ರಲ್ಲಿಯ ರವಾನೆ ಚೀಟಿಯ ವಿವರಗಳನ್ನು ಕೂಡ ಕ್ಷೇತ್ರ ವ್ಯಾಪ್ತಿಯಿರುವ ಸ್ಥಳೀಯ ಮೌಲ್ಯ ವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪಮೌಲ್ಯ ವರ್ಧಿತ ತೆರಿಗೆ ಅಧಿಕಾರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು.

ವಿವರಣೆ: ವಿದ್ಯುನ್ಮಾನ ವಿಧಾನದಲ್ಲಿ ಈಗಾಗಲೇ ನಮೂನೆ ವ್ಯಾಟ್ 505ನಲ್ಲಿಯ ರವಾನೆ ಚೀಟಿಗಳನ್ನು ಪಡೆಯುತ್ತಿರುವಂತಹ ವ್ಯಾಪಾರಿಗಳಿಗೆ ಈ ಅಧಿಸೂಚನೆ ಅನ್ವಯವಾಗುವುದಿಲ್ಲ.

ಪ್ರದೀಪ್ ಸಿಂಗ್ ಖರೋಲ
ವಾಣಿಜ್ಯ ತೆರಿಗೆಗಳ ಆಯುಕ್ತರು (ಕ),
ಬೆಂಗಳೂರು.

DEPARTMENT OF COMMERCIAL TAXES

Office of the Commissioner of Commercial Taxes (Karnataka), Gandhinagar, Bangalore

NOTIFICATION

No.KSA.CR.228/2008-09, Bangalore, Dated:31st December, 2009

In exercise of the powers conferred under sub-rule (2-A) of Rule 157 of the Karnataka Value Added Tax Rules, 2005, it is hereby notified that every dealer registered under the Karnataka Value Added Tax Act, 2003 and who is required to carry a delivery note in Form VAT 505 or Form VAT 515 for transporting goods, may obtain a delivery note in Form VAT 505 for such transportation of goods, electronically from 1st day of January, 2010 in the following manner:

i. Every such dealer shall log on to the website:http://vat.kar.nic.in/.

ii. Using the user name and password communicated to him by the jurisdictional Local VAT Officer (LVO) or VAT Sub Officer (VSO), he shall proceed to obtain the delivery note following the instructions contained in the website.

iii. Each such delivery note would have an automatically generated unique number. In case the dealer is unable to generate the delivery note in Form VAT 505 electronically in the place of loading of goods, due to non availability of internet or computer facility he may still log on to the website://vat.kar.nic.in/, at a place where such internet or computer facility is available, feed the required details and then obtain the delivery note bearing the unique number. This unique number could then be communicated to the place of loading and a self printed delivery note in Form VAT 505 may be used. However, the unique number obtained shall be written on self printed delivery note in Form VAT 505 in clear legible way.

iv. Every such dealer shall obtain his user name and password from the jurisdictional LVO or VSO, if it is not communicated to him by the LVO or VSO.

v. Every such dealer can view the report of all the delivery notes in Form VAT 505 issued by him during any given period for which a facility is provided on the website: http://vat.kar.nic.in/, in the main menu under the heading "Reports and Help". In order to ensure that the electronic issue of delivery note in Form VAT 505 is not misused by any unauthorized persons, the dealer shall verify regularly such report of issue of delivery notes in Form VAT 505 to ascertain its genuineness and correctness. In case a dealer finds that any delivery note in Form VAT 505 recorded in his account is not issued by him, he should immediately change his password and for any reason he is unable to change the password he should report this fact to the jurisdictional LVO or VSO in writing. Further, such dealer shall also inform the jurisdictional LVO or VSO within three days from the date of issue of such delivery notes which he claims to be not issued by him.

Explanation: Dealers who are already required to obtain delivery note in Form VAT 505 electronically would not be covered by this notification.

PR-67

PRADEEP SINGH KHAROLA
Commissioner of Commercial Taxes
in Karnataka, Bangalore.

PROCEEDINGS OF THE COMMISSIONER OF COMMERCIAL TAXES (KARNATAKA), BANGALORE

Present: Sri Pradeep Singh Kharola, IAS,
Commissioner of Commercial Taxes.

Sub: KVAT Act, 2003- Section 59(4)- Issue of clarification on eligibility of input tax deduction in respect of fertilizers and chemicals-reg.

Read: (1) This office order No.CLR.CR.83/2009-10, Dated:17.09.2009.

(2) Letter No.CH/VAT/1/37/2009-10 of M/s Diwan Bahadur S.L. Mathias & Sons Dated:29.10.2009.

Preamble:

The applicant M/s Diwan Bahadur S.L. Mathias & Sons, Post Box No.31, Christian Colony, Barlane Road, Chikmagalur-577101 is a partnership firm owning a tea estate, engaged in cultivation of tea plants and harvesting of green tea leaves and manufacturing tea in its tea factory. It is a dealer registered under the KVAT Act with TIN 29760004638. It had made an application under Section 59(4) of the KVAT Act, 2003 vide its letter Dated:31.07.2009, explaining the nature of its activities and requesting for issuing clarification that it is entitled to claim input tax deduction from 01.04.2005 onwards on purchase of chemicals and fertilizers used for growing tea leaves which are thereafter used in the manufacture of tea meant for sale.

2. After hearing the applicant in the matter and after examining the relevant provisions of the KVAT Act, 2003 and relying on the decision of the Hon'ble Supreme Court in the case of Travancore Tea Estates Co. Ltd Vs State of Kerala, reported in 39 STC 1, an order Dated:17.09.2009 was passed rejecting the request of the applicant for issue of clarification that it is entitled to claim input tax deduction on purchase of chemicals and fertilizers used for growing tea crop out of the output tax payable on sale of manufactured tea.

3. The dealer has made another application vide its letter dated:29.10.2009 submitting several arguments and requesting to re-examine the clarification issued earlier and to issue a fresh clarification indicating that the applicant is entitled to claim input tax set off from 01.04.2005 on purchase of manures, chemicals, fertilizers used for growing tea plants whose greeen leaves are subsequently used in the commercial production of tea. It has been contended that the clarification issued vide order No.CLR.CR.83/09-10, Dated:17.09.2009 did not clarify the position, but the opinion expressed in the order would influence the assessing authority. With this background, the issue is taken up afresh for full hearing and giving final clarification. In the letter Dated:29.10.2009, the applicant has argued as under:-

(a) Tea growers are squarely covered under the definition of 'agriculturist' and tea is excluded from the scope of definition of 'agricultural produce or horticultural produce' under Section 2 of the KVAT Act;

(b) Tea growers are also covered under the definition of 'dealer' under the Act as seen from Explanation (4) to Section 2(12) of the KVAT Act;

(c) Tea growers are dealers because they are involved in the business life cycle of a product and also because their product is not a agricultural produce;

(d) Since the product is not an agricultural produce, tea growers are being levied VAT which is clear from Explanation (4) to Section 2(12) of the Act; and

(e) The decision of Hon'ble Supreme Court in the case of Travancore Tea Estates Co. Ltd Vs State of Kerala, reported in 39 STC 1 is not relevant because the judgment was rendered in the backdrop of CST Act and VAT is structurally a different levy.

(f) It is the understanding of the applicant that it is entitled for deduction of input tax relating to purchase of fertilizers and chemicals used for growing tea.

4. The applicant has requested this office to re-examine the matter and issue clarification indicating that it is entitled to claim input tax deduction from 01.04.2005 on purchase of manures, chemicals and fertilizers used for growing tea plants whose green leaves are subsequently used in commercial production of tea.

5. In response to the notice issued by this office, Sri Venkatramani, CA appeared before the undersigned on behalf of the applicant and he was heard. He reiterated the grounds and request made in letter Dated:29.10.2009 of the applicant. He further argued as under:

(a) The applicant purchases manures, chemicals, pesticides and fertilizers and being a dealer registered under the KVAT Act, he is entitled for input tax deduction in respect of VAT paid on these purchase. As per definition under Section 2 of the KVAT Act, 2003, tea is not considered as an agricultural or horticultural produce. Tea growers are agriculturists.

(b) The applicant does not stop at growing green tea but continues manufacturing commercial tea after processing green tea leaves in its tea factory. The whole process of growing green tea leaves and producing commercial tea is an integrated process. It is agro industry.

(c) As per the definition of the word 'input' under the KVAT Act, any goods purchased by a dealer in the course of his business for re-sale or for use in the manufacture or processing or packing or storing of other goods or any other use in the business. The goods purchased such as fertilizers and chemicals are to be considered as inputs in view of the phrase 'any other use in business'.

(d) As per Section 10 of the KVAT Act, 2003, output tax means the tax payable on any taxable sale of goods made by the dealer in the course of his business.

(e) The decision of Hon'ble Supreme Court in the case of Travancore Tea Estates Co.Ltd Vs State of Kerala, reported in 39 STC 1 applies if the applicant stops at the point of sale of green tea leaves but the applicant continues the process up to production of commercial tea.

(f) The learned CA requested to consider the grounds made in letter Dated:29.10.2009 as well as the arguments made by him and requested to issue clarification as sought in the letter Dated:29.10.2009 of the applicant.

6. The matter is re-examined in the light of the above facts. It is seen that the applicant has a tea plantation where tea plants are cultivated and green tea leaves are harvested. These green tea leaves are again processed in the factory located in the estate by the applicant producing commercial tea which is then sorted, graded, packed and sold within and outside the State of Karnataka. It is registered under the KVAT Act, 2003 and is liable to pay tax on the commercial tea under the KVAT Act.

7. The process of cultivating tea plants, harvesting green tea leaves and producing commercial tea has two components, namely, agriculture and manufacture of tea. The applicant is liable to pay agricultural income tax under the Karnataka Agricultural Income Tax Act and income tax under the Indian Income Tax Act, As per the provisions of income Tax Act 60% of the income is considered as the agricultural income and 40% is considered as the business income. Both these activities of different

nature require expenditure in order to earn the respective income. Thus, there is expenditure incurred for cultivation of tea plants and harvesting of green tea leaves as well as expenditure incurred for conversion of tea leaves into commercial tea. Similarly, different inputs are required in respect of these activities. 60% of the total income is considered as agricultural income liable to tax under the Karnataka Agricultural Income Tax Act. The expenditure incurred towards fertilizers, chemicals, pesticides and other inputs required for the activity of agriculture can be claimed as deduction under the Karnataka Agricultural Income Tax Act against the corresponding income. Similarly, expenditure incurred on manufacturing process can be claimed for deduction under Income Tax Act.

8. Value Added Tax is a tax levied on sale of goods effected by a dealer in the course of his business. Levy of VAT has nothing to do with the activity of agriculture. When a sale is effected by a dealer in the course of his business, the KVAT Act, 2003 allows deduction of tax paid on inputs purchased by a dealer in the course of his business. Since fertilizers, chemicals and pesticides are not relating to the business activity, the input tax paid on their purchases cannot be considered for deduction out of the output tax payable on the sale of commercial tea. These are inputs required for agricultural activity in the growing of tea plants and harvesting green tea leaves. The KVAT Act does not contemplate deduction of input tax which is not connected with the business activities of the dealer.

9. It is true that cultivation of tea plants falls under the definition of 'agriculture' under the KVAT Act and tea is not considered as an agricultural produce or horticultural produce as per the definition under Section 2 of the KVAT Act. The person who carries on the business of sellings tea falls under the definition of 'dealer'. As per Explanation (4) to Section 2(12) of the KVAT Act, an 'agriculturist' who sells exclusively agricultural produce grown on land cultivated by him personally is not considered to be a dealer within the definition of a 'dealer'. However, where the agriculturist is a company and is selling pepper, arecanut, cardamom, rubber, timber, wood, raw cashew or coffee grown on land cultivated by it personally falls under the definition of a 'dealer'. Thus, a person who merely grows tea plants and harvests green tea leaves does not fall under the definition of 'dealer' under the KVAT Act. On the contrary, a person who carries on the business of producing commercial tea and selling the same becomes a dealer under the Act since this is a business activity. Hence, the inputs purchased by an agriculturist for the purpose of growing tea plants and harvesting green tea leaves is not eligible for input tax deduction under the KVAT Act, 2003.

10. The definition of 'input' under Section 2 (19) of the KVAT Act does not include goods used for the purpose of agriculture. It envisages goods used in the business only. Even as per Section 10(2) of the KVAT Act, input tax means a tax collected or payable under the Act on the sale to him of any goods for use in the course of his business. Thus, the fertilizers and other goods purchased by the applicant for use in the agriculture does not fall under the definition of 'input' and tax paid there on cannot be considered as input tax for the purpose of KVAT Act. Thus, the provisions of KVAT Act itself restricts the meaning of inputs and input tax for the purpose of KVAT Act.

11. The contention of the applicant that the decision of Hon'ble Supreme Court in the case of Travancore Tea Estates Co. Ltd Vs State of Kerala, reported in 39 STC 1 is not applicable to its case is not correct. The said decision was rendered by the Supreme Court under the Central Sales Tax on facts and circumstances which are similar to the case of the applicant. Therefore, the decision squarely applies to the applicant. While holding that fertilizers and other goods are not intended for use in the

manufacturing process in respect of tea meant for sale, the Supreme Court observed as under (in Page-6):

"..............The controversy between the parties has centred round the point as to whether fertilizers and other goods mentioned in item No.(1) can be said to be goods intended for use in the manufacture or processing of tea meant for sale. So far as this question is concerned, we find that the growing and plucking of tea leaves from the plants and the processing of those leaves in the factories are parts of a continued activity. The assertion of Mr. Desai that the tea leaves would lose their value unless they are processed in the factory soon after they are plucked is not being questioned. It does not, however, follow from that the cultivation of tea plants and the growth of tea leaves is not something distinct from the manufacturing process to which tea leaves are subjected in the factories. The fact that the time lag between the plucking of tea leaves and their being subjected to manufacturing process in the factories is very little would not detract from the conclusion that the cultivation and growth of tea plants and leaves is something distinct and separate from the manufacturing process to which those leaves are subjected in the factories for turning them into tea meant for sale. Income which is realized by sale of tea by a tea company which grows tea on its land and thereafter subjects it to manufacturing process in its factory is an integrated income. Such income consists of two elements or components. One element or components consists of the agricultural income which is yielded in the form of green leaves purely by the land over which tea plants are grown. The second elements or component consists of non-agricultural income which is the result of subjecting green leaves which are plucked from the tea plants grown on the land to a particular manufacturing process in the factory of the tea company. Rule 24 of the Income Tax Rules, 1962 and rule 8 of the Income Tax Rules, 1962 prescribed the formula which should be adopted for apportioning the income realized as a result of sale of tea after it is grown and subjected to the manufacturing process in the factory. Sixty percent is taken to be agricultural income and same consists of the first element or component, while 40 percent represents non-agricultural income and the same comprises the second element or component.

Fertilizers and the other goods mentioned in item No.(1) are intended for use not in the manufacturing process in respect of tea meant for sale they are essentially needed for the cultivation and growth of tea plant and leaves. There is no direct relationship between use of fertilizers and other goods mentioned in item No.(1) and the manufacturing process in respect of tea meant for sale......"

12. The Supreme Court has held that cultivation and growth of tea plants are in the very nature of things prior to manufacturing process and do not answer to the description of manufacture and processing of tea meant for sale. What is needed for being used in an agricultural operation cannot be held to be goods required for use in a manufacturing process. The above findings of the Supreme Court apply to the case of the applicant.

13. In view of the above facts, it is seen that the applicant is not eligible for deduction of tax paid on purchase of chemicals, fertilizers, manures, pesticides, etc. used for growing tea crop from the output tax payable on sale of manufactured commercial tea. In the earlier clarification Dated:17.09.2009, the undersigned rejected the request of the applicant for issue of clarification on the grounds that the matter does not involve clarification on rate of tax on a commodity and the Commissioner is not empowered to

rify the exigibility of a transaction to tax as seen from Section 59(4) of the KVAT Act. However, such a ection of issue of clarification may not be correct as the same may lead to ambiguity in the matter sulting in different lower authorities taking different stands in the matter and passing divergent orders. ence, in the interest of administration and for the purpose of maintaining uniformity in the work of sessments and collection of revenue, it is required to issue clarification inthe matter. Accordingly, I pass e following:

ORDER NO. CLR.CR.83/2009-10, DATED:1ST MARCH, 2010

It is hereby clarified that deduction of tax paid on purchase of chemicals, fertilizers, manures, sticides, etc. used for growing tea crop from the output tax payable on sale of manufactured mmercial tea is not permissible under the provisions of the KVAT Act, 2003.

PRADEEP SINGH KHAROLA

PR-375

Commissioner of Commercial Taxes

in Karnataka, Bangalore.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ

ಬಿ3:ಅಮೊ:ವಾಹನ-06/08-09, ದಿನಾಂಕ:6ನೇ ಫೆಬ್ರವರಿ, 2010

ಉಪಸ್ಥಿತರು : ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು : ವಲಯ ಅರಣ್ಯಾಧಿಕಾರಿ,
ಸೊರಬ ವಲಯ, ಸೊರಬ.
(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಭಾದ್ಯತೆದಾರರು : ಶ್ರೀ ಗಣಪತಿ ಆಚಾರ್ ಬಿನ್ ಗೋವಿಂದಾಚಾರ್,
ಮನೆ ನಂ: 32, ಮಾಸೂರು ಗ್ರಾಮ, ಸಾಗರ ತಾ॥
(ಶ್ರೀ ಕೆ.ಹೆಚ್. ರಮೇಶ್, ವಕೀಲರು, ಸಾಗರ)

ಸ್ತಾವನೆ:

ದಿನಾಂಕ: 29-05-2008ರಂದು ಸೊರಬ ವಲಯದ ಹೊಸಬಾಳೆ ಶಾಖೆಯ ವನಪಾಲಕ ಮತ್ತು ಸಿಬ್ಬಂದಿಯವರಿಗೆ ಂದ ಖಚಿತ ವರ್ತಮಾನದ ಮೇರೆಗೆ ಸೊರಬ ತಾಲ್ಲೂಕು ಉಳುವಿ ಹೋಬಳಿ ಹೊಸಬಾಳೆ ಕೆಳಗಿನ ಬ್ರಾಹ್ಮಣ ಕೇರಿಯಿಂದ ೋಡನಕಟ್ಟೆ ಗ್ರಾಮದ ಕಡೆ ಹೋಗುವ ರಸ್ತೆ ಎಡಭಾಗದಲ್ಲಿ ಒಂದು ನಾಟಾ ತುಂಬಿದ್ದ ಕೆಎ-15-1468 ನಂಬರಿನ 407 ನಿಲಾರಿ ಕೆಟ್ಟುಹೋಗಿದ್ದು, ವಾಹನದ ಹತ್ತಿರ ಯಾರೂ ಅಸಾಮಿಗಳು ವಾಹನದ ಹತ್ತಿರ ಇರಲಿಲ್ಲ. ಈ ಬಗ್ಗೆ ಗ್ರಾಮಸ್ಥರನ್ನು ಚಾರಿಸಲಾಗಿ, ಲಾರಿ ಚಾಲಕನಾದ ಗಣಪತಿ ಆಚಾರಿ ಬಿನ್ ಗೋವಿಂದಾಚಾರಿ, ಮಾಸೂರು ಗ್ರಾಮ, ಸಾಗರ ತಾಲ್ಲೂಕು ವರು ಲಾರಿಯನ್ನು ಬಿಟ್ಟುಹೋಗಿದ್ದಾರೆಂದು ತಿಳಿಸಿದರು. ನಂತರ ಲಾರಿಯ ಬಾಡಿಯೊಳಗಿದ್ದ ನಾಟಾಗಳನ್ನು ಪರಿಶೀಲಿಸಲಾಗಿ, ಾಗುವಾನಿ ನಾಟಾ 4=01.208ಎಂ3 ಇದ್ದು, ಸದರಿ ನಾಟಾಗಳನ್ನು ಗರಗಸದಿಂದ ಕತ್ತರಿಯಿಸಿದ ತುಂಡುಗಳಾಗಿದ್ದು, ಇವುಗಳಿಗೆ ಯಾವುದೇ ಛಾಪಾದ ಗುರುತಿರಲಿಲ್ಲ. ಇದನ್ನು ಸಾಗಿಸಲು ರಹದಾರಿ ಇರಲಿಲ್ಲವಾದ್ದರಿಂದ ಇದು ಅಕ್ರಮ ಸಾಗಾಣಿಕೆ ಎಂದು ರಿಗಣಿಸಿ, ವಾಹನ ಮತ್ತು ನಾಟಾವನ್ನು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ಇಲಾಖಾ ರ ವಶಪಡಿಸಿಕೊಂಡು, ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 33, 62, 71(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 969ರ ಉಪನಿಯಮ 144, 165ರ ಪ್ರಕಾರ ಅರಣ್ಯ ಮೊಕದ್ದಮೆ ಸಂಖ್ಯೆ: 22/08-09ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಾ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ದಿನಾಂಕ:18-06-2008ರಂದು ದೇಶವಾಗಿದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ಸಾರಿಗೆ ಅಧಿಕಾರಿ, ಸಾಗರ ಇವರಿಗೆ ಈ ನ್ಯಾಯಾಲಯದ ಪತ್ರ ಸಂಖ್ಯೆ: ಬಿ3:ಅಮೊ:ವಾಹನ-06/08-09 ದಿನಾಂಕ:04-07-2008 ರಂದು ಪತ್ರ ಬರೆದು ಕೋರಲಾಗಿತ್ತು. ಅದರಂತೆ ಈ ವಾಹನದ ಬಿ ಪ್ರತಿಯನ್ನು ಸಾರಿಗೆ ಅಧಿಕಾರಿ, ಸಾಗರ ಇವರು ಪತ್ರ ಸಂಖ್ಯೆ: ಸಪ್ರಾಸಾಅ:ಸಾಗರ:ಕೆಎ-15-1468/08-09 ದಿನಾಂಕ:11-07-2008ನ್ನು ದಿನಾಂಕ:16-07-2008ರಂದು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಆರ್.ಸಿ. ಮಾಲೀಕರಾದ ಶ್ರೀ ಗಣಪತಿ ಆಚಾರಿ ಬಿನ್ ಗೋವಿಂದಾಚಾರಿ, ಮನೆ ನಂ: 32, ಮಾಸೂರು ಗ್ರಾಮ, ಸಾಗರ ತಾ॥ ಇವರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1)ರ ಪ್ರಕಾರ 30 ದಿನಗಳ ಕಾಲಾವಕಾಶ ನೀಡಿ ವಾಹನ ಮತ್ತು ನಾಟಾಗಳನ್ನು ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎನ್ನುವುದಕ್ಕೆ ಸಮಜಾಯಿಷಿ ಸಲ್ಲಿಸಲು ದಿನಾಂಕ: 25-07-2008ರಂದು ನೊಂದಣಿ ಅಂಚೆ ಮೂಲಕ ನೋಟಿಸ್ ಜಾರಿ ಮಾಡಲಾಗಿತ್ತು. ಆರ್.ಸಿ. ಮಾಲಿಕರು ವಕೀಲರ ಮುಖಾಂತರ ಕ್ಲೈಮ್ ಅರ್ಜಿಯನ್ನು ದಿನಾಂಕ:08-08-2008ರಂದು ಈ ನ್ಯಾಯಾಲಯಕ್ಕೆ ಸಲ್ಲಿಸಿ, ಈ ವಾಹನವನ್ನು ಮಧ್ಯಂತರ ಅವಧಿಗೆ ಬಿಡುಗಡೆ ಮಾಡಲು ಕೋರಿರುತ್ತಾರೆ. ಇವರ ವಾಹನ ಮಧ್ಯಂತರ ಅವಧಿಗೆ ಬಿಡುಗಡೆಗೆ ಕೋರಿದ ಅರ್ಜಿಯನ್ನು ದಿನಾಂಕ:24-01-2009ರಂದು ತಿರಸ್ಕರಿಸಿ ಆದೇಶವಾಗಿದೆ.

ನಂತರ ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಚಂದ್ರಪ್ಪ ಬೋಗಾವಿ, ವನಪಾಲಕ, ಸೊರಬ ವಲಯ ಇವರನ್ನು ದಿನಾಂಕ:30-05-2009 ರಂದು ಈ ನ್ಯಾಯಾಲಯಕ್ಕೆ ಕರೆಸಿ, ಸಹಾಯಕ ಸರ್ಕಾರಿ ಅಭಿಯೋಜಕರಿಂದ ಮುಖ್ಯ ವಿಚಾರಣೆ – 2003 ರಿಂದ 2007 ರವರೆಗೆ ಹೊಸಬಾಳೆ ಶಾಖೆಯಲ್ಲಿ ವನಪಾಲಕರಾಗಿ ಕೆಲಸ ನಿರ್ವಹಿಸಿದ್ದೆ. ಬ್ರಾಹ್ಮಣ ಕೇರಿಯಲ್ಲಿ 407 ಕೆಎ-15-1468 ನಿಂತಿದ್ದು, ಅದರಲ್ಲಿ 4 ಹುನಾಲು ನಾಟಾ ಇತ್ತು. ಲಾರಿಯಲ್ಲಿ ಯಾರೂ ಇರಲಿಲ್ಲ. ತುಂಡಿನ ಮೇಲೆ ಇಲಾಖಾ ಛಾಪಾವಿರಲಿಲ್ಲ. ಅಕ್ರಮ ಸಾಗಾಣಿಕೆ ಎಂದು ಕಂಡುಬಂದಿತು. ಅಲ್ಲಿನ ಗ್ರಾಮಸ್ಥರನ್ನು ವಿಚಾರಿಸಿದಾಗ ಅವರ ಮಾಲಿಕ ಗಣಪತಿ ಆಚಾರಿ ಆಗಿದ್ದು, ವಾಹನ ಅಲ್ಲಿ ಬಿಟ್ಟುಹೋಗಿದ್ದಾರೆ. ನಂತರ ವಾಹನವನ್ನು ಟ್ರ್ಯಾಕ್ಟರ್‌ಗೆ ಕಟ್ಟಿ ಕಛೇರಿಗೆ ಸಾಗಿಸಲಾಯಿತು. ಈ ಬಗ್ಗೆ ನಾನು ಪ್ರಥಮ ವರ್ತಮಾನ ವರದಿ ದಾಖಲಿಸಿದ್ದೇನೆ. ಮಾಲಿನ ಬಗ್ಗೆ ಜಪ್ತು ವರದಿ ತಯಾರಿಸಿದೆ. ಆ ದಿನ ಮಾಡಿದ ಮಹಜರನ್ನು ನಿಶಾನೆ ಪಿ1 ಎಂದು, ಅದರಲ್ಲಿ ನನ್ನ ಸಹಿ ಪಿ1ಎ ಎಂದು, ಪ್ರಥಮ ವರ್ತಮಾನ ವರದಿಯನ್ನು ಪಿ2 ಎಂದು, ಅದರಲ್ಲಿ ನನ್ನ ಸಹಿಯನ್ನು ಪಿ2(ಎ) ಮತ್ತು ಜಪ್ತು ವರದಿಯನ್ನ ಪಿ3 ಎಂದು, ಅದರಲ್ಲಿ ನನ್ನ ಸಹಿಯನ್ನು ಪಿ3(ಎ) ಎಂದು ಗುರುತಿಸಿದೆ. ಮತ್ತು ಮರದ ಬುಡವು ಉಮಟೆಕೊಪ್ಪ ಎಂಎಫ್‌ನಲ್ಲಿದ್ದ ಬಗ್ಗೆ ಮಹಜರನ್ನು ಪಿ4 ಎಂದು, ಅದರ ಸಹಿಯನ್ನು ಪಿ4 ಎ ಎಂದು ಮತ್ತು ಈ ವಾಹನವನ್ನು ಬೇರೆ ವಾಹನದಲ್ಲಿ ಕಟ್ಟಿ ಸಾಗಿಸಿದ ಬಗ್ಗೆ ನಡೆಸಿದ ಮಹಜರನ್ನು ಪಿ5 ಎಂದು, ಅದರಲ್ಲಿನ ನನ್ನ ಸಹಿಯನ್ನು ಪಿ5ಎ ಎಂದು ಗುರುತಿಸಿದೆ. ಸದರಿ ವಾಹನವನ್ನು ಸರ್ಕಾರಿ ಉಮಟಗದ್ದೆ ಅರಣ್ಯ ಪ್ರದೇಶದಿಂದ ಹುನಾಲು ಮರವನ್ನು ಕಡಿದು ಸಾಗಿಸಲು ಉಪಯೋಗಿಸಿದ್ದರಿಂದ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಪಾಟಿ ಸವಾಲಿಗೆ ದಿನಾಂಕ:30-05-09, 25-07-09ರಂದು ಸಮಯ ನೀಡಿದೆ. ಆದರೆ ಡಿಫೆನ್ಸ್ ಕಡೆ ವಕೀಲರು ಗೈರು ಹಾಜರಾಗಿದ್ದು, ಪಾಟಿ ಸವಾಲು ಮಾಡಲು ಡಿಫೆನ್ಸ್ ಕಡೆಯವರಿಗೆ ಆಸಕ್ತಿ ಇಲ್ಲವೆಂದು ಪರಿಗಣಿಸಿದೆ.

ಡಿಫೆನ್ಸ್ ಕಡೆ ಹೇಳಿಕೆ ಪಡೆಯಲು ದಿನಾಂಕ:26-09-09, 19-12-09, 16-01-2010ರಂದು 3 ಬಾರಿ ಕಾಲಾವಕಾಸ ನೀಡಿದ್ದು, ಡಿಫೆನ್ಸ್ ಕಡೆಯವರು ಯಾರೂ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ. ಆದ್ದರಿಂದ ಡಿಫೆನ್ಸ್ ಸಾಕ್ಷಿ ಹೇಳಿಕೆ ನೀಡಲು ಆಸಕ್ತಿ ಇಲ್ಲವೆಂದು ಪರಿಗಣಿಸಿ ಮುಂದಿನ ಹಂತಕ್ಕೆ ದಿನಾಂಕ ನಿಗದಿಪಡಿಸಿದೆ.

ಅಂತಿಮ ವಾದಕ್ಕೆ ಡಿಫೆನ್ಸ್ ಕಡೆಯವರಿಗೆ ದಿನಾಂಕ:23-01-2010ರಂದು ದಿನಾಂಕವನ್ನು ನಿಗಧಿಪಡಿಸಿದ್ದು, ಸದರಿ ದಿನಾಂಕದಂದು ಡಿಫೆನ್ಸ್ ಕಡೆಯ ವಾಹನ ಮಾಲೀಕರಾಗಲೀ, ಅವರ ಪರ ವಕೀಲರಾಗಲೀ ಹಾಜರಾಗಿರುವುದಿಲ್ಲ. ಆದ್ದರಿಂದ ಡಿಫೆನ್ಸ್ ಕಡೆಯರಿಗೆ ವಾದ ಮಂಡಿಸಲು ಆಸಕ್ತಿ ಇಲ್ಲವೆಂದು ಪರಿಗಣಿಸಿ ಏನೂ ವಾದವಿಲ್ಲವೆಂದು ತೀರ್ಮಾನಿಸಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:23-01-2010ರಂದು ವಾದ ಮಂಡಿಸಿ, ವಾಹನವನ್ನು ಅರಣ್ಯ ಉತ್ಪನ್ನ ಸಮೇತ ದಿನಾಂಕ:29-05-2008ರಂದು ವಲಯ ಅರಣ್ಯಾಧಿಕಾರಿ, ಸೊರಬ ಇವರು ಜಪ್ತುಮಾಡಿರುತ್ತಾರೆ. ಈ ಬಗ್ಗೆ ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಅಲ್ಲದೇ ಈ ವಾಹನವನ್ನು ಹುನಾಲು ನಾಟಾವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಾರ್ಥಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಾಗ್ರಿಗಳ ತಳಹದಿಯ ಮೇಲೆ ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು 407 ಮಿನಿ ಲಾರಿ ನಂ: ಕೆಎ-15-1468 ರಲ್ಲಿ ಹುನಾಲು ನಾಟಾ 4=1.208ಘನ ಮೀ ದಿನಾಂಕ:29-05-2008 ರಂದು ಅಕ್ರಮವಾಗಿ ಅರಣ್ಯ ಉತ್ಪನ್ನವನ್ನು ಸಾಗಿಸಲು

ಉಪಯೋಗಿಸಲಾಗಿತ್ತೇ ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ 407 ಮಿನಿ ಲಾರಿಯಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಹುನಾಲು ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಂಡಿರುತ್ತಾರೆಯೇ?

4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ
2. ಎರಡನೇ ಅಂಶಕ್ಕೆ ಹೌದು ಎಂತಲೂ
3. ಮೂರನೇ ಅಂಶಕ್ಕೆ ಹೌದು ಎಂದಾಗಿರುತ್ತದೆ.

ಅಂಶ-1:

ದಿನಾಂಕ:29-05-2008ರಂದು ಸೊರಬ ವಲಯದ ಹೊಸಬಾಳೆ ಶಾಖೆಯ ವನಪಾಲಕರು ಮತ್ತು ಸಿಬ್ಬಂದಿಯವರಿಗೆ ಬಂದ ವರ್ತಮಾನದ ಮೇರೆಗೆ ಸೊರಬ ತಾ॥ ಉಳುವಿ ಹೋಬಳಿ ಬ್ರಾಹ್ಮಣಕೇರಿಯಿಂದ ಕೋಡನಕಟ್ಟೆ ಗ್ರಾಮದ ಕಡೆಗೆ ಹೋಗುವ ರಸ್ತೆಯ ಎಡಭಾಗದಲ್ಲಿ 407 ಮಿನಿಲಾರಿ ಕೆಎ-15-1468ರಲ್ಲಿ ಹುನಾಲು ನಾಟಾವನ್ನು ಅಕ್ರಮವಾಗಿ ಸಾಗಿಸಿದ ಬಗ್ಗೆ ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಹಾಜರ್ಪಡಿಸಿರುತ್ತಾರೆ. ಸಲ್ಲಿಸಿದ ದಾಖಲೆಗಳಿಗೂ ಮತ್ತು ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ತಾಳೆಯಾಗಿದ್ದು, ಇದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆ ಎಂದು ನನ್ನ ಉತ್ತರವಾಗಿದೆ.

ಅಂಶ-2:

ಆರ್.ಸಿ. ಮಾಲೀಕರಾದ ಶ್ರೀ ಗಣಪತಿ ಆಚಾರ್ ಬಿನ್ ಗೋವಿಂದಾಚಾರ್, ಮನೆ ನಂ: 32, ಮಾಸೂರು ಗ್ರಾಮ, ಸಾಗರ ತಾ॥ ಇವರು ದಿ:08-08-2008 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಇವರ ಅರ್ಜಿಯಲ್ಲಿ ಮತ್ತು ಬಿ ಎಕ್ಸ್‌ಟ್ರಾಕ್ಟ್‌ನಲ್ಲಿ ನಮೂದಿಸಿದ ವಿಳಾಸದಂತೆ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ)(1) ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:25-07-2008 ರಂದು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಆರ್.ಸಿ. ಮಾಲೀಕರು ಈ ವಾಹನವನ್ನು ಮಧ್ಯಂತರ ಸುಪರ್ಧಿಗೆ ಬಿಟ್ಟುಕೊಡಲು ಈ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ದಿನಾಂಕ:24-01-2009ರಂದು ತಿರಸ್ಕರಿಸಿ ಆದೇಶವಾಗಿದೆ. ಡಿಫೆನ್ಸ್ ಸಾಕ್ಷಿ ಹೇಳಿಕೆಗೆ 3 ಬಾರಿ ದಿನಾಂಕ ನಿಗದಿಪಡಿಸಿರುತ್ತದೆ ಮತ್ತು ಡಿಫೆನ್ಸ್ ವಾದಕ್ಕೆ 1 ಬಾರಿ ದಿನಾಂಕವನ್ನು ನಿಗದಿಪಡಿಸಿರುತ್ತದೆ. ಒಮ್ಮೆಯೂ ವಾಹನ ಮಾಲಿಕರಾಗಲೀ, ಅವರ ಪರ ವಕೀಲರಾಗಲೀ ಈ ಪ್ರಕರಣದ ವಿಚಾರಣೆಗೆ ಹಾಜರಾಗಿರುವುದಿಲ್ಲ. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ-3:

ದಿನಾಂಕ:29-05-2008ರಂದು 407 ಮಿನಿಲಾರಿಯಲ್ಲಿ ಹುನಾಲು ನಾಟಾ 4=1.208ಎಂ3 ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ ಸೊರಬ ವಲಯದ ಹೊಸಬಾಳೆ ಶಾಖೆಯ ವನಪಾಲಕರು ಮತ್ತು ಸಿಬ್ಬಂದಿಯವರು ಪತ್ತೆ ಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ಸೊರಬ ಇವರು ವಿಚಾರಣಾ ವರದಿಯೊಂದಿಗೆ ಸಲ್ಲಿಸಿ ಅರ್ಜಿದಾರರು ಈ ಹಿಂದೆ ಅರಣ್ಯ ಉತ್ಪನ್ನಗಳನ್ನು ಅಕ್ರಮವಾಗಿ ಸಾಗಿಸಿದ ಬಗ್ಗೆ ಸೊರಬ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 50/04-05ರ ದಾಖಲೆಗಳನ್ನು ಮತ್ತು ಈಗ

ಅಕ್ರಮವಾಗಿ ಕಡಿದಿರುವ ಹುನಾಲು ಮರವು ಉಮಟೆಕೊಪ್ಪ ಎಂ.ಎಫ್.ನ ಸ.ನಂ: 55ರಲ್ಲಿ ಮರದ ಬುಡ ಇದೆಯೆಂದು ತಿಳಿಸಿ, ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿನಾಂಕ:08-08-2008ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ಧರೆಂಬುದಕ್ಕಾಗಲೀ, ಈ ವಾಹನದಲ್ಲಿ ಸದರಿ ದಿನದಂದು ಭತ್ತ ಸಾಗಾಣಿಕೆ ಮಾಡಲು ಕಳುಹಿಸಿದ್ದೇನೆಂಬುದಕ್ಕಾಗಲೀ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಅಲ್ಲದೇ ಯಾರೂ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿರುವುದಿಲ್ಲ ಎಂಬುದು ನನ್ನ ಉತ್ತರವಾಗಿದೆ.

ಅಂಶ-4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಹಾಗೂ ಇಲ್ಲಿಯವರೆಗಿನ ತಿದ್ದುಪಡಿ ಕಾಯಿದೆ ಪ್ರಕಾರ ವಲಯ ಅರಣ್ಯಾಧಿಕಾರಿ, ಸೊರಬ ಇವರು ಜಪ್ತು ಮಾಡಿದ ವಾಹನ 407 ಮಿನಿಲಾರಿ ಕೆಎ-15-1468 ರಲ್ಲಿ ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಹುನಾಲು ನಾಟಾ 4=1.208ಎಂ3 ನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುತ್ತಾರೆ. ಆದ್ದರಿಂದ 407 ಮಿನಿಲಾರಿ ಕೆಎ-15-1468 ಮತ್ತು ಈ ವಾಹನದಲ್ಲಿದ್ದ ಹುನಾಲು ನಾಟಾ 4=1.208ಎಂ3 ನ್ನು ಅಂತಿಮವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿನಾಂಕ:06-02-2010 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ.

ಪಿ.ಆರ್.287

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ
ಬಿ3:ಅಮೊ:ವಾಹನ-40/08-09, ದಿನಾಂಕ:16ನೇ ಜನವರಿ, 2010

ಉಪಸ್ಥಿತರು : ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಫಿರ್ಯಾಧಿದಾರರು : ವಲಯ ಅರಣ್ಯಾಧಿಕಾರಿ,
ಆನವಟ್ಟಿ ವಲಯ, ಆನವಟ್ಟಿ.
(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಆರೋಪಿಗಳು : ಪತ್ತೆಯಾಗಿಲ್ಲ

ಭಾದ್ಯತೆದಾರರು : ಯಾರೂ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿಲ್ಲ.

ಪ್ರಸ್ತಾವನೆ:

ದಿನಾಂಕ:13-01-2009ರಂದು ವಲಯ ಅರಣ್ಯಾಧಿಕಾರಿ, ಆನವಟ್ಟಿ ವಲಯ ಮತ್ತು ಸಿಬ್ಬಂದಿಯವರು ಸೊರಬ ತಾಲ್ಲೂಕು ಕುಪ್ಪಗಡ್ಡೆ ಹೋಬಳಿ ಹಾಯಾ ಗ್ರಾಮದ ಸ.ನಂ: 18ರ ಕಿರು ಅರಣ್ಯ ಪ್ರದೇಶದ ಹಾಯಾದಿಂದ ಬೆಟ್ಟದ ಕುರ್ಲಿಗೆ ಹೋಗುವ ರಸ್ತೆಯ ಬಲಭಾಗದ 1973ರ ನೆಡುತೋಪಿನೆದುರು ಬೆಳಗಿನ ಜಾವ ಸುಮಾರು 3-30ರ ಸಮಯದಲ್ಲಿ ಒಂದು ವಾಹನಕ್ಕೆ ನಾಟಾದ ತುಂಡು ತುಂಬುತ್ತಿರುವುದನ್ನು ಇಲಾಖೆಯವರು ನೋಡಿದಾಗ ಅಸಾಮಿಗಳು ವಾಹನ ಬಿಟ್ಟು

ಪರಾರಿಯಾದರು. ವಾಹನವನ್ನು ಪರಿಶೀಲಿಸಿ ನೋಡಲಾಗಿ ಬಿಳಿ ಬಣ್ಣದ ಹಳೆಯ ಮಾರುತಿ ವ್ಯಾನ್ ನಂ: ಕೆಎ-07-ಎಂ-1281, ಇಂಜಿನ್ ನಂ: ಸ್ಪಷ್ಟವಾಗಿ ಕಂಡುಬಂದಿರುವುದಿಲ್ಲ, ಛಾಸ್ಸಿಸ್ ನಂಬರ್: ST-91-IN-199262 ಆಗಿದ್ದು, ಈ ವಾಹನದೊಳಗೆ ಬೀಟೆ ನಾಟಾ 5=0.699ಘಂ3 ಇದ್ದು, ಈ ನಾಟಾದ ಮೇಲೆ ಇಲಾಖಾ ಛಾಪಾದ ಗುರುತಿಲ್ಲ ಮತ್ತು ಸಾಗಿಸಲು ರಹದಾರಿ ಇರಲಿಲ್ಲವಾದ್ದರಿಂದ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ವಾಹನ ಮತ್ತು ವಾಹನದಲ್ಲಿದ್ದ ಬೀಟೆ ನಾಟಾಗಳನ್ನು ಇಲಾಖಾ ಪರ ಜಪ್ತುಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24, 62, 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969ರ ಉಪನಿಯಮ 144, 165ರ ಪ್ರಕಾರ ಆನವಟ್ಟಿ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 100/08-09ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ದಿನಾಂಕ:15-01-2009ರಂದು ಆದೇಶವಾಗಿದೆ.

ಈ ಪ್ರಕರಣದ ವಿಚಾರಣಾ ವರದಿಯನ್ನು ದಿನಾಂಕ:09-06-2009ರಂದು ವಲಯ ಅರಣ್ಯಾಧಿಕಾರಿ, ಆನವಟ್ಟಿ ಇವರು ಈ ನ್ಯಾಯಾಲಯಕ್ಕೆ ಸಲ್ಲಿಸಿ, ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ಈ ನ್ಯಾಯಾಲಯದ ಪತ್ರ ಸಂಖ್ಯೆ: ಬಿ3:ಅಮೊ: ವಾಹನ:40/08-09 ದಿನಾಂಕ:31-01-2009ರಂದು ಪತ್ರ ಬರೆದು ಪ್ರಾದೇಶಿಕ ಸಾರಿಗೆ ಅಧಿಕಾರಿ, ಕೋಲಾರ ಇವರನ್ನು ಕೋರಲಾಗಿತ್ತು. ಆದರೆ ಇಲ್ಲಿಯವರೆವಿಗೂ ಈ ವಾಹನದ ಬಿ ಪ್ರತಿಯ ಬಗ್ಗೆ ಯಾವುದೇ ಮಾಹಿತಿಯನ್ನು ಈ ನ್ಯಾಯಾಲಯಕ್ಕೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಕೋಲಾರ ಇವರು ಸಲ್ಲಿಸಿರುವುದಿಲ್ಲ. ಈ ವಾಹನ ಮುಟ್ಟುಗೋಲು ಹಾಕಿಕೊಂಡು ನಂತರ ಬಹಿರಂಗ ಹರಾಜಿನಲ್ಲಿ ವಿಲೇ ಮಾಡಿದ ನಂತರದಲ್ಲಿ ಆರ್.ಸಿ. ಮಾಲೀಕರು ನ್ಯಾಯಾಲಯದ ಮೊರೆ ಹೋದಲ್ಲಿ ಅದಕ್ಕೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಕೋಲಾರ ಇವರೇ ನೇರ ಹೊಣೆಗಾರರಾಗಿರುತ್ತಾರೆ.

ಈ ನಡುವೆ ಈ ವಾಹನದ ಬಗ್ಗೆ ಹೆಚ್ಚಿನ ಪ್ರಚಾರಕ್ಕಾಗಿ ಈ ನ್ಯಾಯಾಲಯದಿಂದ 30 ದಿನಗಳ ಕಾಲಾವಕಾಶ ನೀಡಿ ಸಂಖ್ಯೆ: ಬಿ3:ಅಮೊ:ವಾಹನ:ಸಿಆರ್-40/08-09 ದಿನಾಂಕ:04-02-2009ರಂದು ಪ್ರಕಟಣೆಯನ್ನು ಹೊರಡಿಸಿ ಪ್ರತಿಯನ್ನು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಹಾಗೂ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಗಿತ್ತು. ಅದರಂತೆ ಈ ಪ್ರಕಟಣೆಯು ದಿನಾಂಕ:18-02-2009ರಂದು ಉದಯವಾಣಿ ದಿನಪತ್ರಿಕೆಯಲ್ಲಿ ಮತ್ತು ದಿನಾಂಕ:19-02-2009ರಂದು ರಾಜ್ಯ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಮುಂದಿನ ಕ್ರಮ ಜರುಗಿಸಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:02-01-2010 ರಂದು ವಾದ ಮಂಡಿಸಿ ಈ ವಾಹನದಲ್ಲಿ ಬೀಟೆ ನಾಟಾವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಬೀಟೆ ನಾಟಾ ಸಮೇತ ವಲಯ ಅರಣ್ಯಾಧಿಕಾರಿ, ಆನವಟ್ಟಿ ಇವರು ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಬೀಟೆ ನಾಟಾ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿದೆ ಮತ್ತು ಈ ವಾಹನದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಗೊಂಡು 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ)ಪ್ರಕಾರ ವಲಯ ಅರಣ್ಯಾಧಿಕಾರಿ, ಆನವಟ್ಟಿ ಇವರು ಜಪ್ತು ಮಾಡಿದ

ವಾಹನ ಬಿಳಿ ಬಣ್ಣದ ಮಾರುತಿ ವ್ಯಾನ್ ನಂ: ಕೆಎ-07-ಎಂ-1281 (ಇಂಜಿನ್ ನಂ: ಸ್ಪಷ್ಟವಾಗಿ ಕಂಡುಬಂದಿರುವುದಿಲ್ಲ, ಛಾಸ್ಸಿಸ್ ನಂಬರ್: ST-91-IN-199262) ನ್ನು ಮತ್ತು ಈ ವಾಹನದಲ್ಲಿದ್ದ ಬೀಟೆ ನಾಟಾ 05=0.669ಎಂ3 ಕರ್ನಾಟಕ ಸರ್ಕಾರದ ಸಂಪತ್ತು ಆಗಿರುವುದರಿಂದ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದ್ದೇನೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿನಾಂಕ:16-01-2010 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರು ಈ ನ್ಯಾಯಾಲಯಕ್ಕೆ ಹಕ್ಕುಭಾಧ್ಯತೆ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ.

ಪಿ.ಆರ್.139

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ
ಬಿ3:ಅಮೊ:ವಾಹನ-36/08-09, ದಿನಾಂಕ:16ನೇ ಜನವರಿ, 2010

ಉಪಸ್ಥಿತರು: ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಫಿರ್ಯಾಧಿದಾರರು: ವಲಯ ಅರಣ್ಯಾಧಿಕಾರಿ,
ಅಂಬ್ಲಿಗೊಳ ವಲಯ, ಅಂಬ್ಲಿಗೊಳ.
(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಆರೋಪಿಗಳು: ಪತ್ತೆಯಾಗಿಲ್ಲ

ಭಾಧ್ಯತೆದಾರರು: ಯಾರೂ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿಲ್ಲ.

ಪ್ರಸ್ತಾವನೆ:

ದಿನಾಂಕ:25-12-2008ರಂದು ವಲಯ ಅರಣ್ಯಾಧಿಕಾರಿ, ಅಂಬ್ಲಿಗೊಳ ಮತ್ತು ಸಿಬ್ಬಂದಿಯವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಶಿಕಾರಿಪುರ ತಾಲ್ಲೂಕು ಕಸಬಾ ಹೋಬಳಿ ದೊಡ್ಡಬ್ಯಾಣದಿಂದ ಬುಕ್ಕಟ್ಟಿನ ಜಡ್ಡಿಗೆ ಹೋಗುವ ಕಚ್ಚಾ ರಸ್ತೆಯಲ್ಲಿ ಭೂತಪ್ಪ ಕಟ್ಟೆಯ ಹತ್ತಿರ ಬೆಳಂದೂರು ಮನ್ನಾ ಜಂಗ್ಲಿಯಲ್ಲಿ ಬರುತ್ತಿರುವಾಗ ಒಂದು ವಾಹನವನ್ನು ನಿಲ್ಲಿಸಲು ಸೂಚಿಸಿದಾಗ ನಿಲ್ಲಿಸದೆ ಮುಂದೆ ಹೋದಾಗ ಇಲಾಖಾ ವಾಹನದಿಂದ ಬೆನ್ನಟ್ಟಿ ನಿಲ್ಲಿಸಿದಾಗ ಇಲಾಖೆಯವರನ್ನು ಕಂಡು ವಾಹನದಲ್ಲಿದ್ದ ಅಸಾಮಿಗಳು ಕೈಗೆ ಸಿಗದೆ ಪರಾರಿಯಾಗಿರುತ್ತಾರೆ. ನಂತರ ವಾಹನ ಪರಿಶೀಲಿಸಲಾಗಿ ನೀಲಿ ಬಣ್ಣದ ಮಾರುತಿ ವ್ಯಾನ್ ಜಿಎ-02-ಎ-2489, ಇಂಜಿನ್ ನಂ: ಕಾಣಿಸುತ್ತಿಲ್ಲ, ಛಾಸ್ಸಿಸ್ ನಂಬರ್: ST-91-IN-922409 ಆಗಿದ್ದು, ಈ ವಾಹನದೊಳಗೆ ಬೀಟೆ ನಾಟಾ 2=0.300ಎಂ3 ಮತ್ತು ನೋಕಿಯಾ ಮೊಬೈಲ್ ನಂ:1600, Airtel ಸಿಮ್ ನಂ: 9741161219 ಇದ್ದು, ನಾಟಾದ ಮೇಲೆ ಇಲಾಖಾ ಛಾಪಾದ ಗುರುತಿಲ್ಲ ಮತ್ತು ಸಾಗಿಸಲು ರಹದಾರಿ ಇರಲಿಲ್ಲವಾದ್ದರಿಂದ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ವಾಹನ ಮತ್ತು ವಾಹನದಲ್ಲಿದ್ದ ಬೀಟೆ ನಾಟಾಗಳನ್ನು ಇಲಾಖಾ ಪರ ಜಪ್ತುಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24, 62, 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969ರ ಉಪನಿಯಮ 144, 165ರ ಪ್ರಕಾರ ಅಂಬ್ಲಿಗೊಳ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 88/08-09ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ದಿನಾಂಕ:29-12-2008ರಂದು ಆದೇಶವಾಗಿದೆ.

ಈ ಪ್ರಕರಣದ ವಿಚಾರಣಾ ವರದಿಯನ್ನು ದಿನಾಂಕ:07-09-2009ರಂದು ವಲಯ ಅರಣ್ಯಾಧಿಕಾರಿ, ಅಂಬ್ಲಿಗೊಳ ಇವರು ಈ ನ್ಯಾಯಾಲಯಕ್ಕೆ ಸಲ್ಲಿಸಿ, ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ಈ ನ್ಯಾಯಾಲಯದ ಪತ್ರ ಸಂಖ್ಯೆ: B3FOC:VEH-36/08-09 ದಿನಾಂಕ:29-12-2009ರಂದು ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್ ಕಮಿಷನರ್, ಪಣಜಿ, ಗೋವಾ ರವರಿಗೆ ಪತ್ರ ಬರೆದು ಕೋರಲಾಗಿತ್ತು. ಆದರೆ ಇಲ್ಲಿಯವರೆವಿಗೂ ಈ ವಾಹನದ ಬಿ ಪ್ರತಿಯ ಬಗ್ಗೆ ಯಾವುದೇ ಮಾಹಿತಿಯನ್ನು ಈ ನ್ಯಾಯಾಲಯಕ್ಕೆ ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್ ಕಮಿಷನರ್, ಪಣಜಿ, ಗೋವಾ ಇವರು ಸಲ್ಲಿಸಿರುವುದಿಲ್ಲ. ಆದ್ದರಿಂದ ಮುಂದಿನ ಕ್ರಮ ಕೈಗೊಳ್ಳಲಾಯಿತು.

ಈ ನಡುವೆ ಈ ವಾಹನದ ಬಗ್ಗೆ ಹೆಚ್ಚಿನ ಪ್ರಚಾರಕ್ಕಾಗಿ ಈ ನ್ಯಾಯಾಲಯದಿಂದ 30 ದಿನಗಳ ಕಾಲಾವಕಾಶ ನೀಡಿ ಸಂಖ್ಯೆ: ಬಿ3:ಅಮೊ:ವಾಹನ:ಸಿಆರ್-40/08-09 ದಿನಾಂಕ:04-02-2009ರಂದು ಪ್ರಕಟಣೆಯನ್ನು ಹೊರಡಿಸಿ ಪ್ರತಿಯನ್ನು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಹಾಗೂ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಗಿತ್ತು. ಅದರಂತೆ ಈ ಪ್ರಕಟಣೆಯು ದಿನಾಂಕ:18-02-2009ರಂದು ಉದಯವಾಣಿ ದಿನಪತ್ರಿಕೆಯಲ್ಲಿ ಮತ್ತು ದಿನಾಂಕ:19-02-2009ರಂದು ರಾಜ್ಯ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಮುಂದಿನ ಕ್ರಮ ಜರುಗಿಸಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:02-01-2010 ರಂದು ವಾದ ಮಂಡಿಸಿ ಈ ವಾಹನದಲ್ಲಿ ಬೀಟೆ ನಾಟಾವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನ ಮತ್ತು ಬೀಟೆ ನಾಟಾ ಸಮೇತ ದಿನಾಂಕ:25-12-2008 ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಬೀಟೆ ನಾಟಾ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

2) To keep the force under control in good disciplined well-trained efficient always ready position for meeting with the calls of un expected events.
3) To maintain cordial relation with officers and officials of District Police Administration
4) Ensure that the arms and ammunitions stores and buildings belonging to the unit are maintained in good condition.
5) To participate to the extent possible and permissible in welfare activities sponsored by the official and non official agencies.
6) To get to know all the officers and men serving under, and redress the grievances if any encourage those who are performing effectively, deal with those who are guilty of misconduct or remiss in discharge of duty.
7) To ensure the honesty and integrity of the officers and men.

(V) THE RULES, REGULATIONS, INSTRUCTIONS, MANUALS AND RECORDS, HELD BY IT OR UNDER ITS CONTROL OR USED BY ITS EMPLOYEES FOR DISCHARGING ITS FUNCTIONS:

1) K.S.R.P. MANUAL
2) KARNATAKA POLICE ACT
3) K.F.C
4) K.C.S.R.
5) I.P.C.
6) M.C.E
7) OFFICE PROCEDCURE
8) K.C.S. (C.C.A) RULES
9) K.S.P. (DP) RULES
10) SERVICE MANUAL

(VI) A STATEMENT OF THE CATEGORIES OF DOCUMENTS THAT ARE HELD BY IT OR UNDER ITS CONTROL

Following records are held by the unit

1) Recruitment of Police constables
2) Routine office records of all sections in the unit

(VII) THE PARTICULARS OF ANY ARRANGEMENT THAT EXISTS FOR CONSULTATION WITH, OR REPRESENTATION BY THE MEMBERS OF PUBLIC IN RELATION TO THE FORMULATION OF ITS POLICY OR ADMINISTRATION THEREOF:

Commandant will furnish necessary information in this regard.

(VIII) A STATEMENT OF THE BOARDS, COUNCILS, COMMITTEES AND OTHER BODIES CONSISTING OF TWO OR MORE PERSONS CONSTITUTED AS ITS PART OR FOR THE PURPOSE OF ITS ADVISE, AND AS TO WHETHER MEETINGS OF THOSE BOARDS, COUNCILS,COMMITTEES AND OTHER BODIES ARE OPEN TO THE PUBLIC, OR THE MINUTES OF SUCH MEETING ARE ACCESSIBLE FOR PUBLIC

Not applicable

(IX) A DIRECTORY OF ITS OFFICERS AND EMPLOYEES

Sriyuhs:

Asst-Commandants

		Date of holding the charge
1) B. Devendrappa	Asst-Commandant-I	02-01-2006
2) V.A.Jiral	Asst-Commandant-II	31-12-2005
3) S.V.Kurlekar	Asst-Commandant-III	27-09-2003

Police Inspectors

1) P.S.Bikshavatimath	R.P.I.	03-07-2003
2) G.D. Naik	R.P.I.	03-06-2004
3) Chikkaladinni	R.P.I.	07-06-2006
4) V.B.Bellad	R.P.I.	21-05-2007
5) Y.H.Mulla	R.P.I.	28-05-2007
6) V.B. Halijol	R.P.I.	29-05-2007
7) I.G.Hiremath	R.P.I.	01-06-2007
8) R.A.Chigari	R.P.I.	04-06-2007
9) P.D. Varude	R.P.I	14-08-2009
10) U.H Bandiwaddar	R.P.I	10-12-2009

(X)THE MONTHLY REMUNERATION RECEIVED BY EACH OF ITS OFFICERS AND EMPLOYEES, INCLUDING THE SYSTEM OF COMPENSATION AS PROVIDED IN ITS REGULATIONS:

Designation	Pay Scales
a) Commandant	18150-26925
b) Asst-Commdts	14050-25050
c) RPIs	10800-20025
d) RSIs	10000-18150
e) ARSIs	7275-13350
f) HCs	6250-10000
g) PCs	5800-10500
h) Foll-Jamadar	5800-10500
i) Followers	5200-8200
1) A.A.O	10800-20025
2) S.S.	10000-18150
3) FDA/Stenographer	7275-13350
4) SDA	5800-10500
5) Dalayat	4800-7275

Pensionery benefits etc are allowed as per rules applicable from time to time.

(XI) THE BUDGET ALLOCATED TO EACH OF ITS AGENCY, INDICATING THE

(XII) PARTICULARS OF ALL PLANS, PROPOSED EXPENDITURES AND REPORTS ON DISBURSEMENTS MADE:

SL. NO.	HEAD OF ACCOUNT	BUDGET PROPOSED FOR THE YEAR 2009-10
1)	2055-00-104-0-01-195 Transport Exp.	72,16,727/-
2)	2055-00-104-0-01-051 General Expenses	10,22,800/-
3)	2055-00-104-0-01-071 Building Expenses	10,67,509/-
4)	2055-00-104-0-01-015 Subsidiary Expenses	4,30,500/-
5)	2055-00-113-0-01-106 Subsidies Free ration	16,24,000/-
6)	2055-00-104-0-01-041 Traveling Expenses	61,12,200/-

(XII) THE MANNER OF EXECUTION OF SUBSIDY PROGRAMMES, INCLUDING THE AMOUNTS ALLOCATED AND THE DETAILS OF BENEFICIARIES OF SUCH PROGRAMMES.

Under the head modernization, funds were released in favour of police Housing Corporation for construction of buildings, office building and residential buildings, Chairman and Managing Director, Karnataka State Police Housing Corporation Ltd. Is the authorized unit officer for incurring expenditure under this budgetary head.

(XIII) PARTICULARS OF RECIPIENTS OF CONCESSIONS, PERMITS OR AUTHORIZATIONS GRANTED BY IT:

-- Nil --

(XIV) DETAILS IN RESPECT OF THE INFORMATION, AVAILABLE TO OR HELD BY IT, REDUCED IN AN ELECTRONIC FORM:

-- Nil --

(XV) THE PARTICULARS OF FACILITIES AVAILABLE TO CITIZENS FOR OBTAINING INFORMATION, INCLUDING THE WORKING HOURS, A LIBRARY OR READING ROOM, MAINTAINED FOR PUBLIC USE:

-- Nil --

(XVI) Public Information Officers and Appellate Authorities in the Police Station/Range I.G.s, under the Right to Information Act

SL. No.	Office	Public Information Officer	Assistant Public Information Officer	Appellate Authority
1)	Commandant, IIBN, K.S.R.P. Belgaum	A.A.O.	Section Supdt.	Commandant

(XVII) SUCH OTHER INFORMATION AS MAY BE PRESCRIBED

Executive Staff as on 15-12-2009

Sl. No.	Rank	Sanctioned strength	Actual	Vacancy
1)	Commandant	01	01	--
2)	Asst-Commandant	03	03	--
3)	Spl. R.P.I.	10	10	--
4)	Spl. R.S.I.	22	21	01
5)	Spl.A.R.S.I.	08	08	--
6)	HC	183	183	--
7)	PC	715	611	104
8)	Follower Jamadar	01	01	--
9)	Follower Cook	28	27	01
10)	Follower Water carrier	14	14	--
11)	Follower Dhobi	14	14	--
12)	Follower Sweeper	14	14	--
13)	Follower Barber	14	14	--
14)	Follower Mochi	02	02	--
15)	Follower Tailor	03	03	--
16)	Follower Carpenter	02	02	--
	Total	**1034**	**928**	**106**

Ministerial Staff as on 15-12-2009

Sl.No.	Rank	Sanctioned strength	Actual	Vacancy
1.	A.A.O.	01	01	--
2.	S.S.	01	01	--
3.	F.D.A.	03	02	01
4.	STENO	01	01	--
5.	S.D.A.	07	07	--
6.	TYPIST	02	01	01
7.	DALAYAT	02	02	--
	TOTAL	17	15	02

S.H.NAIK
Commandant,
II Bn K.S.R.P. Belgaum

PR-191

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ-I, ಬೆಂದೂರ್‌ವೆಲ್, ಕಂಕನಾಡಿ, ಮಂಗಳೂರು-ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ/ಸಿಆರ್.7/2010ಎಫ್, ದಿನಾಂಕ:10ನೇ ಮಾರ್ಚ್, 2010

ಅರ್ಜಿದಾರರು: — ವಿರುದ್ಧ — **ಪ್ರತಿವಾದಿಗಳು:**

ಅರ್ಜಿದಾರರು:

1) ಗ್ಲಾಡ್‌ಸನ್ ಕುಮಾರ್ ಕೋಟ್ಯಾನ್ ತಂದೆ: ಎಡ್ವರ್ಡ್‌ಕೋಟ್ಯಾನ್.
2) ನವೀನ್ ರತ್ನಾಕರ್ ಕೋಟ್ಯಾನ್ ತಂದೆ: ದಿ.ಎಡ್ವರ್ಡ್‌ಕೋಟ್ಯಾನ್.
3) ಕುಮಾರಿ ಲವೀನಾ ಎಸ್. ಕೋಟ್ಯಾನ್ ತಂದೆ: ದಿ.ಎಡ್ವರ್ಡ್‌ಕೋಟ್ಯಾನ್. ಬಸವನ ಕಜೆ ಮನೆ, ಬೆಲುವಾಯಿ ಪೋಸ್ಟ್, ಅಲಂಗಾರು, ಮಂಗಳೂರು ತಾಲ್ಲೂಕು.

ಪ್ರತಿವಾದಿಗಳು:

1) ಶ್ರೀಮತಿ ಸಂದ್ಯಾ ಪಿ. ಶೆಟ್ಟಿ, ಕೋಂ ದಿ. ಪುರುಶೋತ್ತಮ್ ಶೆಟ್ಟಿ ಜೋತಿಲೊಟ್ಟು ಹೌಸ್, ಕಲ್ಲಬೆಟ್ಟು ಪೋಸ್ಟ್, ಮೂಡಬಿದ್ರೆ-574227.
2) ನ್ಯಾಷನಲ್ ಇನ್ಶೂರೆನ್ಸ್ ಕಂಪನಿ, 1ನೇ ಮಹಡಿ, ನಿತ್ಯಾನಂದ ಕಾಂಪ್ಲೆಕ್ಸ್, ನಿಯರ್ ಬಸ್‌ಸ್ಟ್ಯಾಂಡ್, ಮೂಡಬಿದ್ರೆ-574227.

ಅಧಿಸೂಚನೆ

ಅರ್ಜಿದಾರನಾದ ಶ್ರೀ ಗ್ಲಾಡ್‌ಸನ್ ಕುಮಾರ್ ಕೊಟ್ಯಾನ್ ಇವರು ತಮ್ಮನಾದ ಶ್ರೀ ದಿವಂಗತ ಶ್ರೀ ವಿನಯ ಎಡ್ವರ್ಡ್ ಕೊಟ್ಯಾನ್ ಇವರು 1ನೇ ಪ್ರತಿವಾದಿಗಳಾದ ಶ್ರೀಮತಿ ಸಂದ್ಯಾ ಪಿ.ಶೆಟ್ಟಿ ಇವರ ಟೆಂಪೋಟ್ರ್ಯಾಕ್ಸ್ ವಾಹನ ನಂಬರ್ ಕೆಎ-19-ಬಿ-4076 ಇವರಲ್ಲಿ ಕೆಲಸಗಾರರಾಗಿದ್ದು ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:18.11.2009 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಡಿ.ಜಿ. ನಾಗೇಶ್
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ- I, ಮಂಗಳೂರು.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ-I, ಬೆಂದೂರ್‌ವೆಲ್, ಕಂಕನಾಡಿ, ಮಂಗಳೂರು-ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ/ಸಿಆರ್.8/2010ಎಫ್, ದಿನಾಂಕ:10ನೇ ಮಾರ್ಚ್, 2010

ಅರ್ಜಿದಾರರು: — ವಿರುದ್ಧ — **ಪ್ರತಿವಾದಿಗಳು:**

ಅರ್ಜಿದಾರರು:

1) ಶ್ರೀಮತಿ ಲಕ್ಷ್ಮಿ ಗಂಡ: ದಿವಂಗತ ಪರಶುರಾಮ.
2) ಪ್ರಮೋದ್, ಪ್ರಾಯ 9 ವರ್ಷ.
3) ಪ್ರವೀಣ್, ಪ್ರಾಯ 7 ವರ್ಷ, ಕೆ.ಸಿ.ಡಿ.ಸಿ. ರಸ್ತೆ, ಆಕಾಶವಾಣಿ, ಸಾಯಿಬಾಬ ಮಂದಿರದ ಹತ್ತಿರ, ಕುರ್ಪಾಲಿಕಾಂಪೌಂಡ್, ಧಾರವಾಡ.

ಪ್ರತಿವಾದಿಗಳು:

1) ಮ್ಯಾನೇಜಿಂಗ್ ಡೈರೆಕ್ಟರ್, ಕೆ.ಎಸ್.ಆರ್.ಟಿ.ಸಿ. ಬೆಂಗಳೂರು.
2) ಯುನೈಟೆಡ್ ಇನ್ಶೂರೆನ್ಸ್ ಕಂಪೆನಿ ಬಸವನಗುಡಿ, ಬೆಂಗಳೂರು-560004.
ಡಿವಿಜನಲ್ ಆಫೀಸ್, ಮೊದಲಿನ ಮಹಡಿ, ರಾಮಭವನ ಕಾಂಪ್ಲೆಕ್ಸ್, ಕೊಡಿಯಾಲ್ ಬೈಲ್, ಮಂಗಳೂರು.

ಅಧಿಸೂಚನೆ

ಅರ್ಜಿದಾರಳಾದ ಶ್ರೀಮತಿ ಲಕ್ಷ್ಮೀ W/o ದಿವಂಗತ ಪರಶು, ಇವರು ತಮ್ಮ ಗಂಡನಾದ ಶ್ರೀ ಮೃತ ಪರಶುರಾಮ ಇವರು 1ನೇ ಪ್ರತಿವಾದಿಗಳಾದ ಕೆ.ಎಸ್.ಆರ್.ಟಿ.ಸಿ. ಬೆಂಗಳೂರು, ಬಸ್ ಸಂಖ್ಯೆ: ಕೆಎ-01-ಎಫ್-8534 ಇವರಲ್ಲಿ ಕೆಲಸಗಾರರಾಗಿದ್ದು ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:27.12.2009 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಪಿ.ಆರ್-385

ಡಿ.ಜಿ. ನಾಗೇಶ್
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ-I, ಮಂಗಳೂರು.

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಮಾರ್ಚ್ ೨೫, ೨೦೧೦ (ಚೈತ್ರ ೪, ಶಕ ವರ್ಷ ೧೯೩೨)	ಸಂಚಿಕೆ ೧೨

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 72 ರಾಶಾಪ್ರ 2006, ಬೆಂಗಳೂರು, ದಿನಾಂಕ:1ನೇ ಮಾರ್ಚ್, 2010

The Karnataka Civil Services (Conduct) Rules, 1966 ಇದರ ಅಧಿಕೃತ ಕನ್ನಡ ಭಾಷಾಂತರವನ್ನು ಕರ್ನಾಟಕ ಅಫಿಷಿಯಲ್ ಲಾಂಗ್ವೇಜ್ ಆಕ್ಟ್, 1963ರ ಪ್ರಕರಣ 5A ಅಡಿಯಲ್ಲಿ ರಾಜ್ಯಪಾಲರ ಅಧಿಕಾರದ ಮೇರೆಗೆ ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಮರು ಪ್ರಕಟಿಸಲು ಆದೇಶಿಸಲಾಗಿದೆ.

ನಿಯಮಗಳ ಅನುಕ್ರಮಣಿಕೆ

ನಿಯಮಗಳ ಅನುಕ್ರಮಣಿಕೆ

ಕರ್ನಾಟಕ ಸರ್ಕಾರ

ಮುಖ್ಯ ಸಚಿವಾಲಯ

(ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ)

ಅಧಿಸೂಚನೆ

ಬೆಂಗಳೂರು, ದಿನಾಂಕ 10ನೇ ಮೇ 1966

ಜಿಎಸ್‌ಆರ್ 955.– ಕರ್ನಾಟಕ ರಾಜ್ಯಪಾಲರು ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದಿಂದ ಪ್ರದತ್ತವಾದ ಅಧಿಕಾರಗಳನ್ನು ಮತ್ತು ಈ ಸಂಬಂಧದಲ್ಲಿ ಅವರನ್ನು ಶಕ್ತಗೊಳಿಸುವ ಇತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:–

ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966 ಎಂದು ಕರೆಯತಕ್ಕದ್ದು.

(2) ಅವು ಕೂಡಲೇ ಜಾರಿಗೆ ಬರತಕ್ಕದ್ದು.

(3) ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಸಿವಿಲ್ ಸೇವೆಗೆ ನೇಮಕಗೊಂಡಿರುವ ಹಾಗೂ ಕರ್ನಾಟಕ ರಾಜ್ಯದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ನಿಯುಕ್ತಿಗೊಂಡಿರುವ ಎಲ್ಲಾ ವ್ಯಕ್ತಿಗಳಿಗೆ ಅವು ಅನ್ವಯವಾಗತಕ್ಕದ್ದು:

ಪರಂತು, ಈ ನಿಯಮಗಳಲ್ಲಿರುವುದು ಯಾವುದೂ,-

(ಎ) ಅಖಿಲ ಭಾರತ ಸೇವೆಯ ಸದಸ್ಯನಾಗಿರುವ,

(ಬಿ) ರಾಜ್ಯಪಾಲರು ಯಾವ ಹುದ್ದೆಯ ಸಂಬಂಧದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ನಿಯಮಗಳು ಅನ್ವಯವಾಗತಕ್ಕದ್ದಲ್ಲ ಎಂದು ಘೋಷಿಸಿರುವರೋ ಆ ಯಾವುದೇ ಹುದ್ದೆಯನ್ನು ಹೊಂದಿರುವ,

(ಸಿ) ಕೈಗಾರಿಕಾ ಸಂಸ್ಥೆಯ ಯಾವ ನೌಕರನಿಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕೈಗಾರಿಕಾ ನಿಯೋಜನೆ (ಸ್ಥಾಯೀ ಆದೇಶಗಳು) ಅಧಿನಿಯಮ, 1946 (ಕೇಂದ್ರ ಅಧಿನಿಯಮ 1946ರ XX) ರ ಉಪಬಂಧಗಳು ಅನ್ವಯವಾಗುತ್ತವೆಯೋ ಆ ಸರ್ಕಾರಿ ಸಂಸ್ಥೆಯಲ್ಲಿ ನೌಕರನಾಗಿರುವ

– ಯಾರೇ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದ್ದಲ್ಲ:

[1][ಮತ್ತೂ ಪರಂತು, 9, 14, 16 ಮತ್ತು 23ನೇ ನಿಯಮಗಳು ಪೂರ್ಣಕಾಲಿಕ ಉದ್ಯೋಗದಲ್ಲಿರದ ಸರ್ಕಾರಿ ನೌಕರನಿಗೆ ಅನ್ವಯವಾಗತಕ್ಕದ್ದಲ್ಲ].

1. ಅಧಿಸೂಚನೆ ಸಂಖ್ಯೆ ಜಿಎಡಿ 4 ಎಸ್ಆರ್‌ಸಿ 72 ದಿನಾಂಕ 26ನೇ ಮೇ 1971ರಲ್ಲಿ ಸೇರಿಸಲಾಗಿದೆ.

2. **ಪರಿಭಾಷೆಗಳು.-** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ಸರ್ಕಾರ"** ಎಂದರೆ ಕರ್ನಾಟಕ ಸರ್ಕಾರ;

(ಬಿ) **"ಸರ್ಕಾರಿ ನೌಕರ"** ಎಂದರೆ ಸಿವಿಲ್ ಸೇವೆಗೆ ಅಥವಾ ಕರ್ನಾಟಕ ರಾಜ್ಯದ ವ್ಯವಹಾರಗಳಿಗೆ ಸಂಬಂಧಪಟ್ಟ ಹುದ್ದೆಗೆ ನೇಮಕಗೊಂಡಿರುವ ಯಾರೇ ವ್ಯಕ್ತಿ;

ವಿವರಣೆ:- ಯಾವ ಸರ್ಕಾರಿ ನೌಕರನ ಸೇವೆಗಳನ್ನು ಸರ್ಕಾರವು ಕಂಪನಿಗೆ, ನಿಗಮಕ್ಕೆ, ಸಂಸ್ಥೆಗೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ನೀಡಲಾಗಿದೆಯೋ ಆ ಸರ್ಕಾರಿ ನೌಕರನನ್ನು ಈ ನಿಯಮಗಳ ಉದ್ದೇಶಕ್ಕಾಗಿ, ಆತನ ಸಂಬಳವನ್ನು ರಾಜ್ಯದ ಸಂಚಿತ ನಿಧಿಯ ಹೊರತಾದ ಇತರ ಮೂಲಗಳಿಂದ ಪಡೆದುಕೊಳ್ಳಲಾಗುತ್ತಿದ್ದರೂ, ಸರ್ಕಾರದ ಅಧೀನದಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರನೆಂದು ಭಾವಿಸತಕ್ಕದ್ದು;

(ಸಿ) ಸರ್ಕಾರಿ ನೌಕರನಿಗೆ ಸಂಬಂಧಪಟ್ಟಂತೆ "ಕುಟುಂಬದ ಸದಸ್ಯರು" ಎಂಬುದು:-

(i) ಸರ್ಕಾರಿ ನೌಕರನ/ ನೌಕರಳ ಹೆಂಡತಿಯು ಅಥವಾ ಸಂದರ್ಭಾನುಸಾರ ಗಂಡನು, ಸರ್ಕಾರಿ ನೌಕರನ/ನೌಕರಳ ಜೊತೆ ವಾಸವಾಗಿರಲಿ ಅಥವಾ ಇಲ್ಲದಿರಲಿ ಅವರನ್ನು ಒಳಗೊಳ್ಳುತ್ತದೆ. ಆದರೆ ಸಕ್ಷಮ ನ್ಯಾಯಾಲಯದ ಡಿಕ್ರಿಯ ಅಥವಾ ಆದೇಶದ ಮೂಲಕ ಸರ್ಕಾರಿ ನೌಕರನಿಂದ/ ನೌಕರಳಿಂದ ಬೇರ್ಪಟ್ಟಿರುವ ಹೆಂಡತಿಯನ್ನು ಅಥವಾ ಸಂದರ್ಭಾನುಸಾರ ಗಂಡನನ್ನು ಒಳಗೊಳ್ಳುವುದಿಲ್ಲ.

(ii) ಸರ್ಕಾರಿ ನೌಕರನ ಮತ್ತು ಸಂಪೂರ್ಣವಾಗಿ ಆತನ ಮೇಲೆಯೇ ಅವಲಂಬಿಸಿರುವ ಮಗನನ್ನು ಅಥವಾ ಮಗಳನ್ನು ಅಥವಾ ಮಲ-ಮಗ ಅಥವಾ ಮಲ-ಮಗಳನ್ನು ಒಳಗೊಳ್ಳುತ್ತದೆ. ಆದರೆ ಸರ್ಕಾರಿ ನೌಕರನ ಮೇಲೆ ಯಾವುದೇ ರೀತಿಯಲ್ಲಿ ಅವಲಂಬಿಸಿರದ ಅಥವಾ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಯಾವ ಮಗುವಿನ ಅಥವಾ ಮಲ ಮಗುವಿನ ಅಭಿರಕ್ಷೆಯನ್ನು ಸರ್ಕಾರಿ ನೌಕರನಿಗೆ ನೀಡಲಾಗಿಲ್ಲವೋ ಆ ಮಗುವನ್ನು ಅಥವಾ ಮಲ-ಮಗುವನ್ನು ಒಳಗೊಳ್ಳುವುದಿಲ್ಲ;

(iii) ಸರ್ಕಾರಿ ನೌಕರನಿಗೆ ಅಥವಾ ಸರ್ಕಾರಿ ನೌಕರನ/ನೌಕರಳ ಹೆಂಡತಿಗೆ ಅಥವಾ ಗಂಡನಿಗೆ ರಕ್ತ ಸಂಬಂಧದ ಅಥವಾ ವಿವಾಹದ ಮೂಲಕ ಸಂಬಂಧಿಯಾದ ಮತ್ತು ಪೂರ್ಣವಾಗಿ ಸರ್ಕಾರಿ ನೌಕರರನ್ನೇ ಅವಲಂಬಿಸಿರುವ ಯಾರೇ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಡಿ) "ನಿಯಮಿಸಿದ ಪ್ರಾಧಿಕಾರ" ಎಂದರೆ ರಾಜ್ಯಸರ್ಕಾರವು ಈ ಸಂಬಂಧದಲ್ಲಿ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರ.

3. ಸಾಮಾನ್ಯ.- (1) ಪ್ರತಿಯೊಬ್ಬ ಸರ್ಕಾರಿ ನೌಕರನು, ಎಲ್ಲ ಕಾಲಗಳಲ್ಲಿಯೂ,-

(i) ಸಂಪೂರ್ಣ ನೀತಿ ನಿಷ್ಠೆಯನ್ನು ಹೊಂದಿರತಕ್ಕದ್ದು,

(ii) ಕರ್ತವ್ಯ ಶ್ರದ್ಧೆಯನ್ನು ಹೊಂದಿರತಕ್ಕದ್ದು; ಮತ್ತು

(iii) ಸರ್ಕಾರಿ ನೌಕರನಿಗೆ ತಕ್ಕದ್ದಲ್ಲದ ಯಾವುದನ್ನೂ ಮಾಡತಕ್ಕದ್ದಲ್ಲ.

(2) (i) ಮೇಲ್ವಿಚಾರಣಾ ಹುದ್ದೆಯನ್ನು ಹೊಂದಿರುವ ಪ್ರತಿಯೊಬ್ಬ ಸರ್ಕಾರಿ ನೌಕರನು, ತತ್ಕಾಲದಲ್ಲಿ ತನ್ನ ನಿಯಂತ್ರಣಕ್ಕೆ ಮತ್ತು ಅಧಿಕಾರಕ್ಕೆ ಒಳಪಟ್ಟಿರುವ ಎಲ್ಲಾ ಸರ್ಕಾರಿ ನೌಕರರ ನೀತಿ ನಿಷ್ಠೆಯನ್ನು ಮತ್ತು ಕರ್ತವ್ಯ ಶ್ರದ್ಧೆಯನ್ನು ಸುನಿಶ್ಚಿತಪಡಿಸಿಕೊಳ್ಳಲು ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(ii) ಯಾರೇ ಸರ್ಕಾರಿ ನೌಕರನು, ತನ್ನ ಪದೀಯ ಕರ್ತವ್ಯಗಳನ್ನು ನಿರ್ವಹಿಸುವಾಗ ಅಥವಾ ಆತನಿಗೆ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸುವಾಗ, ತನ್ನ ವರಿಷ್ಠಾಧಿಕಾರಿಯ ನಿರ್ದೇಶನದ ಮೇರೆಗೆ ಆತನು ಕಾರ್ಯನಿರ್ವಹಿಸುತ್ತಿರುವ ಸಂದರ್ಭದ ಹೊರತಾಗಿ ತನ್ನ ವಿವೇಚನಾನುಸಾರವಲ್ಲದೆ ಅನ್ಯಥಾ ಕಾರ್ಯನಿರ್ವಹಿಸತಕ್ಕದ್ದಲ್ಲ ಮತ್ತು ಆತನು ಅಂಥ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುತ್ತಿರುವಾಗ ಕಾರ್ಯಸಾಧ್ಯವಿರುವಲ್ಲೆಲ್ಲಾ ಲಿಖಿತ ನಿರ್ದೇಶನವನ್ನು ಪಡೆದುಕೊಳ್ಳತಕ್ಕದ್ದು ಮತ್ತು ಲಿಖಿತ ನಿರ್ದೇಶನವನ್ನು ಪಡೆಯಲು ಕಾರ್ಯಸಾಧ್ಯವಿಲ್ಲದಿರುವಾಗ, ಆತನು ಆ ತರುವಾಯ ಸಾಧ್ಯವಾದಷ್ಟು ಬೇಗನೆ ನಿರ್ದೇಶನದ ಬಗ್ಗೆ ಲಿಖಿತದಲ್ಲಿ ಸ್ಥಿರೀಕರಣವನ್ನು ಪಡೆದುಕೊಳ್ಳತಕ್ಕದ್ದು.

ವಿವರಣೆ.- (2)ನೇ ಉಪನಿಯಮದ (ii)ನೇ ಖಂಡದಲ್ಲಿ ಇರುವುದು ಯಾವುದೂ ಅಧಿಕಾರಗಳ ಮತ್ತು ಹೊಣೆಗಾರಿಕೆಗಳ ಹಂಚಿಕೆ ಯೋಜನೆಯ ಮೇರೆಗೆ ಸೂಚನೆಗಳನ್ನು ಪಡೆಯುವ ಅಗತ್ಯವಿಲ್ಲದಿರುವಾಗ, ವರಿಷ್ಠ ಅಧಿಕಾರಿಯಿಂದ ಅಥವಾ ಪ್ರಾಧಿಕಾರದಿಂದ ಸೂಚನೆಗಳನ್ನು ಅಥವಾ ಅವರ/ಅದರ ಅನುಮೋದನೆಯನ್ನು ಕೋರುವ ಮೂಲಕ ಸರ್ಕಾರಿ ನೌಕರನು ತನ್ನ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳಲು ಅವನನ್ನು ಶಕ್ತಗೊಳಿಸುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

4. **[1]ಸರ್ಕಾರವು ಪೋಷಿಸಿಕೊಂಡು ಬರುತ್ತಿರುವ ಕಂಪನಿಯಲ್ಲಿ ಅಥವಾ ಫರ್ಮಿನಲ್ಲಿ ಸರ್ಕಾರಿ ನೌಕರನ ಹತ್ತಿರದ ಸಂಬಂಧಿಗೆ ಉದ್ಯೋಗ.-** (1) ಯಾರೇ ಸರ್ಕಾರಿ ನೌಕರನು, ಯಾವುದೇ [ಕಂಪನಿಯಲ್ಲಿ ಅಥವಾ ಫರ್ಮ್]ನಲ್ಲಿ ತನ್ನ ಕುಟುಂಬದ ಯಾರೇ ಸದಸ್ಯನಿಗೆ ಉದ್ಯೋಗವನ್ನು ದೊರಕಿಸಿಕೊಡಲು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತನ್ನ ಸ್ಥಾನವನ್ನು ಅಥವಾ ಪ್ರಭಾವವನ್ನು ಬಳಸಿಕೊಳ್ಳತಕ್ಕದ್ದಲ್ಲ.

*1. ಅಧಿಸೂಚನೆ ಸಂಖ್ಯೆ ಸಿಆಸುಇ 4 ಎಸ್‌ಆರ್‌ಸಿ 76, ದಿನಾಂಕ 2ನೇ ನವೆಂಬರ್ 1976ರ ಮೂಲಕ ಪ್ರತಿಯೋಜಿಸಲಾಗಿದೆ.

(2) (i) ಯಾರೇ Iನೇ ದರ್ಜೆಯ ಅಧಿಕಾರಿಯು, ಸರ್ಕಾರದ ಪೂರ್ವ ಮಂಜೂರಾತಿ ಪಡೆದ ಹೊರತು ತನ್ನ ಮಗನಿಗೆ, ಮಗಳಿಗೆ ಅಥವಾ ಇತರ ಅವಲಂಬಿತರಿಗೆ, ಯಾವ ಕಂಪನಿಯಲ್ಲಿ ಅಥವಾ ಫರ್ಮಿನಲ್ಲಿ ಆತನು ಸರ್ಕಾರಿ ವ್ಯವಹಾರವನ್ನು ಹೊಂದಿರುವನೋ ಆ ಯಾವುದೇ [ಕಂಪನಿಯಲ್ಲಿ ಅಥವಾ ಫರ್ಮ್‌ನಲ್ಲಿ] ಅಥವಾ ಸರ್ಕಾರದೊಂದಿಗೆ ಸರ್ಕಾರಿ ವ್ಯವಹಾರಗಳನ್ನು ಹೊಂದಿರುವ ಯಾವುದೇ ಇತರ ಉದ್ಯಮದಲ್ಲಿ ಉದ್ಯೋಗವನ್ನು ಒಪ್ಪಿಕೊಳ್ಳಲು ಅನುಮತಿ ನೀಡತಕ್ಕದ್ದಲ್ಲ:

ಪರಂತು, ಉದ್ಯೋಗವನ್ನು ಒಪ್ಪಿಕೊಳ್ಳಲು ಸರ್ಕಾರದ ಪೂರ್ವಾನುಮತಿ ಪಡೆಯುವುದಕ್ಕಾಗಿ ಕಾಯಲು ಸಾಧ್ಯವಿಲ್ಲದಿರುವಾಗ ಅಥವಾ ಅನ್ಯಥಾ ತುರ್ತು ಎಂದು ಪರಿಗಣಿಸಿರುವಾಗ ಸರ್ಕಾರಕ್ಕೆ ಈ ವಿಷಯದ ಬಗ್ಗೆ ವರದಿ ಮಾಡತಕ್ಕದ್ದು ಮತ್ತು ಸರ್ಕಾರದ ಅನುಮತಿಗೆ ಒಳಪಟ್ಟು, ತಾತ್ಕಾಲಿಕವಾಗಿ ಉದ್ಯೋಗವನ್ನು ಒಪ್ಪಿಕೊಳ್ಳಬಹುದು.

(ii) ಸರ್ಕಾರಿ ನೌಕರನು, ತನ್ನ ಕುಟುಂಬದ ಸದಸ್ಯನು ಯಾವುದೇ ಕಂಪನಿಯಲ್ಲಿ ಅಥವಾ ಫರ್ಮ್‌ನಲ್ಲಿ ಉದ್ಯೋಗವನ್ನು ಒಪ್ಪಿಕೊಂಡಿದ್ದಾನೆ ಎಂಬುದು ತಿಳಿದ ಕೂಡಲೇ, ಹಾಗೆ ಒಪ್ಪಿಕೊಂಡಿರುವುದನ್ನು ನಿಯಮಿಸಿದ ಪ್ರಾಧಿಕಾರಿಗೆ ತಿಳಿಸತಕ್ಕದ್ದು ಮತ್ತು ಆ [ಕಂಪನಿಯೊಂದಿಗೆ ಅಥವಾ ಫರ್ಮ್] ನೊಂದಿಗೆ ಆತನು ಯಾವುದೇ ಸರ್ಕಾರಿ ವ್ಯವಹಾರ ಹೊಂದಿರುವನೇ ಅಥವಾ ಹೊಂದಿದ್ದನೇ ಎಂಬುದನ್ನು ಸಹ ತಿಳಿಸತಕ್ಕದ್ದು:

ಪರಂತು, Iನೇ ದರ್ಜೆ ಅಧಿಕಾರಿಯ ಸಂದರ್ಭದಲ್ಲಿ, (i)ನೇ ಖಂಡದ ಅಡಿಯಲ್ಲಿ ಆತನು ಸರ್ಕಾರದ ಮಂಜೂರಾತಿಯನ್ನು ಈಗಾಗಲೇ ಪಡೆದಿದ್ದರೆ, ಅಥವಾ ಸರ್ಕಾರಕ್ಕೆ ವರದಿ ಕಳುಹಿಸಿದ್ದರೆ ಹಾಗೆ ತಿಳಿಸುವ ಅಗತ್ಯವಿರತಕ್ಕದ್ದಲ್ಲ.

(3) ಯಾರೇ ಸರ್ಕಾರಿ ನೌಕರನು, ತನ್ನ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವಾಗ ಯಾವುದೇ ಕಂಪನಿಯೊಂದಿಗೆ ಅಥವಾ ಫರ್ಮಿನೊಂದಿಗೆ ಅಥವಾ ಯಾರೇ ಇತರ ವ್ಯಕ್ತಿಯೊಂದಿಗೆ ಅಥವಾ ಅವುಗಳಿಗೆ ಆತನ ಕುಟುಂಬದ ಯಾರೇ ಸದಸ್ಯನು ಆ [ಕಂಪನಿಯಲ್ಲಿ ಅಥವಾ ಫರ್ಮಿನಲ್ಲಿ] ಅಥವಾ ಆ ವ್ಯಕ್ತಿಯ ಅಧೀನದಲ್ಲಿ ನಿಯೋಜಿತನಾಗಿದ್ದರೆ ಆತನು ಅಥವಾ ಆತನ ಕುಟುಂಬದ ಯಾರೇ ಸದಸ್ಯನು ಅಂಥ ವಿಷಯದಲ್ಲಿ ಅಥವಾ ಕರಾರಿನಲ್ಲಿ

ಯಾವುದೇ ಬೇರೆ ರೀತಿಯಲ್ಲಿ ಹಿತಾಸಕ್ತಿ ಉಳ್ಳವನಾಗಿದ್ದರೆ, ಆ ಯಾವುದೇ ವಿಷಯದ ಬಗ್ಗೆ ವ್ಯವಹರಿಸತಕ್ಕದ್ದಲ್ಲ ಅಥವಾ ಯಾವುದೇ ಕಾಂಟ್ರಾಕ್ಟನ್ನು ನೀಡತಕ್ಕದ್ದಲ್ಲ ಅಥವಾ ಅದನ್ನು ಮಂಜೂರು ಮಾಡತಕ್ಕದ್ದಲ್ಲ ಮತ್ತು ಸರ್ಕಾರಿ ನೌಕರನು ಅಂತಹ ಪ್ರತಿಯೊಂದು ವಿಷಯದ ಅಥವಾ ಕರಾರಿನ ಬಗ್ಗೆ ತನ್ನ ವರಿಷ್ಠ ಅಧಿಕಾರಿಗೆ ತಿಳಿಸತಕ್ಕದ್ದು ಮತ್ತು ಕರಾರಿನ ಬಗೆಗಿನ ಆ ವಿಷಯವನ್ನು, ಯಾವ ಪ್ರಾಧಿಕಾರಿಗೆ ಆ ಬಗ್ಗೆ ತಿಳಿಸಲಾಗಿದೆಯೋ ಆ ಪ್ರಾಧಿಕಾರಿಯ ಸೂಚನೆಗನುಸಾರವಾಗಿ ಆ ತರುವಾಯ ಅವನ್ನು ವಿಲೆ ಮಾಡತಕ್ಕದ್ದು.

1. ಅಧಿಸೂಚನೆ ಸಂ. ಸಿಆಸುಇ 4 ಎಸ್‌ಆರ್‌ಸಿ 26 ದಿನಾಂಕ 2ನೇ ನವೆಂಬರ್ 1976ರ ಮೂಲಕ ಪ್ರತಿಯೋಜಿಸಲಾಗಿದೆ.

5. **ರಾಜಕೀಯದಲ್ಲಿ ಮತ್ತು ಚುನಾವಣೆಯಲ್ಲಿ ಭಾಗವಹಿಸುವುದು.–** (1) ಯಾರೇ ಸರ್ಕಾರಿ ನೌಕರನು, ಯಾವುದೇ ರಾಜಕೀಯ ಪಕ್ಷದ ಅಥವಾ ರಾಜಕಾರಣದಲ್ಲಿ ಭಾಗವಹಿಸುವಂಥ ಯಾವುದೇ ಸಂಘ ಸಂಸ್ಥೆಯ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಅವುಗಳೊಂದಿಗೆ ಅನ್ಯಥಾ ಸಂಬಂಧ ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ರಾಜಕೀಯ ಚಳುವಳಿ ಅಥವಾ ಚಟುವಟಿಕೆಯಲ್ಲಿ ಭಾಗವಹಿಸತಕ್ಕದ್ದಲ್ಲ, ಅದರ ಸಹಾಯಾರ್ಥ ವಂತಿಗೆ ನೀಡತಕ್ಕದ್ದಲ್ಲ ಅಥವಾ ಅದಕ್ಕೆ ಯಾವುದೇ ರೀತಿಯ ನೆರವು ನೀಡತಕ್ಕದ್ದಲ್ಲ.

(2) ಕಾನೂನಿನ ಮೂಲಕ ಸ್ಥಾಪಿತವಾದ ಸರ್ಕಾರವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉರುಳಿಸುವಂಥದ್ದಾಗಿರುವ ಅಥವಾ ಉರುಳಿಸುವ ಉದ್ದೇಶ ಹೊಂದಿರುವ ಯಾವುದೇ ಚಳುವಳಿಯಲ್ಲಿ ಅಥವಾ ಚಟುವಟಿಕೆಯಲ್ಲಿ ಅವನ ಕುಟುಂಬದ ಯಾರೇ ಸದಸ್ಯನೂ ಭಾಗವಹಿಸದಂತೆ, ಅದರ ಸಹಾಯಾರ್ಥ ವಂತಿಗೆ ನೀಡದಂತೆ ಅಥವಾ ಇನ್ನಾವುದೇ ರೀತಿಯಿಂದ ನೆರವಾಗುವುದನ್ನು ತಡೆಗಟ್ಟಲು ಪ್ರಯತ್ನಿಸುವುದು ಪ್ರತಿಯೊಬ್ಬ ಸರ್ಕಾರಿ ನೌಕರನ ಕರ್ತವ್ಯವಾಗಿರತಕ್ಕದ್ದು ಮತ್ತು ಅಂಥ ಯಾವುದೇ ಚಳುವಳಿಯಲ್ಲಿ ಅಥವಾ ಚಟುವಟಿಕೆಯಲ್ಲಿ ಅವನ ಕುಟುಂಬದ ಸದಸ್ಯರು ಭಾಗವಹಿಸುವುದನ್ನು, ವಂತಿಗೆ ನೀಡುವುದನ್ನು ಅಥವಾ ಬೇರೆ ರೀತಿಯಿಂದ ನೆರವು ನೀಡುವುದನ್ನು ತಡೆಗಟ್ಟಲು ಸರ್ಕಾರಿ ನೌಕರನಿಗೆ ಸಾಧ್ಯವಾಗದಿದ್ದರೆ, ಅವನು ಆ ವಿಷಯವನ್ನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

(3) ಯಾವುದೇ ಒಂದು ಪಕ್ಷವು ರಾಜಕೀಯ ಪಕ್ಷವೇ ಅಥವಾ ಯಾವುದೇ ಸಂಘಸಂಸ್ಥೆಯು ರಾಜಕೀಯದಲ್ಲಿ ಭಾಗವಹಿಸುತ್ತಿದೆಯೇ ಅಥವಾ ಯಾವುದೇ ಚಳವಳಿಯು ಅಥವಾ ಚಟುವಟಿಕೆಯು (2)ನೇ ಉಪನಿಯಮದ ವ್ಯಾಪ್ತಿಯೊಳಗೆ ಬರುತ್ತದೆಯೇ ಎಂಬ ಯಾವುದೇ ಪ್ರಶ್ನೆ ಉದ್ಭವಿಸಿದಾಗ, ಆ ಕುರಿತು ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(4) ಯಾರೇ ಸರ್ಕಾರಿ ನೌಕರನು ಯಾವುದೇ ವಿಧಾನಮಂಡಲದ ಅಥವಾ ಸ್ಥಳೀಯ ಪ್ರಾಧಿಕಾರದ ಚುನಾವಣಾ ಪ್ರಚಾರ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ಹಸ್ತಕ್ಷೇಪ ಮಾಡತಕ್ಕದ್ದಲ್ಲ ಅಥವಾ ಆ ಸಂಬಂಧದಲ್ಲಿ ತನ್ನ ಪ್ರಭಾವವನ್ನು ಬೀರತಕ್ಕದ್ದಲ್ಲ ಅಥವಾ ಅದರಲ್ಲಿ ಭಾಗವಹಿಸತಕ್ಕದ್ದಲ್ಲ:

ಪರಂತು,–

(i) ಅಂಥ ಚುನಾವಣೆಯಲ್ಲಿ ತನ್ನ ಮತವನ್ನು ಚಲಾಯಿಸಲು ಅರ್ಹನಾಗಿರುವ ಸರ್ಕಾರಿ ನೌಕರನು ಮತ ಹಾಕಲು ತನಗಿರುವ ಹಕ್ಕನ್ನು ಚಲಾಯಿಸಬಹುದು, ಆದರೆ ಆತನು ಹಾಗೆ ಮಾಡುವಾಗ, ತಾನು ಮತ ಹಾಕಲು ಉದ್ದೇಶಿಸಿರುವ ರೀತಿ ಅಥವಾ ಮತ ಹಾಕಿದ ರೀತಿಯ ಬಗ್ಗೆ ಯಾವುದೇ ಸೂಚನೆಯನ್ನು ನೀಡತಕ್ಕದ್ದಲ್ಲ.

(ii) ಚುನಾವಣೆ ನಡೆಯುವಾಗ, ಸರ್ಕಾರಿ ನೌಕರನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಕಾನೂನಿನ ಮೇರೆಗೆ, ಆತನ ಮೇಲೆ ವಿಧಿಸಲಾಗಿರುವ ಕರ್ತವ್ಯದ ಯುಕ್ತ ನಿರ್ವಹಣೆಯಲ್ಲಿ, ಆತನು ನೆರವು ನೀಡುತ್ತಾನೆಂಬ ಏಕೈಕ ಕಾರಣಕ್ಕಾಗಿ ಈ ಉಪನಿಯಮದ ಉಪಬಂಧಗಳನ್ನು ಉಲ್ಲಂಘಿಸಿರುವನೆಂದು ಭಾವಿಸತಕ್ಕದ್ದಲ್ಲ.

ವಿವರಣೆ:– ಸರ್ಕಾರಿ ನೌಕರನು ಯಾವುದೇ ಚುನಾವಣಾ ಚಿಹ್ನೆಯನ್ನು ತನ್ನ ಶರೀರದ, ವಾಹನದ ಅಥವಾ ನಿವಾಸದ ಮೇಲೆ ಪ್ರದರ್ಶಿಸಿದರೆ, ಅವನು, ಈ ಉಪ-ನಿಯಮದ ಅರ್ಥವ್ಯಾಪ್ತಿಯೊಳಗೆ ಚುನಾವಣೆಗೆ ಸಂಬಂಧಿಸಿದಂತೆ ತನ್ನ ಪ್ರಭಾವವನ್ನು ಬೀರುತ್ತಿದ್ದಾನೆ ಎಂದು ಪರಿಗಣಿಸತಕ್ಕದ್ದು.

6. **ಸರ್ಕಾರಿ ನೌಕರನು ಸಂಘ ಸಂಸ್ಥೆಗೆ ಸೇರಿಕೊಳ್ಳುವುದು.–** ಯಾರೇ ಸರ್ಕಾರಿ ನೌಕರನು, ಯಾವ ಸಂಘ ಸಂಸ್ಥೆಯ ಉದ್ದೇಶಗಳು ಅಥವಾ ಚಟುವಟಿಕೆಗಳು ಭಾರತದ ಸಾರ್ವಭೌಮತ್ವದ ಮತ್ತು ಅಖಂಡತೆಯ ಅಥವಾ ಸಾರ್ವಜನಿಕ ಸುವ್ಯವಸ್ಥೆಯ ಅಥವಾ ನೈತಿಕತೆಯ ಹಿತಾಸಕ್ತಿಗೆ ಧಕ್ಕೆಯುಂಟು ಮಾಡುವವೋ ಆ ಸಂಘ ಸಂಸ್ಥೆಗೆ ಸೇರಿಕೊಳ್ಳತಕ್ಕದ್ದಲ್ಲ ಅಥವಾ ಅದರ ಸದಸ್ಯನಾಗಿ ಮುಂದುವರಿಯತಕ್ಕದ್ದಲ್ಲ.

7. [1][xxx]

1. ಅಧಿಸೂಚನೆ ಸಂಖ್ಯೆ ಜಿಎಡಿ 43 ಎಸ್‌ಎಸ್‌ಆರ್ 67, ದಿನಾಂಕ 4ನೇ ಏಪ್ರಿಲ್ 1968ರ ಮೂಲಕ ಬಿಟ್ಟುಬಿಡಲಾಗಿದೆ.

8. ಪ್ರದರ್ಶನ ಮತ್ತು ಮುಷ್ಕರಗಳು.- ಯಾರೇ ಸರ್ಕಾರಿ ನೌಕರನು,-

(i) ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆಯ, ದೇಶದ ಭದ್ರತೆಯ, ವಿದೇಶಿ ರಾಷ್ಟ್ರಗಳೊಂದಿಗಿನ ಸ್ನೇಹಯುತ ಸಂಬಂಧದ ಹಿತಾಸಕ್ತಿಗೆ, ಸಾರ್ವಜನಿಕ ಸುವ್ಯವಸ್ಥೆಗೆ, ಸಭ್ಯತೆಗೆ ಅಥವಾ ನೈತಿಕತೆಗೆ ಧಕ್ಕೆಯುಂಟು ಮಾಡುವ ಅಥವಾ ನ್ಯಾಯಾಲಯ ನಿಂದನೆಗೆ, ಮಾನಹಾನಿಗೆ ಅಥವಾ ಅಪರಾಧಕ್ಕೆ ಪ್ರಚೋದನೆ ನೀಡುವುದನ್ನು ಒಳಗೊಂಡಿರುವ ಯಾವುದೇ ಪ್ರದರ್ಶನದಲ್ಲಿ ತನ್ನನ್ನು ತೊಡಗಿಸಿಕೊಳ್ಳತಕ್ಕದ್ದಲ್ಲ ಅಥವಾ ಭಾಗವಹಿಸತಕ್ಕದ್ದಲ್ಲ.

[ii] ಎಷ್ಟೇ ಸಂಖ್ಯೆಯ ಸರ್ಕಾರಿ ನೌಕರರೊಡನೆ ಸೇರಿ ಯಾವುದೇ ಬಗೆಯ ಮುಷ್ಕರಕ್ಕೆ ತೊಡಗತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಅದಕ್ಕೆ ಪ್ರೇರೇಪಣೆ ಮಾಡತಕ್ಕದ್ದಲ್ಲ, ಪ್ರಚೋದನೆ ಮಾಡತಕ್ಕದ್ದಲ್ಲ ಅಥವಾ ದುಷ್ಪ್ರೇರಣೆ ಮಾಡತಕ್ಕದ್ದಲ್ಲ][2].

2. ಅಧಿಸೂಚನೆ ಸಂಖ್ಯೆ ಜಿಎಡಿ 96 ಎಸ್‌ಎಸ್‌ಆರ್ 66, ದಿನಾಂಕ 15ನೇ ಸೆಪ್ಟೆಂಬರ್ 1966ರ ಮೂಲಕ ಸೇರಿಸಲಾಗಿದೆ.

[3][**ವಿವರಣೆ.**-ಈ ನಿಯಮದ ಉದ್ದೇಶಗಳಿಗಾಗಿ "ಮುಷ್ಕರ" ಎಂದರೆ (ಕರ್ತವ್ಯದಿಂದ ಅನಧಿಕೃತ ಗೈರುಹಾಜರಾಗುವುದೂ ಸೇರಿದಂತೆ) ಸರ್ಕಾರಿ ನೌಕರರ ಒಂದು ಗುಂಪು ಒಟ್ಟಾಗಿ ಸೇರಿಕೊಂಡು ಕೆಲಸ ಮಾಡುವುದನ್ನು ನಿಲ್ಲಿಸುವುದು ಅಥವಾ ಎಷ್ಟೇ ಸಂಖ್ಯೆಯ ಸರ್ಕಾರಿ ನೌಕರರು ಒಟ್ಟಾಗಿ ಸೇರಿ ಅಥವಾ ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ಕೆಲಸ ಮಾಡಲು ನಿರಾಕರಿಸುವುದು ಎಂದು ಅರ್ಥ].

3. ಅಧಿಸೂಚನೆ ಸಂಖ್ಯೆ ಜಿಎಡಿ 96 ಎಸ್‌ಎಸ್‌ಆರ್ 66, ದಿನಾಂಕ 15ನೇ ಸೆಪ್ಟೆಂಬರ್ 1966ರ ಮೂಲಕ ಪ್ರತಿನಿಯೋಜಿಸಲಾಗಿದೆ.

9. ಪತ್ರಿಕೆ ಅಥವಾ ಆಕಾಶವಾಣಿ ಜೊತೆ ಸಂಬಂಧ.- (i) ಯಾರೇ ಸರ್ಕಾರಿ ನೌಕರನು, ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆದ ಹೊರತು, ಯಾವುದೇ ವೃತ್ತ ಪತ್ರಿಕೆ ಅಥವಾ ಇತರ ನಿಯತಕಾಲಿಕ ಪ್ರಕಟಣೆಯ ಪೂರ್ಣ ಅಥವಾ ಭಾಗಶಃ ಒಡೆತನವನ್ನು ಹೊಂದಿರತಕ್ಕದ್ದಲ್ಲ ಅಥವಾ ಅವುಗಳ ಸಂಪಾದನಾ ಕಾರ್ಯ ಅಥವಾ ವ್ಯವಸ್ಥಾಪನಾ ಕಾರ್ಯಮಾಡತಕ್ಕದ್ದಲ್ಲ ಅಥವಾ ಅವುಗಳಲ್ಲಿ ಭಾಗವಹಿಸತಕ್ಕದ್ದಲ್ಲ.

[1][(ii) ಯಾರೇ ಸರ್ಕಾರಿ ನೌಕರನು, ಸರ್ಕಾರದ ಅಥವಾ ನಿಯಮಿಸಲಾದ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆದ ಹೊರತು ಅಥವಾ ತನ್ನ ಕರ್ತವ್ಯಗಳ ಪ್ರಾಮಾಣಿಕ ನಿರ್ವಹಣೆಯ ಸಂದರ್ಭದಲ್ಲಿ ಹೊರತು,-

(ಎ) ಪುಸ್ತಕವನ್ನು ತಾನೇ ಅಥವಾ ಪ್ರಕಾಶಕರ ಮೂಲಕ ಪ್ರಕಟಿಸತಕ್ಕದ್ದಲ್ಲ ಅಥವಾ ಪುಸ್ತಕಕ್ಕೆ ಅಥವಾ ಲೇಖನಗಳ ಸಂಕಲನಕ್ಕೆ ಲೇಖನವನ್ನು ಬರೆದುಕೊಡತಕ್ಕದ್ದಲ್ಲ;

(ಬಿ) ಆಕಾಶವಾಣಿ ಪ್ರಸಾರದಲ್ಲಿ ಭಾಗವಹಿಸತಕ್ಕದ್ದಲ್ಲ ಅಥವಾ ಯಾವುದೇ ವೃತ್ತ ಪತ್ರಿಕೆಗೆ ಅಥವಾ ನಿಯತಕಾಲಿಕೆಗೆ ತನ್ನ ಹೆಸರಿನಲ್ಲಾಗಲೀ ಅಥವಾ ಅನಾಮಧೇಯವಾಗಿಯಾಗಲೀ ಅಥವಾ ಗುಪ್ತನಾಮದಿಂದಾಗಲೀ ಅಥವಾ ಬೇರೊಬ್ಬ ವ್ಯಕ್ತಿಯ ಹೆಸರಿನಲ್ಲಾಗಲೀ ಲೇಖನವನ್ನು ಬರೆಯತಕ್ಕದ್ದಲ್ಲ ಅಥವಾ ಪತ್ರವನ್ನು ಬರೆಯತಕ್ಕದ್ದಲ್ಲ:

ಪರಂತು,-

(i) ಅಂಥ ಪ್ರಕಟಣೆಯು ಪ್ರಕಾಶಕರ ಮೂಲಕ ಆಗಿದ್ದರೆ, ಮತ್ತು ಅದು ಸಂಪೂರ್ಣವಾಗಿ ಸಾಹಿತ್ಯಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ್ದಾಗಿದ್ದರೆ; ಅಥವಾ

(ii) ಅಂಥ ಲೇಖನವು ಅಥವಾ ಪ್ರಸಾರವು ಅಥವಾ ಬರವಣಿಗೆಯು ಸಂಪೂರ್ಣವಾಗಿ ಸಾಹಿತ್ಯಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ್ದಾಗಿದ್ದರೆ

- ಅಂಥ ಯಾವುದೇ ಅನುಮತಿಯು ಅಗತ್ಯವಿರತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಜಿಎಡಿ 34 ಎಸ್‌ಎಸ್‌ಆರ್ 68, ದಿನಾಂಕ 19ನೇ ಆಗಸ್ಟ್ 1968ರ ಮೂಲಕ ಪ್ರತಿಯೋಜಿಸಲಾಗಿದೆ.

10. ಸರ್ಕಾರವನ್ನು ಟೀಕಿಸುವುದು.- ಯಾರೇ ಸರ್ಕಾರಿ ನೌಕರನು, ಆಕಾಶವಾಣಿ ಪ್ರಸಾರದಲ್ಲಾಗಲಿ ಅಥವಾ ಅವನ ಹೆಸರಿನಲ್ಲಿ ಅಥವಾ ಅನಾಮಧೇಯವಾಗಿ, ಗುಪ್ತನಾಮದಲ್ಲಿ ಅಥವಾ ಬೇರೊಬ್ಬನ ಹೆಸರಿನಲ್ಲಿ ಪ್ರಕಟಿಸಲಾದ ಇತರ ಯಾವುದೇ ದಸ್ತಾವೇಜಿನಲ್ಲಿ ಅಥವಾ ಪತ್ರಿಕೆಗೆ ಬರೆದ ಯಾವುದೇ ಪತ್ರದಲ್ಲಿ ಅಥವಾ ಯಾವುದೇ ಸಾರ್ವಜನಿಕ ಹೇಳಿಕೆಯಲ್ಲಿ,-

(i) ಕರ್ನಾಟಕ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ಪ್ರಸ್ತುತ ಅಥವಾ ಇತ್ತೀಚಿನ ಯಾವುದೇ ನೀತಿಯ ಅಥವಾ ಕ್ರಮದ ಬಗ್ಗೆ ಪ್ರತಿಕೂಲ ಟೀಕೆಯ ಪರಿಣಾಮ ಹೊಂದಿರುವಂಥ:

[ಪರಂತು, ಈ ಖಂಡದಲ್ಲಿ ಒಳಗೊಂಡಿರುವುದು ಯಾವುದೂ, ಸರ್ಕಾರಿ ನೌಕರನು, ಸರ್ಕಾರಿ ನೌಕರರ ಕಾರ್ಮಿಕ ಸಂಘದ ಅಥವಾ ಸಂಘದ ಪದಾಧಿಕಾರಿಯಾಗಿ ಅಂಥ ಸರ್ಕಾರಿ ನೌಕರರ ಸೇವಾ ಸ್ಥಿತಿಗತಿ ರಕ್ಷಿಸುವ ಅಥವಾ ಅವುಗಳಲ್ಲಿ

ಪಘಾರಣೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಗಳಿಗಾಗಿ ವ್ಯಕ್ತಪಡಿಸಿದ ಪ್ರಾಮಾಣಿಕ ಅಭಿಪ್ರಾಯಗಳಿಗೆ ಅನ್ವಯಿಸತಕ್ಕದ್ದಲ್ಲ; ಅಥವಾ]

1. ಅಧಿಸೂಚನೆ ಸಂಖ್ಯೆ ಜಿಎಡಿ 6 ಎಸ್‌ಎಸ್‌ಆರ್ 73, ದಿನಾಂಕ 9ನೇ ಅಕ್ಟೋಬರ್ 1973 (ಕೆಜಿಡಿ 23 ಅಕ್ಟೋಬರ್ 1973)ರ ಮೂಲಕ ಪ್ರತಿಯೋಜಿಸಲಾಗಿದೆ.

(ii) ಕರ್ನಾಟಕ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಅಥವಾ ಇತರ ಯಾವುದೇ ರಾಜ್ಯ ಸರ್ಕಾರದ ನಡುವಿನ ಸಂಬಂಧಗಳನ್ನು ಇಕ್ಕಟ್ಟಿಗೆ ಸಿಲುಕಿಸುವಂಥ; ಅಥವಾ

(iii) ಕೇಂದ್ರ ಸರ್ಕಾರದ ಮತ್ತು ಯಾವುದೇ ವಿದೇಶಿ ಸರ್ಕಾರದ ನಡುವಿನ ಸಂಬಂಧಗಳನ್ನು ಇಕ್ಕಟ್ಟಿಗೆ ಸಿಲುಕಿಸುವಂಥ ಸಂಗತಿಗಳ ನಿರೂಪಣೆ ಮಾಡತಕ್ಕದ್ದಲ್ಲ ಅಥವಾ ಅಭಿಪ್ರಾಯ ವ್ಯಕ್ತಪಡಿಸತಕ್ಕದ್ದಲ್ಲ

– ಯಾವುದೇ ಸಂಗತಿಯ ನಿರೂಪಣೆ ಮಾಡತಕ್ಕದ್ದಲ್ಲ ಅಥವಾ ಅಭಿಪ್ರಾಯ ವ್ಯಕ್ತಪಡಿಸತಕ್ಕದ್ದಲ್ಲ:

ಪರಂತು, ಈ ನಿಯಮದಲ್ಲಿರುವುದು ಯಾವುದೂ, ಸರ್ಕಾರಿ ನೌಕರನು, ತನ್ನ ಪದೀಯ ಸಾಮರ್ಥ್ಯದಲ್ಲಿ ಅಥವಾ ತನಗೆ ವಹಿಸಲಾಗಿರುವ ಕರ್ತವ್ಯವನ್ನು ವಿಧ್ಯುಕ್ತವಾಗಿ ನಿರ್ವಹಿಸುವಾಗ ನೀಡಿದ ಯಾವುದೇ ಹೇಳಿಕೆಗೆ ಅಥವಾ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಅನ್ವಯವಾಗತಕ್ಕದ್ದಲ್ಲ.

11. **ಸಮಿತಿ ಅಥವಾ ಇತರ ಯಾವುದೇ ಪ್ರಾಧಿಕಾರದ ಮುಂದೆ ಸಾಕ್ಷ್ಯ ನೀಡುವುದು.–** (1) (3)ನೇ ಉಪನಿಯಮದಲ್ಲಿ ಉಪಬಂಧಿಸಿರುವುದನ್ನು ಉಳಿದು, ಯಾರೇ ಸರ್ಕಾರಿ ನೌಕರರು, ಸರ್ಕಾರದಿಂದ ಪೂರ್ವ ಮಂಜೂರಾತಿ ಪಡೆದ ಹೊರತು, ಯಾರೇ ವ್ಯಕ್ತಿಯು, ಸಮಿತಿಯು ಅಥವಾ ಪ್ರಾಧಿಕಾರವು ಮಾಡುವ ಯಾವುದೇ ವಿಚಾರಣೆಯ ಸಂಬಂಧದಲ್ಲಿ ಸಾಕ್ಷ್ಯ ನೀಡತಕ್ಕದಲ್ಲ.

(2) (1)ನೇ ಉಪನಿಯಮದ ಮೇರೆಗೆ ಯಾವುದೇ ಮಂಜೂರಾತಿ ನೀಡಿರುವಾಗ, ಅಂಥ ಸಾಕ್ಷ್ಯವನ್ನು ನೀಡುವ ಯಾರೇ ಸರ್ಕಾರಿ ನೌಕರನು ಕರ್ನಾಟಕ ಸರ್ಕಾರದ, ಕೇಂದ್ರ ಸರ್ಕಾರದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ನೀತಿಯನ್ನು ಅಥವಾ ಕ್ರಮವನ್ನು ಟೀಕಿಸತಕ್ಕದ್ದಲ್ಲ.

(3) ಈ ನಿಯಮದಲ್ಲಿರುವುದು ಯಾವುದೂ,–

(ಎ) ಕರ್ನಾಟಕ ಸರ್ಕಾರವು, ಕೇಂದ್ರ ಸರ್ಕಾರವು, ಸಂಸತ್ತು ಅಥವಾ ರಾಜ್ಯ ವಿಧಾನಮಂಡಲವು ನೇಮಕ ಮಾಡಿದ ಪ್ರಾಧಿಕಾರದ ಮುಂದೆ ವಿಚಾರಣೆಯಲ್ಲಿ ನೀಡಿದ ಸಾಕ್ಷ್ಯಕ್ಕೆ; ಅಥವಾ

(ಬಿ) ಯಾವುದೇ ನ್ಯಾಯಿಕ ವಿಚಾರಣೆಯಲ್ಲಿ ನೀಡಿದ ಸಾಕ್ಷ್ಯಕ್ಕೆ; ಅಥವಾ

(ಸಿ) ಕರ್ನಾಟಕ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ಅಧೀನದಲ್ಲಿರುವ ಪ್ರಾಧಿಕಾರವು ಆದೇಶ ಮಾಡಿರುವ ಇಲಾಖಾ ವಿಚಾರಣೆಯಲ್ಲಿ ನೀಡಿದ ಸಾಕ್ಷ್ಯಕ್ಕೆ

– ಅನ್ವಯವಾಗತಕ್ಕದ್ದಲ್ಲ.

12. **ಮಾಹಿತಿಯನ್ನು ಅನಧಿಕೃತವಾಗಿ ನೀಡಬಾರದು.–** ಯಾರೇ ಸರ್ಕಾರಿ ನೌಕರನು, ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಅನುಸಾರವಾಗಿ ಅಥವಾ ಆತನಿಗೆ ವಹಿಸಲಾಗಿರುವ ಕರ್ತವ್ಯಗಳ ಪ್ರಾಮಾಣಿಕ ನಿರ್ವಹಣೆಯ ಹೊರತು, ಯಾವುದೇ ಸರ್ಕಾರಿ ದಸ್ತಾವೇಜನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಮಾಹಿತಿಯನ್ನು ಯಾರೇ ಸರ್ಕಾರಿ ನೌಕರನಿಗೆ ಅಥವಾ ಅಂಥ ದಸ್ತಾವೇಜನ್ನು ಅಥವಾ ಮಾಹಿತಿಯನ್ನು ಯಾವ ವ್ಯಕ್ತಿಗೆ ನೀಡಲು ಆತನಿಗೆ ಅಧಿಕಾರ ನೀಡಿಲ್ಲವೋ ಆ ಯಾರೇ ಇತರ ವ್ಯಕ್ತಿಗೆ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ನೀಡತಕ್ಕದ್ದಲ್ಲ.

ವಿವರಣೆ:– ಸರ್ಕಾರಿ ನೌಕರನು, (ಕಚೇರಿ ಮುಖ್ಯಸ್ಥರಿಗೆ ಅಥವಾ ಇಲಾಖಾ ಮುಖ್ಯಸ್ಥರಿಗೆ ಅಥವಾ ರಾಜ್ಯಪಾಲರಿಗೆ ನೀಡುವ ತನ್ನ ಮನವಿಯಲ್ಲಿ) ಯಾವುದನ್ನು ನೋಡಲು ಅವನಿಗೆ ಅಧಿಕಾರ ನೀಡಿಲ್ಲವೋ ಅಥವಾ ತನ್ನ ವೈಯಕ್ತಿಕ ಅಭಿರಕ್ಷೆಯಲ್ಲಿ ಅಥವಾ ವೈಯಕ್ತಿಕ ಉದ್ದೇಶಗಳಿಗಾಗಿ ಇಟ್ಟುಕೊಳ್ಳಲು ಅವನಿಗೆ ಅಧಿಕಾರ ನೀಡಿಲ್ಲವೋ ಆ ಯಾವುದೇ ಪತ್ರವನ್ನು ಅಥವಾ ಸುತ್ತೋಲೆಯನ್ನು ಅಥವಾ ಕಚೇರಿ ಜ್ಞಾಪನವನ್ನು ಉದ್ಧರಿಸಿದರೆ ಅಥವಾ ಯಾವುದೇ ಪತ್ರದಿಂದ, ಸುತ್ತೋಲೆಯಿಂದ ಅಥವಾ ಕಚೇರಿ ಜ್ಞಾಪನದಿಂದ ಅಥವಾ ಯಾವುದೇ ಕಡತದಲ್ಲಿರುವ ಟಿಪ್ಪಣಿಗಳಿಂದ ಉದ್ಧರಿಸಿದರೆ, ಅದು ಈ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಮಾಹಿತಿಯ ಅನಧಿಕೃತ ನೀಡಿಕೆ ಎನಿಸಿಕೊಳ್ಳತಕ್ಕದ್ದು.

13. **ವಂತಿಗೆ.–** ಯಾರೇ ಸರ್ಕಾರಿ ನೌಕರನು ಸರ್ಕಾರದ ಅಥವಾ ನಿಯಮಿಸಿದ ಪ್ರಾಧಿಕಾರದ ಪೂರ್ವ ಮಂಜೂರಾತಿಯ ಹೊರತು ಯಾವುದೇ ಬಗೆಯ ಉದ್ದೇಶಕ್ಕಾಗಿ ನಗದಾಗಿ ಅಥವಾ ವಸ್ತುಗಳ ರೂಪದಲ್ಲಿ ಯಾವುದೇ

ನಿಧಿಗಳಿಗೆ ಅಥವಾ ಇತರೆ ಸಂಗ್ರಹಣೆಗಳಿಗೆ ವಂತಿಗೆಗಳನ್ನು ಕೇಳತಕ್ಕದ್ದಲ್ಲ ಅಥವಾ ಸ್ವೀಕರಿಸತಕ್ಕದ್ದಲ್ಲ ಅಥವಾ ಯಾವುವೇ ನಿಧಿಗಳನ್ನು ಎತ್ತುವಲ್ಲಿ ಅಥವಾ ಇತರ ಸಂಗ್ರಹಣೆಗಳನ್ನು ಮಾಡುವಲ್ಲಿ ಅನ್ಯಥಾ ಸ್ವತಃ ಸಂಬಂಧ ಹೊಂದಿರತಕ್ಕದ್ದಲ್ಲ.

14. **ದಾನಗಳು.-** (1) ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾರೇ ಸರ್ಕಾರಿ ನೌಕರನು, ಯಾವುದೇ ರೀತಿಯ ದಾನವನ್ನು ಸ್ವೀಕರಿಸತಕ್ಕದ್ದಲ್ಲ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಅಥವಾ [ಅವನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಇತರ ಯಾರೇ ವ್ಯಕ್ತಿಯು] ಯಾವುದೇ ದಾನವನ್ನು ಸ್ವೀಕರಿಸಲು ಅನುಮತಿಸತಕ್ಕದ್ದಲ್ಲ.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಆರ್‌ಸಿ 76 ದಿನಾಂಕ 2ನೇ ನವೆಂಬರ್ 1976 (ಕೆಜಿಡಿ 18ನೇ ನವೆಂಬರ್ 1976)ರ ಮೂಲಕ ಪ್ರತಿಯೋಜಿಸಲಾಗಿದೆ.

ವಿವರಣೆ:- "ದಾನ" ಎಂಬ ಅಭಿವ್ಯಕ್ತಿಯು, ಸರ್ಕಾರಿ ನೌಕರನೊಡನೆ ಯಾವುದೇ ರೀತಿಯ ಅಧಿಕೃತ ವ್ಯವಹಾರ ಹೊಂದಿರದ ಹತ್ತಿರದ ಸಂಬಂಧಿಯನ್ನು ಅಥವಾ ಆಪ್ತ ಸ್ನೇಹಿತನನ್ನು ಹೊರತುಪಡಿಸಿ ಯಾರೇ ವ್ಯಕ್ತಿಯು ಒದಗಿಸಿದ ಉಚಿತ ಸಾರಿಗೆ, ಊಟ, ವಸತಿ ಅಥವಾ ಇತರ ಸೇವೆ ಅಥವಾ ಯಾವುದೇ ಇತರ ಹಣಕಾಸಿನ ಅನುಕೂಲಗಳನ್ನು ಒಳಗೊಳ್ಳುತ್ತದೆ.

ಟಿಪ್ಪಣಿ I: ಸಾಂದರ್ಭಿಕವಾಗಿ ನೀಡುವ ಊಟ, ವಾಹನದಲ್ಲಿ ಕರೆದೊಯ್ಯುವುದು ಅಥವಾ ಇನ್ನಿತರ ಸ್ಥಳೀಯ ಆದರಾತಿಥ್ಯವನ್ನು ದಾನವೆಂದು ಭಾವಿಸತಕ್ಕದ್ದಲ್ಲ.

ಟಿಪ್ಪಣಿ II: ಸರ್ಕಾರಿ ನೌಕರನು, ತನ್ನ ಜೊತೆ ಅಧಿಕೃತ ವ್ಯವಹಾರವನ್ನು ಹೊಂದಿರುವ ವ್ಯಕ್ತಿಯಿಂದಾಗಲಿ ಅಥವಾ ಕೈಗಾರಿಕೆಯ ಅಥವಾ ವಾಣಿಜ್ಯ ಫರ್ಮಿನಿಂದಾಗಲಿ ಅಥವಾ ಸಂಸ್ಥೆಗಳಿಂದಾಗಲಿ ವೈಭವದ ಆತಿಥ್ಯವನ್ನು ಅಥವಾ ಪದೇಪದೇ ಆತಿಥ್ಯ ಸ್ವೀಕರಿಸುವುದನ್ನು ತಪ್ಪಿಸಿಕೊಳ್ಳತಕ್ಕದ್ದು.

(2) ವಿವಾಹಗಳು, ವಾರ್ಷಿಕೋತ್ಸವಗಳು, ಉತ್ತರಕ್ರಿಯೆಗಳು ಅಥವಾ ಧಾರ್ಮಿಕ ಸಮಾರಂಭಗಳಂಥ ಸಂದರ್ಭಗಳಲ್ಲಿ ಆ ರೀತಿಯಾಗಿ ದಾನಕೊಡುವುದು ರೂಢಿಯಲ್ಲಿರುವ ಧಾರ್ಮಿಕ ಅಥವಾ ಸಾಮಾಜಿಕ ಪದ್ಧತಿಗನುಗುಣವಾಗಿದ್ದರೆ, ಸರ್ಕಾರಿ ನೌಕರನು ತನ್ನ ಹತ್ತಿರದ ಸಂಬಂಧಿಗಳಿಂದ ದಾನವನ್ನು ಸ್ವೀಕರಿಸಬಹುದು.

– ಆದರೆ ಯಾವುದೇ ಅಂಥ ದಾನದ ಮೌಲ್ಯವು,-

[1](i) ಯಾವುದೇ 'ಎ' ಸಮೂಹದ ಅಥವಾ 'ಬಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 5000 ರೂಗಿಂತ ಹೆಚ್ಚಾಗಿದ್ದರೆ;

(ii) ಯಾವುದೇ 'ಸಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 2500 ರೂ ಗಿಂತ ಹೆಚ್ಚಾಗಿದ್ದರೆ; ಮತ್ತು

(iii) ಯಾವುದೇ 'ಡಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ, 1250 ರೂ ಗಿಂತ ಹೆಚ್ಚಾಗಿದ್ದರೆ].

– ಅವನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಸಿಆಸುಇ 6 ಎಸ್‌ಆರ್‌ಸಿ 2004, ದಿನಾಂಕ 16ನೇ ನವೆಂಬರ್ 2006ರ ಮೂಲಕ ಪ್ರತಿಯೋಜಿಸಲಾಗಿದೆ.

(3) (2)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಿದ ಸಂದರ್ಭಗಳಲ್ಲಿ, ಸರ್ಕಾರಿ ನೌಕರನು ತನ್ನೊಂದಿಗೆ ಯಾವುದೇ ರೀತಿಯ ಅಧಿಕೃತ ವ್ಯವಹಾರಗಳನ್ನು ಹೊಂದಿಲ್ಲದ ಆಪ್ತ ಸ್ನೇಹಿತನಿಂದ ದಾನಗಳನ್ನು ಸ್ವೀಕರಿಸಬಹುದು.

ಆದರೆ ಯಾವುದೇ ಅಂಥ ದಾನದ ಮೌಲ್ಯವು,-

[(i) ಯಾವುದೇ 'ಎ' ಸಮೂಹದ ಅಥವಾ 'ಬಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 2500 ರೂಗಿಂತ ಹೆಚ್ಚಾಗಿದ್ದರೆ;

(ii) ಯಾವುದೇ 'ಸಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 1000 ರೂ ಗಿಂತ ಹೆಚ್ಚಾಗಿದ್ದರೆ ಮತ್ತು;

(iii) ಯಾವುದೇ 'ಡಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 500 ರೂ ಗಿಂತ ಹೆಚ್ಚಾಗಿದ್ದರೆ]

– ಅವನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಸಿಆಸುಇ 6 ಎಸ್‌ಆರ್‌ಸಿ 2004, ದಿನಾಂಕ 16ನೇ ನವೆಂಬರ್ 2006ರ ಮೂಲಕ ಪ್ರತಿಯೋಜಿಸಲಾಗಿದೆ.

(4) ಇತರ ಯಾವುದೇ ಸಂದರ್ಭದಲ್ಲಿ, ಸರ್ಕಾರಿ ನೌಕರನು ಯಾವುದೇ ದಾನವನ್ನು,-

– ಆದರೆ ಮೌಲ್ಯವು,-

(i) ಯಾವುದೇ 'ಎ' ಸಮೂಹದ ಅಥವಾ 'ಬಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 150 ರೂ ಗಿಂತ ಹೆಚ್ಚಾಗಿದ್ದರೆ; ಮತ್ತು

(ii) ಯಾವುದೇ 'ಸಿ' ಸಮೂಹದ ಅಥವಾ 'ಡಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 250 ರೂ. ಗಿಂತ ಹೆಚ್ಚಾಗಿದ್ದರೆ].

ಅಧಿಸೂಚನೆ ಸಂಖ್ಯೆ ಸಿಆಸುಇ 6 ಎಸ್‌ಆರ್‌ಸಿ 2004 ದಿನಾಂಕ 16ನೇ ನವೆಂಬರ್, 2006ರ ಮೂಲಕ ಪ್ರತಿಯೋಜಿಸಲಾಗಿದೆ.

– ಸರ್ಕಾರದ ಮಂಜೂರಾತಿಯನ್ನು ಪಡೆಯದೆ ಸ್ವೀಕರಿಸತಕ್ಕದ್ದಲ್ಲ [ಅಥವಾ ಅವನ ಕುಟುಂಬದ ಯಾರೇ ಸದಸ್ಯನು ಅಥವಾ ಅವನ ಪರವಾಗಿ ಕಾರ್ಯನಿರ್ವಹಿಸುವ ಯಾರೇ ಇತರ ವ್ಯಕ್ತಿಯು ಸ್ವೀಕರಿಸಲು] ಅನುಮತಿಸತಕ್ಕದ್ದಲ್ಲ.

ಅಧಿಸೂಚನೆ ಸಂಖ್ಯೆ ಸಿಆಸುಇ 4 ಎಸ್‌ಆರ್‌ಸಿ 76, ದಿನಾಂಕ 2ನೇ ನವೆಂಬರ್, 1976, ಕೆಜಿಡಿ 18ನೇ ನವೆಂಬರ್ 1976ರ ಮೂಲಕ ಸೇರಿಸಲಾಗಿದೆ.

14ಎ. **ವಧು/ ವರದಕ್ಷಿಣೆ.**– ಯಾರೇ ಸರ್ಕಾರಿ ನೌಕರನು,–

(i) ವಧು/ ವರದಕ್ಷಿಣೆಯನ್ನು ಕೊಡತಕ್ಕದ್ದಲ್ಲ ಅಥವಾ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಕೊಡಲು ಅಥವಾ ತೆಗೆದುಕೊಳ್ಳಲು ಪ್ರೇರಿಸತಕ್ಕದ್ದಲ್ಲ; ಅಥವಾ

(ii) ವಧುವಿನ ಅಥವಾ ಸಂದರ್ಭಾನುಸಾರ ವರನ ತಂದೆ ತಾಯಿಯರನ್ನು ಅಥವಾ ಪೋಷಕರನ್ನು ವಧು/ವರದಕ್ಷಿಣೆಯನ್ನು ಕೊಡುವಂತೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಒತ್ತಾಯಪಡಿಸತಕ್ಕದ್ದಲ್ಲ.

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ ವಧು/ವರದಕ್ಷಿಣೆಯು, ವಧು/ವರದಕ್ಷಿಣೆ ನಿಷೇಧ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 28)ರಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು].

ಅಧಿಸೂಚನೆ ಸಂಖ್ಯೆ ಸಿಆಸುಇ 4 ಎಸ್‌ಆರ್‌ಸಿ 76, ದಿನಾಂಕ 2ನೇ ನವೆಂಬರ್, 1976, ಕೆಜಿಡಿ 18ನೇ ನವೆಂಬರ್ 1976ರ ಮೂಲಕ ಸೇರಿಸಲಾಗಿದೆ.

15. **ಸರ್ಕಾರಿ ನೌಕರನ ಗೌರವಾರ್ಥ ಸಾರ್ವಜನಿಕ ಸಮಾರಂಭ ನಡೆಸುವುದು.**– ಯಾರೇ ಸರ್ಕಾರಿ ನೌಕರನು, ಸರ್ಕಾರದಿಂದ ಪೂರ್ವಾಮಂಜೂರಾತಿಯನ್ನು ಪಡೆದ ಹೊರತು, ತನ್ನ ಗೌರವಾರ್ಥ ಅಥವಾ ಯಾರೇ ಸರ್ಕಾರಿ ನೌಕರನ ಗೌರವಾರ್ಥ ಯಾವುದೇ ಗೌರವಪೂರ್ವಕ ಅಥವಾ ಸಮಾರೋಪ ಬಿನ್ನವತ್ತಳೆಯನ್ನು ಸ್ವೀಕರಿಸತಕ್ಕದ್ದಲ್ಲ ಅಥವಾ ಯಾವುದೇ ಪ್ರಶಸ್ತಿ ಪತ್ರಗಳನ್ನು ಸ್ವೀಕರಿಸತಕ್ಕದ್ದಲ್ಲ ಅಥವಾ ಏರ್ಪಡಿಸಿದ ಯಾವುದೇ ಸಭೆಯಲ್ಲಿ ಅಥವಾ ಯಾವುದೇ ಮನೋರಂಜನ ಕಾರ್ಯಕ್ರಮದಲ್ಲಿ ಭಾಗವಹಿಸತಕ್ಕದ್ದಲ್ಲ:

ಪರಂತು, ಈ ನಿಯಮದಲ್ಲಿರುವುದು ಯಾವುದೂ,–

(i) ಸರ್ಕಾರಿ ನೌಕರನು ಅಥವಾ ಇತರ ಯಾರೇ ಸರ್ಕಾರಿ ನೌಕರನು ನಿವೃತ್ತಿ ಹೊಂದಿದ ಅಥವಾ ವರ್ಗಾವಣೆ ಹೊಂದಿದ ಅಥವಾ ಯಾರೇ ವ್ಯಕ್ತಿಯು ಯಾವುದೇ ಸರ್ಕಾರಿ ಸೇವೆಯನ್ನು ಇತ್ತೀಚೆಗೆ ಬಿಟ್ಟುಹೋದ ಸಂದರ್ಭಗಳಲ್ಲಿ, ಅವನ ಗೌರವಾರ್ಥವಾಗಿ ಏರ್ಪಡಿಸಿದಂತಹ ಪ್ರಮುಖವಾಗಿ ಖಾಸಗಿ ಮತ್ತು ಅನೌಪಚಾರಿಕ ಸ್ವರೂಪದ ಬೀಳ್ಕೊಡುಗೆ ಸಮಾರಂಭಕ್ಕೆ; ಅಥವಾ

(ii) ಸಾರ್ವಜನಿಕ ಸಂಘಗಳು ಅಥವಾ ಸಂಸ್ಥೆಗಳು ಏರ್ಪಡಿಸಿದ ಸರಳ ಮತ್ತು ದುಬಾರಿಯಲ್ಲದ ಆದಾರಾತಿಥ್ಯವನ್ನು ಸ್ವೀಕರಿಸುವುದಕ್ಕೆ

ಅನ್ವಯವಾಗತಕ್ಕದ್ದಲ್ಲ.

ಟಿಪ್ಪಣಿ:– ಯಾರೇ ಸರ್ಕಾರಿ ನೌಕರನನ್ನು, ಯಾವುದೇ ಬೀಳ್ಕೊಡುಗೆ ಸಮಾರಂಭದ ಪ್ರಯುಕ್ತ, ಅದು ಪ್ರಮುಖವಾಗಿ ಖಾಸಗಿ ಅಥವಾ ಅನೌಪಚಾರಿಕ ಸ್ವರೂಪದ್ದಾಗಿದ್ದರೂ, ವಂತಿಗೆಯನ್ನು ನೀಡುವಂತೆ ಯಾವುದೇ ರೀತಿಯ ಒತ್ತಡ ತರುವುದನ್ನು ಅಥವಾ ಪ್ರಭಾವ ಬೀರುವುದನ್ನು ಮತ್ತು III ಅಥವಾ IVನೇ ವರ್ಗಕ್ಕೆ ಸೇರದ ಸರ್ಕಾರಿ ನೌಕರನ ಪುರಸ್ಕಾರಕ್ಕಾಗಿ ಯಾವುದೇ ಸಂದರ್ಭದಲ್ಲಿ ವರ್ಗ– III ಕ್ಕೆ ಅಥವಾ ವರ್ಗ– IV ಕ್ಕೆ ಸೇರಿದ ನೌಕರರಿಂದ ವಂತಿಗೆ ಸಂಗ್ರಹಿಸುವುದನ್ನು ನಿಷೇಧಿಸಲಾಗಿದೆ.

16. **ಖಾಸಗಿ ವ್ಯಾಪಾರ ಅಥವಾ ಉದ್ಯೋಗ.**–(1) ಯಾರೇ ಸರ್ಕಾರಿ ನೌಕರನು, ಸರ್ಕಾರದಿಂದ ಪೂರ್ವಾಮಂಜೂರಾತಿಯನ್ನು ಪಡೆದ ಹೊರತು, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ರೀತಿಯ ವ್ಯಾಪಾರದಲ್ಲಿ ಅಥವಾ ವ್ಯವಹಾರದಲ್ಲಿ ತೊಡಗತಕ್ಕದ್ದಲ್ಲ ಅಥವಾ [ಯಾವುದೇ ಇತರೆ ಉದ್ಯೋಗಕ್ಕಾಗಿ ಮಾತುಕತೆ ನಡೆಸತಕ್ಕದ್ದಲ್ಲ ಅಥವಾ ಯಾವುದೇ ಇತರ ಉದ್ಯೋಗವನ್ನು ಕೈಗೊಳ್ಳತಕ್ಕದ್ದಲ್ಲ].

ಅಧಿಸೂಚನೆ ಸಂಖ್ಯೆ ಜಿಎಡಿ : ಎಸ್‌ಆರ್‌ಸಿ 75, ದಿನಾಂಕ 6ನೇ ಅಕ್ಟೋಬರ್ 1975 ಕೆಜಿಡಿ 23ನೇ ಅಕ್ಟೋಬರ್ 1975ರ ಮೂಲಕ ಪ್ರತಿಯೋಜಿಸಲಾಗಿದೆ.

[1][ಪರಂತು, ಸರ್ಕಾರಿ ನೌಕರನು ಅಂಥ ಮಂಜೂರಾತಿಯನ್ನು ಪಡೆಯದೆ ಸಾಮಾಜಿಕ ಅಥವಾ ಧರ್ಮಾರ್ಥ ಸ್ವರೂಪದ ಗೌರವಾರ್ಥ ಕೆಲಸಗಳನ್ನು ಅಥವಾ ಸಾಹಿತ್ಯ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ ಸಾಂದರ್ಭಿಕ ಕೆಲಸಗಳನ್ನು ಈ ಮುಂದಿನ ಷರತ್ತುಗಳಿಗೊಳಪಟ್ಟು ಕೈಗೊಳ್ಳಬಹುದು, ಎಂದರೆ:-

(i) ಅಂಥ ಯಾವುದೇ ಕೆಲಸಗಳನ್ನು ತಾನು ಕೈಗೊಂಡ ಒಂದು ತಿಂಗಳೊಳಗಾಗಿ ಅವನು ಸರ್ಕಾರಕ್ಕೆ ಅದರ ಸಂಪೂರ್ಣ ವಿವರಗಳನ್ನು ವರದಿ ಮಾಡತಕ್ಕದ್ದು;

(ii) ಅದರಿಂದ ಆತನ ಅಧಿಕೃತ ಕರ್ತವ್ಯಗಳಿಗೆ ತೊಂದರೆಯಾಗಬಾರದು; ಮತ್ತು

(iii) ಯಾವುದೇ ಅಂಥ ಕೆಲಸವನ್ನು ಮುಂದುವರೆಸಬಾರದೆಂದು ಸರ್ಕಾರವು ನಿರ್ದೇಶಿಸಿದರೆ ಅವನು ಅಂಥ ಕೆಲಸವನ್ನು ನಿಲ್ಲಿಸತಕ್ಕದ್ದು:

ಮತ್ತೂ ಪರಂತು, ಯಾವುದೇ ಅಂಥ ಕೆಲಸವನ್ನು ಕೈಗೊಳ್ಳುವುದರಲ್ಲಿ ಚುನಾವಣೆ ಮೂಲಕ ತುಂಬಬೇಕಾದ ಪದವನ್ನು ಧಾರಣಮಾಡುವುದನ್ನು ಒಳಗೊಂಡಿದ್ದರೆ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಅಂತಹ ಯಾವುದೇ ಪದದ ಚುನಾವಣೆಗೆ ಸ್ಪರ್ಧಿಸತಕ್ಕದ್ದಲ್ಲ.

ವಿವರಣೆ I:- ಎರಡನೇ ಪರಂತುಕದಲ್ಲಿ ಉಲ್ಲೇಖಿಸಲಾದ ಚುನಾವಣೆ ಮೂಲಕ ತುಂಬುಬೇಕಾದ ಪದಕ್ಕಾಗಿ ಸ್ಪರ್ಧಿಸುವ ಅಭ್ಯರ್ಥಿಯ ಅಥವಾ ಅಭ್ಯರ್ಥಿಗಳ ಪರವಾಗಿ ಸರ್ಕಾರಿ ನೌಕರನು ಪ್ರಚಾರ ಮಾಡುವುದನ್ನು ಈ ಉಪನಿಯಮದ ಉಲ್ಲಂಘನೆಯೆಂದು ಭಾವಿಸತಕ್ಕದ್ದು.

ವಿವರಣೆ II:- ಸರ್ಕಾರಿ ನೌಕರನು ತನ್ನ ಹೆಂಡತಿಯ ಅಥವಾ ತನ್ನ ಕುಟುಂಬದ ಯಾರೇ ಇತರ ಸದಸ್ಯನ ಒಡೆತನದಲ್ಲಿರುವ ಅಥವಾ ನಿರ್ವಹಣೆಯಲ್ಲಿರುವ ವ್ಯವಹಾರವನ್ನು ಅಥವಾ ವಿಮಾ ಏಜೆನ್ಸಿಯನ್ನು ಅಥವಾ ಕಮೀಷನ್ ಏಜೆನ್ಸಿಯನ್ನು ಬೆಂಬಲಿಸಿ ಪ್ರಚಾರ ಮಾಡುವುದನ್ನು ಈ ಉಪ ನಿಯಮದ ಉಲ್ಲಂಘನೆಯೆಂದು ಭಾವಿಸತಕ್ಕದ್ದು]¹.

1. ಅಧಿಸೂಚನೆ ಸಂಖ್ಯೆ ಜಿಎಡಿ 13 ಎಸ್‌ಆರ್‌ಸಿ 73, ದಿನಾಂಕ 31ನೇ ಡಿಸೆಂಬರ್ 1973, ಕೆಜಿಡಿ 14ನೇ ಫೆಬ್ರವರಿ 1974ರ ಮೂಲಕ ಪ್ರತಿಯೋಜಿಸಲಾಗಿದೆ.

(2) ಪ್ರತಿಯೊಬ್ಬ ಸರ್ಕಾರಿ ನೌಕರನು ಅಥವಾ ಅವನ ಕುಟುಂಬದ ಯಾರೇ ಸದಸ್ಯನು ವ್ಯಾಪಾರದಲ್ಲಿ ಅಥವಾ ವ್ಯವಹಾರದಲ್ಲಿ ತೊಡಗಿದ್ದರೆ ಅಥವಾ ವಿಮಾ ಏಜೆನ್ಸಿಯ ಅಥವಾ ಕಮೀಷನ್ ಏಜೆನ್ಸಿಯ ಒಡೆತನ ಹೊಂದಿದ್ದರೆ ಅಥವಾ ನಿರ್ವಹಣೆ ಮಾಡುತ್ತಿದ್ದರೆ ಆ ಬಗ್ಗೆ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

(3) ಯಾರೇ ಸರ್ಕಾರಿ ನೌಕರನು ತನ್ನ ಅಧಿಕೃತ ಕಾರ್ಯಗಳನ್ನು ನಿರ್ವಹಿಸುವಾಗ ಹೊರತು, ಕಂಪನಿಗಳ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 1) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ನೋಂದಾಯಿಸಬೇಕಾದ ಅಗತ್ಯವಿರುವ ಯಾವುದೇ ಬ್ಯಾಂಕನ್ನು ಅಥವಾ ಇತರ ಕಂಪನಿಯನ್ನು ಅಥವಾ ವಾಣಿಜ್ಯ ಉದ್ದೇಶಕ್ಕಾಗಿ ಯಾವುದೇ ಸಹಕಾರ ಸಂಘವನ್ನು ಸರ್ಕಾರದ ಪೂರ್ವ ಮಂಜೂರಾತಿ ಪಡೆಯದೆ ನೋಂದಾಯಿಸುವ, ಉತ್ತೇಜಿಸುವ ಅಥವಾ ನಿರ್ವಹಣೆ ಮಾಡುವ ಕಾರ್ಯದಲ್ಲಿ ಪಾಲ್ಗೊಳ್ಳತಕ್ಕದ್ದಲ್ಲ:

ಪರಂತು, ಸರ್ಕಾರಿ ನೌಕರನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (ಕರ್ನಾಟಕ ಅಧಿನಿಯಮ 1959ರ 11)ರ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ ಪ್ರಮುಖವಾಗಿ ಸರ್ಕಾರಿ ನೌಕರರ ಪ್ರಯೋಜನಗಳಿಗಾಗಿ ಸಹಕಾರ ಸಂಘವನ್ನು ಅಥವಾ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (ಕರ್ನಾಟಕ ಅಧಿನಿಯಮ 1960ರ 17)ರ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ ಸಾಹಿತ್ಯಕ, ವೈಜ್ಞಾನಿಕ ಅಥವಾ ಧರ್ಮಾರ್ಥ ಸಂಘವನ್ನು ನೋಂದಾಯಿಸುವ, ಉತ್ತೇಜಿಸುವ ಅಥವಾ ನಿರ್ವಹಣೆ ಮಾಡುವ ಕಾರ್ಯದಲ್ಲಿ ಪಾಲ್ಗೊಳ್ಳಬಹುದು.

(4) ಯಾರೇ ಸರ್ಕಾರಿ ನೌಕರನು ನಿಯಮಿಸಿದ ಪ್ರಾಧಿಕಾರದಿಂದ ಸಾಮಾನ್ಯ ಅಥವಾ ವಿಶೇಷ ಮಂಜೂರಾತಿ ಪಡೆಯದೆ ಯಾವುದೇ ಸಾರ್ವಜನಿಕ ಸಂಸ್ಥೆಗೆ ಅಥವಾ ಯಾರೇ ಖಾಸಗಿ ವ್ಯಕ್ತಿಗೆ ಮಾಡಿಕೊಟ್ಟ ಕೆಲಸಕ್ಕಾಗಿ ಯಾವುದೇ ಶುಲ್ಕವನ್ನು ತೆಗೆದುಕೊಳ್ಳತಕ್ಕದ್ದಲ್ಲ.

17. **ವೈದ್ಯಾಧಿಕಾರಿಯು ಖಾಸಗಿ ಸಂಸ್ಥೆಯಲ್ಲಿ ಭಾಗಿಯಾಗಬಾರದು.**- ಯಾರೇ ವೈದ್ಯಾಧಿಕಾರಿಯು ಯಾವುದೇ ಖಾಸಗಿ ನರ್ಸಿಂಗ್ ಹೋಂಅನ್ನು, ಆಸ್ಪತ್ರೆಯನ್ನು ಅಥವಾ ಅಂಥದೇ ಸಂಸ್ಥೆಯನ್ನು ನಡೆಸತಕ್ಕದ್ದಲ್ಲ ಅಥವಾ ಅವುಗಳಲ್ಲಿ ಹಣಕಾಸು ಹಿತಾಸಕ್ತಿ ಹೊಂದಿರತಕ್ಕದ್ದಲ್ಲ ಅಥವಾ ಹಣ ಸಂದಾಯ ಮಾಡುವ ರೋಗಿಗಳನ್ನು ಅವನು ರೂಢಿಗತವಾಗಿ ತನ್ನ ಸ್ವಂತ ಮನೆಯಲ್ಲಿ, 24 ಗಂಟೆಗಳಿಗಿಂತ ಹೆಚ್ಚು ಕಾಲ ಇಟ್ಟುಕೊಳ್ಳತಕ್ಕದ್ದಲ್ಲ. ಆದಾಗ್ಯೂ, ಅವನು ಖಾಸಗಿ ನರ್ಸಿಂಗ್ ಹೋಂನಲ್ಲಿ

ೋಗಿಗಳಿಗೆ ಚಿಕಿತ್ಸೆ ನೀಡಬಹುದು. ಪರಂತು ತನ್ನ ಬಳಿಗೆ ಬರುವ ರೋಗಿಗಳ ದಾಖಲಾತಿಗೋಸ್ಕರವೇ ಆ ನರ್ಸಿಂಗ್ ಹೋಂ ರಬಾರದು. ಅದರ ಇತರ ಯಾರೇ ನೋಂದಾಯಿತ ವೈದ್ಯ ವೃತ್ತಿಗನ ರೋಗಿಗಳ ದಾಖಲಾತಿಗೆ ಅವರಲ್ಲಿ ಅವಕಾಶವಿರಬೇಕು.

18. **ಮನ್ನಣೆ ಪಡೆದ ಶಾಲೆಯ ಉಪಯೋಗಕ್ಕಾಗಿ ಪಠ್ಯ ಪುಸ್ತಕವನ್ನು ಬರೆಯದಿರುವುದು.–** ಪಠ್ಯ ಪುಸ್ತಕಗಳ ಸಮಿತಿಯ ದಸ್ಯನಾಗಿರುವ ಯಾರೇ ಸರ್ಕಾರಿ ನೌಕರನು, ಅಂಥ ಸಮಿತಿಯ ಸದಸ್ಯತ್ವದ ಅವಧಿಯಲ್ಲಿ ಮನ್ನಣೆ ಪಡೆದ ಶಾಲೆಯಲ್ಲಿ ಪಯೋಗಕ್ಕಾಗಿ ಯಾವುದೇ ಪಠ್ಯ ಪುಸ್ತಕಗಳನ್ನು ಬರೆಯತಕ್ಕದ್ದಲ್ಲ ಅಥವಾ ಸಂಪಾದಿಸತಕ್ಕದ್ದಲ್ಲ.

19. **ಸೌಕರ್ಯಗಳ ಯುಕ್ತ ಬಳಕೆ.–** ಯಾರೇ ಸರ್ಕಾರಿ ನೌಕರನು ತನ್ನ ಸರ್ಕಾರಿ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ನುಕೂಲವಾಗುವಂತೆ ಸರ್ಕಾರವು ಆತನಿಗೆ ಒದಗಿಸಿರುವ ಸೌಕರ್ಯಗಳನ್ನು ದುರುಪಯೋಗಪಡಿಸಿಕೊಳ್ಳತಕ್ಕದ್ದಲ್ಲ ಅಥವಾ ಜಾಗರೂಕತೆಯಿಂದ ಬಳಸತಕ್ಕದ್ದಲ್ಲ.

20. **ಹಣ ಸಂದಾಯ ಮಾಡದೆ ಸೇವೆಗಳ ಉಪಯೋಗ.–** ಯಾರೇ ಸರ್ಕಾರಿ ನೌಕರನು, ಯಾವ ಸೇವೆಗೆ ಅಥವಾ ನರಂಜನೆಗೆ ಬಾಡಿಗೆಯನ್ನು ಅಥವಾ ದರವನ್ನು ಅಥವಾ ಪ್ರವೇಶ ಶುಲ್ಕವನ್ನು ವಿಧಿಸಲಾಗುವುದೋ ಆ ಯಾವುದೇ ೇವೆಯನ್ನು ಅಥವಾ ಮನರಂಜನೆಯನ್ನು ಸೂಕ್ತ ಮತ್ತು ಸಾಕಷ್ಟು ಹಣ ಸಂದಾಯ ಮಾಡದೆ ಉಪಯೋಗಿಸಿಕೊಳ್ಳತಕ್ಕದ್ದಲ್ಲ.

21. **ಬಂಡವಾಳ ಹೂಡಿಕೆ, ಸಾಲ ನೀಡಿಕೆ ಮತ್ತು ಸಾಲ ತೆಗೆದುಕೊಳ್ಳುವಿಕೆ.–**(1) ಯಾರೇ ಸರ್ಕಾರಿ ನೌಕರನು ಯಾವುದೇ ಸ್ಟಾಕಿನಲ್ಲಿ, ಷೇರಿನಲ್ಲಿ ಅಥವಾ ಇತರ ಬಂಡವಾಳ ಹೂಡಿಕೆಯಲ್ಲಿ ಸಟ್ಟಾ ವ್ಯವಹಾರ ಮಾಡತಕ್ಕದ್ದಲ್ಲ.

ವಿವರಣೆ.– ಷೇರುಗಳನ್ನು, ಭದ್ರತಾ ಪತ್ರಗಳನ್ನು ಅಥವಾ ಇತರ ಬಂಡವಾಳ ಹೂಡಿಕೆಗಳನ್ನು ಮೇಲಿಂದ ಮೇಲೆ ರೀದಿ ಮಾಡುವುದನ್ನು ಅಥವಾ ಮಾರಾಟ ಮಾಡುವುದನ್ನು ಅಥವಾ ಅವೆರಡನ್ನೂ ಮಾಡುವುದನ್ನು ಈ ಉಪನಿಯಮದ ರ್ಥ ವ್ಯಾಪ್ತಿಯೊಳಗೆ ಸಟ್ಟಾ ವ್ಯವಹಾರವೆಂದು ಭಾವಿಸತಕ್ಕದ್ದು.

(2) ಯಾರೇ ಸರ್ಕಾರಿ ನೌಕರನು, ತನ್ನ ಸರ್ಕಾರಿ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ತನ್ನನ್ನು ಪೇಚಿಗೆ ಸಿಲುಕಿಸುವ ಥವಾ ತನ್ನ ಮೇಲೆ ಪರಿಣಾಮ ಉಂಟು ಮಾಡುವ ಸಂಭವವಿರುವ ಯಾವುದೇ ಬಂಡವಾಳ ಹೂಡಿಕೆ ಮಾಡತಕ್ಕದ್ದಲ್ಲ ಥವಾ ತನ್ನ ಕುಟುಂಬದ ಯಾರೇ ವ್ಯಕ್ತಿಯು ಅಥವಾ ತನ್ನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು ಯಾವುದೇ ಬಂಡವಾಳ ಹೂಡಲು ಅನುಮತಿಸತಕ್ಕದ್ದಲ್ಲ.

(3) ಯಾವುದೇ ವ್ಯವಹಾರವು (1)ನೇ ಉಪ–ನಿಯಮದಲ್ಲಿ ಅಥವಾ (2)ನೇ ಉಪನಿಯಮದಲ್ಲಿ ಹೇಳಿರುವಂಥ ರೂಪದ್ದೇ ಎಂಬ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದರ ಬಗ್ಗೆ ಸರ್ಕಾರದ ತೀರ್ಮಾನವು ಅಂತಿಮವಾದುದು ಆಗಿರತಕ್ಕದ್ದು.

(4) (i) ಯಾರೇ ಸರ್ಕಾರಿ ನೌಕರನು, [**ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಮತ್ತು**][1] ತಾನೇ ಗಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಅಥವಾ ತನ್ನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಇತರ ಯಾರೇ ್ಯಕ್ತಿಯ ಮೂಲಕ, ಬ್ಯಾಂಕಿಂಗ್ ವ್ಯವಹಾರವನ್ನು ನಡೆಸಲು ವಿಧ್ಯುಕ್ತವಾಗಿ ಅಧಿಕಾರ ಪಡೆದ ಸುಸ್ಥಾಪಿತವಾದ ಬ್ಯಾಂಕಿನ ಅಥವಾ ರ್ಮಿನ ಜೊತೆ ವ್ಯವಹಾರ ನಡೆಸುವ ಸಾಮಾನ್ಯ ಕ್ರಮದಲ್ಲಿ ಹೊರತು:–

(ಎ) ತನ್ನ ಅಧಿಕಾರದ ಸ್ಥಳೀಯ ಪರಿಮಿತಿಯೊಳಗೆ ಇರುವ ಯಾರೇ ವ್ಯಕ್ತಿಗೆ ಅಥವಾ ಯಾರೇ ವ್ಯಕ್ತಿಯಿಂದ ಅಥವಾ ಾನು ಯಾರೊಂದಿಗೆ ಅಧಿಕೃತ ವ್ಯವಹಾರ ನಡೆಸುವ ಸಂಭವವಿದೆಯೋ, ಆ ವ್ಯಕ್ತಿಗೆ ಅಥವಾ ಆ ವ್ಯಕ್ತಿಯಿಂದ ಜಮಾನನಾಗಿ ಅಥವಾ ಏಜೆಂಟನಾಗಿ ಸಾಲ ನೀಡತಕ್ಕದ್ದಲ್ಲ ಅಥವಾ ಸಾಲ ಪಡೆಯತಕ್ಕದ್ದಲ್ಲ ಅಥವಾ ಅಂಥ ವ್ಯಕ್ತಿಯ ಣಕಾಸು ಬಾಧ್ಯತೆಗೆ ತಾನು ಬೇರೆ ಯಾವ ರೀತಿಯಲ್ಲೂ ಒಳಗಾಗತಕ್ಕದ್ದಲ್ಲ; ಅಥವಾ

(ಬಿ) ಬಡ್ಡಿಗಾಗಿ ಅಥವಾ ಹಣವನ್ನು ವಾಪಸ್ಸು ಮಾಡುವ ಕಾಲಕ್ಕೆ ಹಣದ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ೊಡುವಂತೆ ವಿಧಿಸುವ ಅಥವಾ ಸಂದಾಯ ಮಾಡುವ ರೀತಿಯಲ್ಲಿ ಯಾರೇ ವ್ಯಕ್ತಿಗೆ ಹಣ ಸಾಲ ನೀಡತಕ್ಕದ್ದಲ್ಲ:

[1] ಅಧಿಸೂಚನೆ ಸಂಖ್ಯೆ ಸಿಆಸುಇ 2 ಎಸ್‌ಆರ್‌ಸಿ 78, ದಿನಾಂಕ 28ನೇ ಸೆಪ್ಟೆಂಬರ್, 1978 ಕೆಜಿಡಿ 12ನೇ ಅಕ್ಟೋಬರ್ 1978ರ ಮೂಲಕ ೇರಿಸಲಾಗಿದೆ.

ಪರಂತು, ಸರ್ಕಾರಿ ನೌಕರನು ತನ್ನ ಸಂಬಂಧಿಕನಿಗೆ ಅಥವಾ ಸಂಬಂಧಿಕನಿಂದ ಅಥವಾ ಆಪ್ತ ಮಿತ್ರನಿಗೆ ಅಥವಾ ಪ್ತ ಮಿತ್ರನಿಂದ [ತನ್ನ ಒಟ್ಟು ತಿಂಗಳ ಉಪಲಬ್ಧಿಗಳನ್ನು ಮೀರದಷ್ಟು ಮೊತ್ತವನ್ನು][2] ಕೇವಲ ತಾತ್ಕಾಲಿಕ ಸಾಲವಾಗಿ ಬಡ್ಡಿ ಲ್ಲದೆ ಕೊಡಬಹುದು ಅಥವಾ ತೆಗೆದುಕೊಳ್ಳಬಹುದು ಅಥವಾ ಪ್ರಾಮಾಣಿಕ ವ್ಯಾಪಾರಿಯೊಬ್ಬರೊಡನೆ ಸಾಲದ ಲೆಕ್ಕ ತ್ರವನ್ನಿಟ್ಟುಕೊಳ್ಳಬಹುದು ಅಥವಾ ತನ್ನ ಖಾಸಗಿ ನೌಕರನಿಗೆ ಮುಂಗಡ ಸಂಬಳ ಕೊಡಬಹುದು.

[2] ಅಧಿಸೂಚನೆ ಸಂಖ್ಯೆ ಜಿಎಡಿ 5 ಎಸ್‌ಆರ್‌ಸಿ 73 ದಿನಾಂಕ 18ನೇ ಅಕ್ಟೋಬರ್, 1974 ಕೆಜಿಡಿ 18ನೇ ಅಕ್ಟೋಬರ್ 1974ರ ಮೂಲಕ ತಿಯೋಜಿಸಲಾಗಿದೆ.

(ii) ಯಾವ ಹುದ್ದೆಯ ಸ್ವರೂಪವು ಸರ್ಕಾರಿ ನೌಕರನು, (2)ನೇ ಉಪನಿಯಮದ ಅಥವಾ (4)ನೇ ಉಪನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವುದನ್ನು ಒಳಗೊಂಡಿರಬಹುದಾಗಿದೆಯೋ ಆ ಸ್ವರೂಪದ ಹುದ್ದೆಗೆ ಅವನು ನೇಮಕಗೊಂಡಾಗ ಅಥವಾ ವರ್ಗಾವಣೆಯಾದಾಗ, ಅವನು, ಅಂಥ ಸಂದರ್ಭಗಳನ್ನು ಸರ್ಕಾರಕ್ಕೆ ತಕ್ಷಣವೇ ವರದಿ ಮಾಡತಕ್ಕದ್ದು ಮತ್ತು ಆ ತರುವಾಯ ಸರ್ಕಾರವು ಮಾಡಬಹುದಾದಂಥ ಆದೇಶಕ್ಕೆ ಅನುಸಾರವಾಗಿ ಕಾರ್ಯ ನಿರ್ವಹಿಸತಕ್ಕದ್ದು.

22. **ದಿವಾಳಿತನ ಮತ್ತು ರೂಢಿಗತ ಋಣಗ್ರಸ್ತತೆ.–** ಸರ್ಕಾರಿ ನೌಕರನು ಸಾಲ ಮಾಡುವುದನ್ನು ರೂಢಿ ಮಾಡಿಕೊಳ್ಳದಂತೆ ಅಥವಾ ದಿವಾಳಿಯಾಗದಂತೆ ತನ್ನ ಖಾಸಗೀ ವ್ಯವಹಾರಗಳನ್ನು ನಿರ್ವಹಿಸತಕ್ಕದ್ದು. ಯಾವ ಸರ್ಕಾರಿ ನೌಕರನ ವಿರುದ್ಧ ಅವನಿಂದ ಬಾಕಿಬರಬೇಕಾದ ಯಾವುದೇ ಸಾಲದ ವಸೂಲಿಗಾಗಿ ಅಥವಾ ಅವನನ್ನು ದಿವಾಳಿ ಎಂದು ನ್ಯಾಯ ನಿರ್ಣಯ ಮಾಡುವುದಕ್ಕಾಗಿ ಯಾವುವೇ ಕಾನೂನು ವ್ಯವಹರಣೆಗಳನ್ನು ಹೂಡಲಾಗಿದೆಯೋ ಆ ಸರ್ಕಾರಿ ನೌಕರನು ತಕ್ಷಣವೇ ಆ ಕಾನೂನು ವ್ಯವಹರಣೆಗಳ ಪೂರ್ಣ ಸಂಗತಿಗಳನ್ನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

ಟಿಪ್ಪಣಿ:– ಸಾಮಾನ್ಯ ಎಚ್ಚರಿಕೆ ವಹಿಸಿದರೂ ಮುಂಗಾಣಲು ತನ್ನಿಂದ ಸಾಧ್ಯವಾಗದಿದ್ದ ಅಥವಾ ತನ್ನ ಹತೋಟಿಯನ್ನು ಮೀರಿದಂಥ ಪರಿಸ್ಥಿತಿಗಳ ಪರಿಣಾಮವಾಗಿ ತಾನು ಸಾಲಗಾರ ಅಥವಾ ದಿವಾಳಿ ಆಗಬೇಕಾಯಿತೆಂದು ಮತ್ತು ತನ್ನ ದುಂದು ವೆಚ್ಚವು ಅಥವಾ ಕೆಟ್ಟ ಅಭ್ಯಾಸಗಳು ಅದಕ್ಕೆ ಕಾರಣವಲ್ಲವೆಂದು ರುಜುವಾತುಪಡಿಸುವ ಭಾರವು ಸರ್ಕಾರಿ ನೌಕರನ ಮೇಲೆ ಇರತಕ್ಕದ್ದು.

23. **ಚರ, ಸ್ಥಿರ ಮತ್ತು ಬೆಲೆ ಬಾಳುವ ಸ್ವತ್ತು.–** (1) ಪ್ರತಿಯೊಬ್ಬ ಸರ್ಕಾರಿ ನೌಕರನು ಯಾವುದೇ ಸೇವೆಗೆ ಅಥವಾ ಹುದ್ದೆಗೆ ಅವನ ಮೊದಲ ನೇಮಕ ಆದಾಗ ಮತ್ತು ಆ ತರುವಾಯ [1][ಮಾರ್ಚ್ 31ಕ್ಕೆ ಅಂತ್ಯಗೊಳ್ಳುವ] ಪ್ರತಿ ಹನ್ನೆರಡು ತಿಂಗಳ ಅಂತರದಲ್ಲಿ ತನ್ನ ಮತ್ತು ತನ್ನ ಕುಟುಂಬದ ಎಲ್ಲ ಸದಸ್ಯರ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವಿವರಪಟ್ಟಿಕೆಯನ್ನು, ಈ ಮುಂದಿನವುಗಳ ಬಗ್ಗೆ ಪೂರ್ಣ ವಿವರಗಳನ್ನು ಒಳಗೊಂಡಂತೆ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು,–

1. ಅಧಿಸೂಚನೆ ಸಂಖ್ಯೆ ಸಿಆಸುಇ 11 ಎಸ್‌ಆರ್‌ಸಿ 92 ದಿನಾಂಕ 25/26 ಮಾರ್ಚ್ 1994, ಕೆಜಿಡಿ 28ನೇ ಮಾರ್ಚ್ 1994ರ ಮೂಲಕ ಸೇರಿಸಲಾಗಿದೆ.

(ಎ) ತಾನು ಅಥವಾ ತನ್ನ ಕುಟುಂಬದ ಯಾರೇ ಸದಸ್ಯನಿಗೆ ಪಿತ್ರಾರ್ಜಿತವಾಗಿ ಬಂದ ಅಥವಾ ತಾನು ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಒಡೆತನ ಹೊಂದಿರುವ ಅಥವಾ ತನ್ನ ಹೆಸರಿನಲ್ಲಾಗಲೀ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಾಗಲೀ ಅಥವಾ ಇತರ ಯಾರೇ ವ್ಯಕ್ತಿಗಳ ಹೆಸರಿನಲ್ಲಾಗಲೀ ಗುತ್ತಿಗೆ ಅಥವಾ ಅಡಮಾನದ ಮೂಲಕ ತನ್ನ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಆರ್ಜಿಸಿರುವ ಸ್ವತ್ತು;

(ಬಿ) ತನಗೆ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನಿಗೆ ಪಿತ್ರಾರ್ಜಿತವಾಗಿ ಬಂದ ಅಥವಾ ಅದೇ ರೀತಿ ತಾನು ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಒಡೆತನ ಹೊಂದಿದ, ಆರ್ಜಿಸಿದ ಅಥವಾ ಹೊಂದಿರುವ ಷೇರುಗಳು, ಡಿಬೆಂಚರುಗಳು ಮತ್ತು ಬ್ಯಾಂಕ್ ಠೇವಣಿಗಳೂ ಸೇರಿದಂತೆ ನಗದು;

(ಸಿ) ತನಗೆ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನಿಗೆ ಪಿತ್ರಾರ್ಜಿತವಾಗಿ ಬಂದ ಅಥವಾ ಅದೇ ರೀತಿ ತಾನು ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಒಡೆತನ ಹೊಂದಿದ, ಆರ್ಜಿಸಿದ ಅಥವಾ ಹೊಂದಿರುವ ಇತರ ಯಾವುದೇ ಚರಾಸ್ತಿ;

(ಡಿ) ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾನು ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಮಾಡಿಕೊಂಡ ಸಾಲ ಅಥವಾ ಹೊತ್ತಿರುವ ಇತರ ಹೊಣೆಗಾರಿಕೆಗಳು;

ಟಿಪ್ಪಣಿ I:–(1)ನೇ ಉಪನಿಯಮವು [ಡಿ ಸಮೂಹದ] ನೌಕರರಿಗೆ ಸಾಮಾನ್ಯವಾಗಿ ಅನ್ವಯವಾಗತಕ್ಕದ್ದಲ್ಲ, ಸರ್ಕಾರವು ಅದು ಅಂಥ ಯಾವುದೇ ಸರ್ಕಾರಿ ನೌಕರನಿಗೆ ಅಥವಾ ಸರ್ಕಾರಿ ನೌಕರರ ವರ್ಗಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

ಟಿಪ್ಪಣಿ II:– ಎಲ್ಲ ವಿವರಪಟ್ಟಿಕೆಗಳಲ್ಲೂ [ಎರಡು ಸಾವಿರ] ರೂಪಾಯಿಗಳಿಗಿಂತ ಕಡಿಮೆ ಬೆಲೆಯ ಚರ ಬಾಬುಗಳ ಮೌಲ್ಯವನ್ನು ಸೇರಿಸಿ ಒಂದೇ ಮೊತ್ತದಲ್ಲಿ ತೋರಿಸಬಹುದು. ಬಟ್ಟೆಗಳು, ಪಾತ್ರೆಗಳು, ಪಿಂಗಾಣಿ ಸಾಮಾನುಗಳು ಅಥವಾ ಪುಸ್ತಕಗಳಂಥ ದಿನಬಳಕೆಯ ವಸ್ತುಗಳ ಮೌಲ್ಯವನ್ನು ಅಂಥ ವಿವರಪಟ್ಟಿಕೆಗಳಲ್ಲಿ ಸೇರಿಸಬೇಕಾಗಿಲ್ಲ.

ಟಿಪ್ಪಣಿ III:- ಈ ನಿಯಮಗಳ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿರುವ ಪ್ರತಿಯೊಬ್ಬ ಸರ್ಕಾರಿ ನೌಕರನು ಅಂಥ ಪ್ರಾರಂಭದ ತರುವಾಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೆ ಮೊದಲು ಈ ಉಪನಿಯಮದ ಮೇರೆಗೆ ವಿವರಪಟ್ಟಿಕೆಯನ್ನು ಸಲ್ಲಿಸತಕ್ಕದ್ದು.

1. ಅಧಿಸೂಚನೆ ಸಂಖ್ಯೆ ಸಿಆಸುಇ 4 ಎಸ್‌ಆರ್‌ಸಿ 85 ದಿನಾಂಕ 30ನೇ ಡಿಸೆಂಬರ್ 1985 ಕೆಜಿಡಿ 27ನೇ ಮಾರ್ಚ್ 1986ರ ಮೂಲಕ ಪ್ರತಿಯೋಜಿಸಿದೆ.

(2) ಯಾರೇ ಸರ್ಕಾರಿ ನೌಕರನು ಅಥವಾ ಅವನ ಕುಟುಂಬದ ಯಾರೇ ಸದಸ್ಯನು ನಿಯಮಿಸಲಾದ ಪ್ರಾಧಿಕಾರಕ್ಕೆ ಮೊದಲೇ ತಿಳಿಸಿದ ಹೊರತು, ತನ್ನ ಸ್ವಂತ ಹೆಸರಿನಲ್ಲಾಗಲೀ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಾಗಲೀ ಗುತ್ತಿಗೆಯ, ಅಡಮಾನದ, ಖರೀದಿಯ, ಮಾರಾಟದ, ದಾನದ ಮೂಲಕ ಅಥವಾ ಅನ್ಯಥಾ ಯಾವುದೇ ಸ್ಥಿರ ಸ್ವತ್ತನ್ನು ಆರ್ಜಿಸತಕ್ಕದ್ದಲ್ಲ ಅಥವಾ ವಿಲೇ ಮಾಡತಕ್ಕದ್ದಲ್ಲ:

ಪರಂತು, ಸರ್ಕಾರಿ ನೌಕರನು, ಅಂಥ ಯಾವುದೇ ವ್ಯವಹಾರವನ್ನು,-

(i) ಸರ್ಕಾರಿ ನೌಕರನೊಂದಿಗೆ ಅಧಿಕೃತ ವ್ಯವಹಾರವನ್ನು ಹೊಂದಿರುವ ವ್ಯಕ್ತಿಯೊಂದಿಗೆ ಮಾಡುತ್ತಿರುವಲ್ಲಿ; ಅಥವಾ

(ii) ನಿಯತ ಅಥವಾ ಖ್ಯಾತ ವ್ಯಾಪಾರಿಯ ಮೂಲಕವಲ್ಲದೆ ಅನ್ಯಥಾ ಮಾಡುತ್ತಿರುವಲ್ಲಿ

- ನಿಯಮಿಸಲಾದ ಪ್ರಾಧಿಕಾರದ ಪೂರ್ವ ಮಂಜೂರಾತಿಯನ್ನು ಪಡೆದುಕೊಳ್ಳತಕ್ಕದ್ದು:

[1][ಮತ್ತೂ ಪರಂತು ಈ ಉಪನಿಯಮದಲ್ಲಿರುವುದು ಯಾವುದೂ, ಸರ್ಕಾರಿ ನೌಕರನ ಕುಟುಂಬದ ಸದಸ್ಯನು ಸರ್ಕಾರಿ ನೌಕರನದೇ/ಳದೇ ನಿಧಿಗಳಿಂದ ಬೇರೆಯದೇ ಆದ ಆತನ/ ಆಕೆಯ ಸ್ವಂತ ನಿಧಿಗಳಿಂದ (ಉಡುಗೊರೆಗಳು, ಪಿತ್ರಾರ್ಜಿತ, ಮೊದಲಾದವುಗಳೂ ಸೇರಿದಂತೆ) ಆತನ ಅಥವಾ ಆಕೆಯ ಸ್ವಂತ ಹೆಸರಿನಲ್ಲಿ ಮತ್ತು ಆತನ ಅಥವಾ ಆಕೆಯ ಸ್ವಂತ ಹಕ್ಕಿನಿಂದ ಮಾಡಿಕೊಂಡ ವ್ಯವಹಾರಗಳಿಗೆ ಅನ್ವಯವಾಗತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 6 ಎಸ್‌ಆರ್‌ಸಿ 2004 ದಿನಾಂಕ 16.11.2006ರ ಮೂಲಕ ಸೇರಿಸಲಾಗಿದೆ.

(3) ಪ್ರತಿಯೊಬ್ಬ ಸರ್ಕಾರಿ ನೌಕರನು, ತನ್ನ ಸ್ವಂತ ಹೆಸರಿನಲ್ಲಾಗಲೀ ಅಥವಾ ತನ್ನ ಕುಟುಂಬದ ಸದಸ್ಯನ ಹೆಸರಿನಲ್ಲಾಗಲೀ ತಾನು ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಒಡೆತನ ಹೊಂದಿರುವ ಅಥವಾ ಧಾರಣ ಮಾಡಿರುವ ಚರಾಸ್ತಿಯ ಸಂಬಂಧದಲ್ಲಿ ಮಾಡುವ ಪ್ರತಿಯೊಂದು ವ್ಯವಹಾರವನ್ನು, ಯಾವುದೇ [1][ಸಮೂಹ-ಎ ಅಥವಾ ಸಮೂಹ-ಬಿ] ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ ಅಂಥ ಸ್ವತ್ತಿನ ಮೌಲ್ಯವು [2]*[ಹತ್ತು ಸಾವಿರ ರೂಪಾಯಿಗಳನ್ನು] ಮೀರಿದರೆ ಅಥವಾ ಯಾವುದೇ [ಸಮೂಹ ಸಿ ಅಥವಾ ಸಮೂಹ-ಡಿ] ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ [2]*[ಐದು ಸಾವಿರ ರೂಪಾಯಿಗಳನ್ನು] ಮೀರಿದರೆ, ನಿಯಮಿಸಲಾದ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು:

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4, ಎಸ್‌ಆರ್‌ಸಿ 85 ದಿನಾಂಕ 30ನೇ ಡಿಸೆಂಬರ್ 1985ರ ಮೂಲಕ ಪ್ರತಿಯೋಜಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 6 ಎಸ್‌ಆರ್‌ಸಿ 2004 ದಿನಾಂಕ 16.11.2006ರ ಮೂಲಕ ಪ್ರತಿಯೋಜಿಸಲಾಗಿದೆ.

ಪರಂತು, ಸರ್ಕಾರಿ ನೌಕರನು ಅಂತಹ ವ್ಯವಹಾರವನ್ನು,-

(i) ಸರ್ಕಾರಿ ನೌಕರನೊಂದಿಗೆ ಅಧಿಕೃತ ವ್ಯವಹಾರವನ್ನು ಹೊಂದಿರುವ ವ್ಯಕ್ತಿಯೊಂದಿಗೆ ಮಾಡುತ್ತಿರುವಲ್ಲಿ; ಅಥವಾ

(ii) ನಿಯತ ಅಥವಾ ಖ್ಯಾತ ವ್ಯಾಪಾರಿಯ ಮೂಲಕವಲ್ಲದೆ ಅನ್ಯಥಾ ಮಾಡುತ್ತಿರುವಲ್ಲಿ

- ನಿಯಮಿಸಲಾದ ಪ್ರಾಧಿಕಾರದ ಪೂರ್ವಮಂಜೂರಾತಿ ಪಡೆದುಕೊಳ್ಳತಕ್ಕದ್ದು.

[1][ಮತ್ತೂ ಪರಂತು ಈ ಉಪನಿಯಮದಲ್ಲಿರುವುದು ಯಾವುದೂ, ಸರ್ಕಾರಿ ನೌಕರನ ಕುಟುಂಬದ ಸದಸ್ಯನು ಸರ್ಕಾರಿ ನೌಕರನದೇ/ಳದೇ ನಿಧಿಗಳಿಂದ ಬೇರೆಯದೇ ಆದ ಆತನ/ ಆಕೆಯ ಸ್ವಂತ ನಿಧಿಗಳಿಂದ (ಉಡುಗೊರೆಗಳು, ಪಿತ್ರಾರ್ಜಿತ, ಮೊದಲಾದವುಗಳೂ ಸೇರಿದಂತೆ) ಆತನ ಅಥವಾ ಆಕೆಯ ಸ್ವಂತ ಹೆಸರಿನಲ್ಲಿ ಮತ್ತು ಆತನ ಅಥವಾ ಆಕೆಯ ಸ್ವಂತ ಹಕ್ಕಿನಿಂದ ಮಾಡಿಕೊಂಡ ವ್ಯವಹಾರಗಳಿಗೆ ಅನ್ವಯವಾಗತಕ್ಕದ್ದಲ್ಲ][1].

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 48 ಎಸ್‌ಆರ್‌ಸಿ 2007 ದಿನಾಂಕ 25.9.2008ರ ಮೂಲಕ ಸೇರಿಸಲಾಗಿದೆ.

[1][(3ಎ) ಪ್ರತಿಯೊಬ್ಬ ಸರ್ಕಾರಿ ನೌಕರನು, ತನ್ನ ಸಂಬಳ ಮತ್ತು ಭತ್ಯೆಗಳು, ವಿಮೆ ಅಥವಾ ಭವಿಷ್ಯನಿಧಿಯನ್ನು ಹೊರತುಪಡಿಸಿ ಇತರ ಮೂಲಗಳಿಂದ ತಾನು ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಸ್ವೀಕರಿಸಿದ ನಗದಿಗೆ ಸಂಬಂಧಿಸಿದ ಪ್ರತಿಯೊಂದು ವ್ಯವಹಾರವನ್ನು, ಯಾವುದೇ [2][ಸಮೂಹ-ಎ ಅಥವಾ ಸಮೂಹ-ಬಿ][2] ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ, ಅಂಥ ನಗದು [3][10,000 ರೂಪಾಯಿಗಳನ್ನು] ಮೀರಿದ್ದರೆ ಅಥವಾ ಯಾವುದೇ

[ಸಮೂಹ-ಸಿ ಅಥವಾ ಸಮೂಹ-ಡಿ][2] ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ ಅಂಥ ನಗದು [3][5,000 ರೂಪಾಯಿಗಳನ್ನು] ಮೀರಿದ್ದರೆ ನಿಯಮಿಸಲಾದ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು.]

1. ಅಧಿಸೂಚನೆ ಸಂಖ್ಯೆ ಜಿಎಡಿ 14 ಎಸ್‌ಆರ್‌ಸಿ 71 ದಿನಾಂಕ 9.12.1971ರ ಮೂಲಕ ಸೇರಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಆರ್‌ಸಿ 85 ದಿನಾಂಕ 30.12.1985ರ ಮೂಲಕ ಪ್ರತಿಯೋಜಿಸಲಾಗಿದೆ.

3. ಅಧಿಸೂಚನೆ ಸಂಖ್ಯೆ ಡಿಪಿಎಆರ್ 6 ಎಸ್‌ಆರ್‌ಸಿ 2004 ದಿನಾಂಕ 16.11.2006ರ ಮೂಲಕ ಪ್ರತಿಯೋಜಿಸಲಾಗಿದೆ.

(4) ಸರ್ಕಾರವು ಅಥವಾ ನಿಯಮಿಸಲಾದ ಪ್ರಾಧಿಕಾರವು ಯಾವುದೇ ಕಾಲದಲ್ಲಿ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಸರ್ಕಾರಿ ನೌಕರನನ್ನು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ತಾನು ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಅಥವಾ ತನ್ನ ಪರವಾಗಿ ತನ್ನ ಕುಟುಂಬದ ಯಾರೇ ಸದಸ್ಯನು ಹೊಂದಿದ ಅಥವಾ ಆರ್ಜಿಸಿದ ಅಂಥ ಚರ ಅಥವಾ ಸ್ಥಿರ ಸ್ವತ್ತಿನ ಪೂರ್ಣ ಮತ್ತು ಸಮಗ್ರ ವಿವರಪಟ್ಟಿಕೆಯನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಒದಗಿಸುವಂತೆ ಅಗತ್ಯಪಡಿಸಬಹುದು. ಅಂಥ ವಿವರ ಪಟ್ಟಿಕೆಯು, ಅಂಥ ಸ್ವತ್ತನ್ನು ಯಾವ ರೀತಿಯಲ್ಲಿ ಅಥವಾ ಯಾವ ಮೂಲಗಳಿಂದ ಆರ್ಜಿಸಲಾಗಿದೆಯೋ ಆ ವಿವರಗಳನ್ನು ಒಳಗೊಂಡಿರಬೇಕೆಂದು ಸರ್ಕಾರವು ಅಥವಾ ನಿಯಮಿಸಲಾದ ಪ್ರಾಧಿಕಾರವು ಅಗತ್ಯಪಡಿಸಿದರೆ ಆ ವಿವರಗಳನ್ನು ಒಳಗೊಂಡಿತರಕ್ಕದ್ದು.

(5) ಸರ್ಕಾರವು (4)ನೇ ಉಪ ನಿಯಮವನ್ನು ಹೊರತುಪಡಿಸಿ [1]*[ಸಮೂಹ-ಸಿ ಅಥವಾ ಸಮೂಹ-ಡಿ] ಗೆ ಸೇರಿದ ಸರ್ಕಾರಿ ನೌಕರರ ಯಾವುದೇ ಪ್ರವರ್ಗವನ್ನು ಈ ನಿಯಮದ ಯಾವುವೇ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಆರ್‌ಸಿ 85 ದಿನಾಂಕ 30.12.1985ರ ಮೂಲಕ ಪ್ರತಿಯೋಜಿಸಲಾಗಿದೆ.

ವಿವರಣೆ:- ಈ ನಿಯಮದ ಉದ್ದೇಶಗಳಿಗಾಗಿ,-

[1][(1) "ಗುತ್ತಿಗೆ" ಎಂದರೆ ಸರ್ಕಾರಿ ನೌಕರನೊಂದಿಗೆ ಯಾವುದೇ ಅಧಿಕೃತ ವ್ಯವಹಾರಗಳನ್ನು ಹೊಂದಿರುವ ವ್ಯಕ್ತಿಯಿಂದ ಪಡೆದುಕೊಳ್ಳಲಾದುದನ್ನು ಅಥವಾ ಆ ವ್ಯಕ್ತಿಗೆ ನೀಡಲಾಗಿರುವುದನ್ನು ಹೊರತುಪಡಿಸಿ, ವರ್ಷದಿಂದ ವರ್ಷಕ್ಕೆ ಅಥವಾ ಒಂದು ವರ್ಷ ಮೀರಿದ ಯಾವುದೇ ಅವಧಿಗೆ ಅಥವಾ ವಾರ್ಷಿಕ ಬಾಡಿಗೆ ಬರುವಂತಿರುವ ಸ್ಥಿರಾಸ್ತಿಯ ಗುತ್ತಿಗೆ ಎಂದು ಅರ್ಥ][1].

1. ಅಧಿಸೂಚನೆ ಸಂಖ್ಯೆ ಜಿಎಡಿ 1 ಎಸ್‌ಆರ್‌ಸಿ 75 ದಿನಾಂಕ 6ನೇ ಅಕ್ಟೋಬರ್ 1975ರ ಮೂಲಕ ಸೇರಿಸಲಾಗಿದೆ.

(2) "ಚರಾಸ್ತಿ" ಎಂಬ ಪದಾವಳಿಯು,-

(ಎ) **ಒಡವೆಗಳು, [1][ವಿಮಾ ಪಾಲಿಸಿಗಳು, ಭವಿಷ್ಯ ನಿಧಿ,] ಷೇರುಗಳು, ಭದ್ರತಾ ಪತ್ರಗಳು ಮತ್ತು ಡಿಬೆಂಚರುಗಳು;

1. ಅಧಿಸೂಚನೆ ಸಂಖ್ಯೆ ಜಿಎಡಿ 5 ಎಸ್‌ಆರ್‌ಸಿ 73 ದಿನಾಂಕ 9ನೇ ನವೆಂಬರ್ 1973ರ ಮೂಲಕ ಪ್ರತಿಯೋಜಿಸಲಾಗಿದೆ.

(ಬಿ) ಅಂಥ ಸರ್ಕಾರಿ ನೌಕರರು ಭದ್ರತೆಪಡೆದು ಅಥವಾ ಭದ್ರತೆ ಪಡೆಯದೆ ನೀಡಿದ ಸಾಲಗಳು;

(ಸಿ) ಮೋಟಾರು ಕಾರುಗಳು, ಮೋಟಾರು ಸೈಕಲ್ಲುಗಳು, ಕುದುರೆಗಳು ಅಥವಾ ಇತರ ಯಾವುದೇ ಸಾಗಣೆ ಸಾಧನಗಳು; ಮತ್ತು

(ಡಿ) ರೆಫ್ರಿಜಿರೇಟರುಗಳು, ರೇಡಿಯೋಗಳು, ರೇಡಿಯೋಗ್ರಾಂಗಳು [2][ದೂರದರ್ಶನ ಸೆಟ್ಟುಗಳು] ಟೇಪ್‌ರೆಕಾರ್ಡರುಗಳು ಮತ್ತು ಟ್ರಾನ್ಸಿಸ್ಟರುಗಳು

- ಇವುಗಳನ್ನು ಒಳಗೊಳ್ಳುತ್ತದೆ.

2. ಅಧಿಸೂಚನೆ ಸಂಖ್ಯೆ ಜಿಎಡಿ 1 ಎಸ್‌ಆರ್‌ಸಿ 75 ದಿನಾಂಕ 6ನೇ ಅಕ್ಟೋಬರ್ 1975ರ ಮೂಲಕ ಸೇರಿಸಲಾಗಿದೆ.

(3) "ನಿಯಮಿಸಿದ ಪ್ರಾಧಿಕಾರ" ಎಂದರೆ,-

(ಎ) [1][(i) ಕರ್ನಾಟಕ ನ್ಯಾಯಾಂಗ ಸೇವೆಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ][1].

(ii) ಯಾವುದೇ ಕೆಳ ಪ್ರಾಧಿಕಾರವನ್ನು ಯಾವುದೇ ಉದ್ದೇಶಕ್ಕಾಗಿ ಸರ್ಕಾರವು ವಿಶೇಷವಾಗಿ ನಿರ್ದಿಷ್ಟಪಡಿಸಿದ ಹೊರತು ಯಾವುದೇ ಸಮೂಹ ಎ ಹುದ್ದೆಯನ್ನು ಧಾರಣ ಮಾಡಿರುವ ಯಾರೇ ಸರ್ಕಾರಿ ನೌಕರನ ಸಂದರ್ಭದಲ್ಲಿ, ಸರ್ಕಾರ;

(iii) ಯಾವುದೇ ಸಮೂಹ ಬಿ ಹುದ್ದೆಯನ್ನು ಧಾರಣ ಮಾಡಿರುವ ಯಾರೇ ಸರ್ಕಾರಿ ನೌಕರನ ಸಂದರ್ಭದಲ್ಲಿ, ಇಲಾಖಾ ಮುಖ್ಯಸ್ಥರು;

(iv) ಯಾವುದೇ ಸಮೂಹ ಸಿ ಅಥವಾ ಸಮೂಹ ಡಿ ಹುದ್ದೆಯನ್ನು ಧಾರಣ ಮಾಡಿರುವ ಯಾರೇ ಸರ್ಕಾರಿ ನೌಕರನ ಸಂದರ್ಭದಲ್ಲಿ, ಕಚೇರಿ ಮುಖ್ಯಸ್ಥರು

– ಎಂದು ಅರ್ಥ.

1. ಅಧಿಸೂಚನೆ ಸಂ. ಜಿಎಡಿ 12 ಎಸ್‌ಆರ್‌ಸಿ 75, ದಿನಾಂಕ 1ನೇ ಡಿಸೆಂಬರ್ 1975 ಕೆಜಿಡಿ 11ನೇ ಡಿಸೆಂಬರ್ 1975ರ ಮೂಲಕ ಸೇರಿಸಲಾಗಿದೆ.

(ಬಿ) ಇತರ ಯಾವುದೇ ಸರ್ಕಾರಕ್ಕೆ ಪ್ರತಿನಿಯೋಜನೆ ಮೇಲೆ ಅನ್ಯ ಸೇವೆಯ ಮೇಲಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ ಮಾತ್ರ ಇಲಾಖೆಯ ಯಾವ ಕೇಡರ್‌ನಲ್ಲಿ ಅಂಥ ಸರ್ಕಾರಿ ನೌಕರನು ಇರುವನೋ ಆ ಮಾತೃ ಇಲಾಖೆ ಅಥವಾ ಸರ್ಕಾರದ ಯಾವ ಆಡಳಿತ ಇಲಾಖೆಗೆ ಆ ಕೇಡರಿನ ಸದಸ್ಯನಾಗಿ ಆತನು ಆಡಳಿತಾತ್ಮಕವಾಗಿ ಅಧೀನನಾಗಿರುವನೋ ಆ ಆಡಳಿತ ಇಲಾಖೆ.

[1][23ಎ. **ಭಾರತದ ಹೊರಗೆ ಇರುವ ಸ್ಥಿರ ಸ್ವತ್ತನ್ನು ಆರ್ಜಿಸುವುದಕ್ಕೆ ಮತ್ತು ವಿಲೇ ಮಾಡುವುದಕ್ಕೆ ಮತ್ತು ವಿದೇಶಿಯರು, ಮುಂತಾದವರೊಂದಿಗೆ ವ್ಯವಹಾರಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ನಿರ್ಬಂಧಗಳು.–** 23ನೇ ನಿಯಮದ (2)ನೇ ಉಪನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ಸರ್ಕಾರಿ ನೌಕರನು ನಿಯಮಿಸಿದ ಪ್ರಾಧಿಕಾರದ ಪೂರ್ವ ಮಂಜೂರಾತಿ ಪಡೆದ ಹೊರತು,–

(ಎ) ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯರ ಹೆಸರಿನಲ್ಲಿ ಭಾರತದ ಹೊರಗೆ ಇರುವ ಯಾವುದೇ ಸ್ಥಿರ ಸ್ವತ್ತನ್ನು ಖರೀದಿಯ, ಅಡಮಾನದ, ಗುತ್ತಿಗೆಯ, ದಾನದ ಮೂಲಕ ಅಥವಾ ಅನ್ಯಥಾ ಆರ್ಜಿಸತಕ್ಕದ್ದಲ್ಲ.

(ಬಿ) ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಿ, ತಾನು ಆರ್ಜಿಸಿದ ಅಥವಾ ಧಾರಣ ಮಾಡಿದ, ಭಾರತದ ಹೊರಗಿರುವ ಯಾವುದೇ ಸ್ಥಿರಸ್ವತ್ತನ್ನು ಮಾರಾಟದ, ಅಡಮಾನದ, ದಾನದ ಮೂಲಕ ಅಥವಾ ಅನ್ಯಥಾ ವಿಲೇ ಮಾಡತಕ್ಕದ್ದಲ್ಲ ಅಥವಾ ಅವುಗಳ ಸಂಬಂಧದಲ್ಲಿ ಯಾವುದೇ ಗುತ್ತಿಗೆಯನ್ನು ನೀಡತಕ್ಕದ್ದಲ್ಲ.

(ಸಿ) (i) ಯಾವುದೇ ಸ್ಥಿರ ಸ್ವತ್ತನ್ನು ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಿ ಖರೀದಿಯ, ಅಡಮಾನದ, ದಾನದ ಮೂಲಕ ಅಥವಾ ಅನ್ಯಥಾ ಆರ್ಜಿಸಲು;

(ii) ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಿ ಆರ್ಜಿಸಿದ ಅಥವಾ ಧಾರಣ ಮಾಡಿದ ಯಾವುದೇ ಸ್ಥಿರಸ್ವತ್ತನ್ನು ಮಾರಾಟದ, ಅಡಮಾನದ, ದಾನದ ಮೂಲಕ ಅಥವಾ ಅನ್ಯಥಾ ವಿಲೇ ಮಾಡಲು ಅಥವಾ ಅವುಗಳ ಸಂಬಂಧದಲ್ಲಿ ಯಾವುದೇ ಗುತ್ತಿಗೆಯನ್ನು ನೀಡಲು

– ಯಾರೇ ವಿದೇಶೀಯನೊಂದಿಗೆ, ವಿದೇಶೀ ಸರ್ಕಾರದೊಂದಿಗೆ, ವಿದೇಶೀ ಸಂಘಟನೆಯೊಂದಿಗೆ ಅಥವಾ ಸಂಸ್ಥೆಯೊಂದಿಗೆ ಯಾವುದೇ ವ್ಯವಹಾರವನ್ನು ನಡೆಸತಕ್ಕದ್ದಲ್ಲ.

ವಿವರಣೆ:– ಈ ನಿಯಮದಲ್ಲಿ 'ನಿಯಮಿಸಿದ ಪ್ರಾಧಿಕಾರ' ಎಂಬುದು 23ನೇ ನಿಯಮದಲ್ಲಿರುವಂಥ ಅರ್ಥವನ್ನೇ ಹೊಂದಿರುತ್ತದೆ.][1]

1. ಅಧಿಸೂಚನೆ ಸಂ. ಜಿಎಡಿ 1 ಎಸ್‌ಆರ್‌ಸಿ 75, ದಿನಾಂಕ 6ನೇ ಅಕ್ಟೋಬರ್ 1975 ಕೆಜಿಡಿ 23ನೇ ಅಕ್ಟೋಬರ್ 1975ರ ಮೂಲಕ ಸೇರಿಸಲಾಗಿದೆ.

24. **ಸರ್ಕಾರಿ ನೌಕರರ ಕೃತ್ಯಗಳ ಮತ್ತು ನಡತೆಯ ಸಮರ್ಥನೆ.–** (1) ಯಾರೇ ಸರ್ಕಾರಿ ನೌಕರನು ಸರ್ಕಾರದ ಪೂರ್ವ ಮಂಜೂರಾತಿ ಪಡೆದ ಹೊರತು ಯಾವ ಅಧಿಕೃತ ಕೃತ್ಯವು ಪ್ರತಿಕೂಲ ಟೀಕೆಯ ಅಥವಾ ಮಾನಹಾನಿ ಸ್ವರೂಪದ ನಿಂದನೆಯ ವಸ್ತು ವಿಷಯವಾಗಿರುವುದೋ ಆ ಯಾವುದೇ ಅಧಿಕೃತ ಕೃತ್ಯದ ಸಮರ್ಥನೆಗಾಗಿ ಯಾವುದೇ ನ್ಯಾಯಾಲಯಕ್ಕೆ ಅಥವಾ ಪತ್ರಿಕೆಗೆ ಮೊರೆಹೋಗತಕ್ಕದ್ದಲ್ಲ.

(2) ಈ ನಿಯಮದಲ್ಲಿರುವುದು ಯಾವುದೂ, ಸರ್ಕಾರಿ ನೌಕರನು ತನ್ನ ಖಾಸಗಿ ಚಾರಿತ್ರ್ಯವನ್ನು ಅಥವಾ ಖಾಸಗಿ ವ್ಯಕ್ತಿಯಾಗಿ ತಾನು ಮಾಡಿದ ಯಾವುದೇ ಕೃತ್ಯವನ್ನು ಸಮರ್ಥಿಸಿಕೊಳ್ಳುವುದನ್ನು ನಿಷೇಧಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ ಮತ್ತು ಆತನ ಖಾಸಗಿ ಚಾರಿತ್ರ್ಯವನ್ನು ಅಥವಾ ಖಾಸಗಿ ವ್ಯಕ್ತಿಯಾಗಿ ಆತನು ಮಾಡಿದ ಯಾವುದೇ ಕೃತ್ಯವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಕ್ರಮವನ್ನು ಕೈಗೊಂಡಿರುವಲ್ಲಿ ಸರ್ಕಾರಿ ನೌಕರನು ಅಂಥ ಕ್ರಮ ಕುರಿತಂತೆ ನಿಯಮಿಸಿದ ಪ್ರಾಧಿಕಾರಿಗೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

25. **ಅಪ್ರಾಪ್ತವಯಸ್ಕರ ಪಾಲನೆ.**- ಸರ್ಕಾರಿ ನೌಕರನು, ನಿಯಮಿಸಿದ ಪ್ರಾಧಿಕಾರದ ಪೂರ್ವ ಮಂಜೂರಾತಿ ಪಡೆಯದೆ, ತನ್ನ ಅವಲಂಬಿತನನ್ನು ಹೊರತುಪಡಿಸಿ ಇತರ ಅಪ್ರಾಪ್ತ ವಯಸ್ಕನ ಶರೀರದ ಅಥವಾ ಸ್ವತ್ತಿನ ಕಾನೂನು ಪಾಲಕನಂತೆ ಕಾರ್ಯನಿರ್ವಹಿಸತಕ್ಕದ್ದಲ್ಲ.

ವಿವರಣೆ:- ಈ ನಿಯಮದ ಉದ್ದೇಶಕ್ಕಾಗಿ ಅವಲಂಬಿತ ಎಂದರೆ ಸರ್ಕಾರಿ ನೌಕರನ ಹೆಂಡತಿ, ಮಕ್ಕಳು ಮತ್ತು ಮಲಮಕ್ಕಳು ಮತ್ತು ಮೊಮ್ಮಕ್ಕಳು ಎಂದು ಅರ್ಥ ಮತ್ತು ಅದರಲ್ಲಿ ಅವನೊಂದಿಗೆ ವಾಸಿಸುತ್ತಿರುವ ಮತ್ತು ಅವನ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರುವ, ಅವನ ಸಹೋದರಿಯರು, ಸಹೋದರರು, ಸಹೋದರರ ಮಕ್ಕಳು ಮತ್ತು ಸಹೋದರಿಯರ ಮಕ್ಕಳೂ ಸಹ ಒಳಗೊಳ್ಳುತ್ತಾರೆ.

26. **ಸರ್ಕಾರೇತರ ಅಥವಾ ಇತರ ಪ್ರಭಾವವನ್ನು ಬೀರುವುದು.**- ಯಾರೇ ಸರ್ಕಾರಿ ನೌಕರನು ಸರ್ಕಾರದ ಅಧೀನದಲ್ಲಿ ತನ್ನ ಸೇವೆಗೆ ಸಂಬಂಧಿಸಿದ ವಿಷಯಗಳ ಸಂಬಂಧದಲ್ಲಿ ಅವನ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳಲು ಯಾರೇ ವರಿಷ್ಠ ಅಧಿಕಾರಿಯ ಮೇಲೆ ಯಾವುದೇ ರಾಜಕೀಯ ಅಥವಾ ಇತರ ಪ್ರಭಾವವನ್ನು ತರತಕ್ಕದ್ದಲ್ಲ ಅಥವಾ ತರಲು ಪ್ರಯತ್ನಿಸತಕ್ಕದ್ದಲ್ಲ.

27. **ಸರ್ಕಾರಿ ನೌಕರನ ವೈಯಕ್ತಿಕ ಮನವಿಗಳು.**- ಸರ್ಕಾರಿ ನೌಕರನು ಯಾವುದೇ ಮನವಿಯನ್ನು ತನ್ನ ಮೇಲಧಿಕಾರಿಯ ಮೂಲಕ ಮಾತ್ರ ಸಲ್ಲಿಸತಕ್ಕದ್ದು ಮತ್ತು ಅದನ್ನು ಸರ್ಕಾರಕ್ಕೆ ಸಂಬೋಧಿಸಿದಾಗಲೆಲ್ಲಾ ಅದರ ಮುಂಗಡ ಪ್ರತಿಯನ್ನು ಸಂಬಂಧಪಟ್ಟ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರಿಗೆ ಮಾತ್ರ ಸಲ್ಲಿಸತಕ್ಕದ್ದು, ಆದರೆ ಆ ಇಲಾಖೆಯ ಪ್ರಭಾರದಲ್ಲಿರುವ ಸಚಿವರಿಗೆ ಅಲ್ಲ:

[1][ಪರಂತು, ಸರ್ಕಾರಿ ನೌಕರನಿಗೆ ಕೆಳಗಿನ ಅಧಿಕಾರಿಗಳ ಗಮನ ಸೆಳೆಯಲು ಅಥವಾ ಅವರಿಂದ ಪರಿಹಾರ ಪಡೆಯಲು ಬಳಸಿದ ಎಲ್ಲ ಅವಕಾಶಗಳು ಮುಗಿದಾಗ ಅಥವಾ ಮೂರು ತಿಂಗಳ ಅವಧಿಯೊಳಗಾಗಿ ಅವನ ಮನವಿಗೆ ಉತ್ತರ ಬಾರದಿದ್ದರೆ, ಅವನು ತನ್ನ ಮನವಿಯ ಒಂದು ಮುಂಗಡ ಪ್ರತಿಯನ್ನು ಸಂಬಂಧಪಟ್ಟ ಸಚಿವರಿಗೆ ಸಲ್ಲಿಸಬಹುದು.][1]

1. ಅಧಿಸೂಚನೆ ಸಂಖ್ಯೆ ಜಿಎಡಿ 4 ಎಸ್‌ಆರ್‌ಸಿ 75 ದಿನಾಂಕ 28ನೇ ಅಕ್ಟೋಬರ್ 1975ರ ಕೆಜಿಡಿ 6ನೇ ನವೆಂಬರ್ 1975ರ ಮೂಲಕ ಸೇರಿಸಲಾಗಿದೆ.

28. **ದ್ವಿಪತ್ನಿ ವಿವಾಹ.**- (1) ಯಾರೇ ಸರ್ಕಾರಿ ನೌಕರನಿಗೆ ಈಗಾಗಲೇ ಜೀವಂತ ಪತ್ನಿ ಇರುವಾಗ ತತ್ಕಾಲದಲ್ಲಿ ಅವನಿಗೆ ಅನ್ವಯವಾಗುವ ವೈಯಕ್ತಿಕ ಕಾನೂನಿನ ಅಡಿಯಲ್ಲಿ ಎರಡನೇ ವಿವಾಹವಾಗಲು ಅನುಮತಿ ಇದ್ದಾಗ್ಯೂ, ಆತನು ಮೊದಲು ಸರ್ಕಾರದ ಅನುಮತಿಯನ್ನು ಪಡೆಯದೆ ಇನ್ನೊಂದು ವಿವಾಹವನ್ನು ಮಾಡಿಕೊಳ್ಳತಕ್ಕದ್ದಲ್ಲ.

(2) ಯಾರೇ ಮಹಿಳಾ ಸರ್ಕಾರಿ ನೌಕರಳು ಮೊದಲು ಸರ್ಕಾರದ ಅನುಮತಿಯನ್ನು ಪಡೆಯದೆ ಜೀವಂತ ಪತ್ನಿಯನ್ನು ಹೊಂದಿರುವ ವ್ಯಕ್ತಿಯನ್ನು ವಿವಾಹವಾಗತಕ್ಕದ್ದಲ್ಲ.

[1][28ಎ] XXX][1]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 21 ಎಸ್‌ಆರ್‌ಸಿ 76 ದಿನಾಂಕ 15-1-1977 ರ ಮೂಲಕ 28ಎ ಪ್ರಕರಣವನ್ನು ಸೇರಿಸಲಾಗಿತ್ತು ಮತ್ತು ಅಧಿಸೂಚನೆ ಸಂಖ್ಯೆ ಡಿಪಿಎಆರ್ 14 ಎಸ್‌ಆರ್‌ಸಿ 77, ದಿನಾಂಕ 8-11-1977ರ ಮೂಲಕ 28ಎ ಪ್ರಕರಣವನ್ನು ಬಿಟ್ಟುಬಿಡಲಾಗಿದೆ.

29. **ಮಾದಕ ಪೇಯಗಳು ಮತ್ತು ಮಾದಕ ವಸ್ತುಗಳ ಸೇವನೆ.**- ಸರ್ಕಾರಿ ನೌಕರನು,-

(ಎ) ತಾನು ತತ್ಕಾಲದಲ್ಲಿ ಇರುವ ಯಾವುದೇ ಪ್ರದೇಶದಲ್ಲಿ ಮಾದಕ ಪೇಯಗಳಿಗೆ ಅಥವಾ ಮಾದಕ ವಸ್ತುಗಳಿಗೆ ಸಂಬಂಧಪಟ್ಟ ಜಾರಿಯಲ್ಲಿರುವ ಯಾವುದೇ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

(ಬಿ) ಯಾವುದೇ ಮಾದಕ ಪೇಯದ ಅಥವಾ ಮಾದಕ ವಸ್ತುಗಳ ಪ್ರಭಾವದಿಂದ ಯಾವುದೇ ರೀತಿಯಲ್ಲಿ ತನ್ನ ಕರ್ತವ್ಯಗಳ ಪಾಲನೆಗೆ ಧಕ್ಕೆ ಉಂಟಾಗುವುದಿಲ್ಲವೆಂಬುದರ ಬಗ್ಗೆ ಸೂಕ್ತ ಎಚ್ಚರಿಕೆ ವಹಿಸತಕ್ಕದ್ದು.

[1][(ಬಿಬಿ)ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಮಾದಕ ಪೇಯವನ್ನು ಅಥವಾ ಮಾದಕ ವಸ್ತುವನ್ನು ಸೇವಿಸತಕ್ಕದ್ದಲ್ಲ][1]

1. ಅಧಿಸೂಚನೆ ಸಂಖ್ಯೆ ಜಿಎಡಿ 1 ಎಸ್‌ಆರ್‌ಸಿ 75, ದಿನಾಂಕ 6ನೇ ಅಕ್ಟೋಬರ್ 1975 ಕೆಜಿಡಿ 25ನೇ ಅಕ್ಟೋಬರ್ 1976ರ ಮೂಲಕ ಪ್ರತಿಯೋಜಿಸಲಾಗಿದೆ.

(ಸಿ) ಕುಡಿದು ಮತ್ತೇರಿದ ಸ್ಥಿತಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಕಾಣಿಸಿಕೊಳ್ಳತಕ್ಕದ್ದಲ್ಲ:

(ಡಿ) ರೂಢಿಗತವಾಗಿ ಯಾವುದೇ ಮಾದಕ ಪೇಯವನ್ನು ಅಥವಾ ಮಾದಕ ವಸ್ತುವನ್ನು ಅತಿಯಾಗಿ ಸೇವನೆ ಮಾಡತಕ್ಕದ್ದಲ್ಲ.

[1][**ವಿವರಣೆ**.- ಈ ನಿಯಮದ ಉದ್ದೇಶಕ್ಕಾಗಿ 'ಸಾರ್ವಜನಿಕ ಸ್ಥಳ', ಎಂದರೆ ಹಣ ಪಾವತಿ ಮಾಡಿ ಅಥವಾ ಅನ್ಯಥಾ ಸಾರ್ವಜನಿಕರಿಗೆ (ವಾಹನವೂ ಸೇರಿದಂತೆ) ಪ್ರವೇಶಾವಕಾಶವಿರುವ ಅಥವಾ ಪ್ರವೇಶವನ್ನು ಅನುಮತಿಸಲಾಗಿರುವ ಯಾವುದೇ ಸಾರ್ವಜನಿಕ ಸ್ಥಳ ಅಥವಾ ಆವರಣಗಳು ಎಂದು ಅರ್ಥ].

1. ಅಧಿಸೂಚನೆ ಸಂಖ್ಯೆ ಜಿಎಡಿ 1 ಎಸ್‌ಆರ್‌ಸಿ 75, ದಿನಾಂಕ 6ನೇ ಅಕ್ಟೋಬರ್ 1975 ಕೆಜಿಡಿ 25ನೇ ಅಕ್ಟೋಬರ್ 1976ರ ಮೂಲಕ ಪ್ರತಿಯೋಜಿಸಲಾಗಿದೆ.

[1][29ಎ. **ಮಕ್ಕಳ ನಿಯೋಜನೆ**.- (1) ಯಾರೇ ಸರ್ಕಾರಿ ನೌಕರನು ಗೃಹ ಕೃತ್ಯದಲ್ಲಿ ಸಹಾಯ ಮಾಡುವುದಕ್ಕಾಗಿ ಹದಿನಾಲ್ಕು ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವುದೇ ಮಗುವನ್ನು ಕೆಲಸಕ್ಕೆ ಇಟ್ಟುಕೊಳ್ಳತಕ್ಕದ್ದಲ್ಲ;

(2) ಯಾರೇ ಸರ್ಕಾರಿ ನೌಕರನು (1)ನೇ ಉಪನಿಯಮವನ್ನು ಉಲ್ಲಂಘನೆ ಮಾಡುವುದು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ದಂಡನೆಗಳಿಗೆ ಒಳಪಡುವ ದುರ್ನಡತೆ ಎನಿಸಿಕೊಳ್ಳುತ್ತದೆ.]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಆರ್‌ಸಿ 97, ದಿನಾಂಕ 11ನೇ ನವೆಂಬರ್ 1997 ಕೆಜಿಡಿ 19ನೇ ನವೆಂಬರ್ 1976ರ ಮೂಲಕ ಸೇರಿಸಲಾಗಿದೆ.

[1][29ಬಿ. **ಲೈಂಗಿಕ ಕಿರುಕುಳದ ನಿಷೇಧ**.- ಯಾರೇ ಸರ್ಕಾರಿ ನೌಕರನು ಕೆಲಸದ ಸ್ಥಳಗಳಲ್ಲಿ ಯಾರೇ ಮಹಿಳಾ ಸರ್ಕಾರಿ ನೌಕರಳನ್ನು ಲೈಂಗಿಕ ಕಿರುಕುಳಕ್ಕೆ ಒಳಪಡಿಸತಕ್ಕದ್ದಲ್ಲ.

ವಿವರಣೆ.- ಈ ನಿಯಮದ ಉದ್ದೇಶಕ್ಕಾಗಿ "ಲೈಂಗಿಕ ಕಿರುಕುಳ" ಎಂಬುದು (ನೇರವಾದ ಅಥವಾ ಸೂಚ್ಯವಾದ) ಇಷ್ಟವಾಗದ ಲೈಂಗಿಕ ಉದ್ದೇಶವುಳ್ಳ ನಡತೆಯನ್ನು, ಎಂದರೆ,-

(ಎ) ಮೈಮುಟ್ಟುವುದು ಮತ್ತು ಒಲಿಸಿಕೊಳ್ಳಲು ಪ್ರಯತ್ನಿಸುವುದನ್ನು;

(ಬಿ) ಲೈಂಗಿಕ ಅನುಗ್ರಹಕ್ಕಾಗಿ ಒತ್ತಾಯ ಮಾಡುವುದನ್ನು ಅಥವಾ ಬೇಡಿಕೊಳ್ಳುವುದನ್ನು;

(ಸಿ) ಲೈಂಗಿಕ ವರ್ಣನೆಯ ಮಾತುಗಳನ್ನಾಡುವುದನ್ನು;

(ಡಿ) ಅಶ್ಲೀಲ ಸಾಹಿತ್ಯ, ಚಿತ್ರಗಳನ್ನು ತೋರಿಸುವುದನ್ನು ಅಥವಾ;

(ಇ) ಯಾವುದೇ ಇತರ ಇಷ್ಟವಾಗದ ಲೈಂಗಿಕ ಸ್ವರೂಪದ ದೈಹಿಕ, ಮೌಖಿಕ ಅಥವಾ ಆಂಗಿಕ ವರ್ತನೆಯನ್ನು

- ಒಳಗೊಳ್ಳುತ್ತದೆ.][1]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 14 ಎಸ್‌ಆರ್‌ಸಿ 97, ದಿನಾಂಕ 17ನೇ ಜೂನ್ 1998 ಕೆಜಿಡಿ 26ನೇ ಜೂನ್ 1998ರ ಮೂಲಕ ಸೇರಿಸಲಾಗಿದೆ.

[1][29ಸಿ. **ಗಂಡ/ ಹೆಂಡತಿಯ ಮತ್ತು ಮಕ್ಕಳ ಪಾಲನೆ**.- ಯಾರೇ ಸರ್ಕಾರಿ ನೌಕರನು/ಳು ಅವನ ಹೆಂಡತಿಯ ಅಥವಾ ಅವಳ ಗಂಡನ ಮತ್ತು ಮಕ್ಕಳ ಆಹಾರ, ಬಟ್ಟೆ, ವಸತಿ ಮತ್ತು ಶಿಕ್ಷಣ, ಮುಂತಾದವುಗಳಂಥ ಮೂಲ ಅವಶ್ಯಕತೆಗಳ ಬಗ್ಗೆ ಕಾಳಜಿ ವಹಿಸಲು ನಿರ್ಲಕ್ಷಿಸತಕ್ಕದ್ದಲ್ಲ.]

1. ಅಧಿಸೂಚನೆ ಸಂಖ್ಯೆ ಡಿಪಿಎಆರ್ 6 ಎಸ್‌ಆರ್‌ಸಿ 2002 ದಿನಾಂಕ 5.2.2004ರ ಮೂಲಕ ಸೇರಿಸಲಾಗಿದೆ.

30. ಅರ್ಥ ವಿವರಣೆ.-ಈ ನಿಯಮಗಳ ಅರ್ಥ ವಿವರಣೆಗೆ ಸಂಬಂಧಪಟ್ಟಂತೆ ಯಾವುದೇ ಪ್ರಶ್ನೆ ಉದ್ಭವಿಸಿದರೆ ಅದನ್ನು ಸರ್ಕಾರಕ್ಕೆ ಉಲ್ಲೇಖಿಸತಕ್ಕದ್ದು, ಆ ಬಗ್ಗೆ ಅದರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

31. ಅಧಿಕಾರಗಳ ಪ್ರತ್ಯಾಯೋಜನೆ.- ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ನಿಯಮಗಳ ಮೇರೆಗೆ ತಾನು ಅಥವಾ ಯಾರೇ ಇಲಾಖಾ ಮುಖ್ಯಸ್ಥರು ಚಲಾಯಿಸಬಹುದಾದ ಯಾವುದೇ ಅಧಿಕಾರವು (30ನೇ ನಿಯಮದ ಮತ್ತು ಈ ನಿಯಮದ ಮೇರೆಗಿನ ಅಧಿಕಾರವನ್ನು ಹೊರತುಪಡಿಸಿ) ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯು ಅಥವಾ ಪ್ರಾಧಿಕಾರವೂ ಸಹ ಚಲಾಯಿಸಬಹುದಾದುದು ಆಗಿರತಕ್ಕದ್ದೆಂದು ನಿರ್ದೇಶಿಸಬಹುದು.

32. ನಿರಸನ ಮತ್ತು ಉಳಿಸುವಿಕೆಗಳು.- ಈ ನಿಯಮಗಳ ಪ್ರಾರಂಭದ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ಈ ನಿಯಮಗಳಿಗೆ ಸಂವಾದಿಯಾದ ಮತ್ತು ಯಾವ ಸರ್ಕಾರಿ ನೌಕರನಿಗೆ ಈ ನಿಯಮಗಳು ಅನ್ವಯವಾಗುವುವೋ ಆ ಸರ್ಕಾರಿ ನೌಕರನಿಗೆ ಅನ್ವಯವಾಗುವ ಆ ಯಾವುದೇ ನಿಯಮಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಹಾಗೆ ನಿರಸನಗೊಳಿಸಲಾದ ನಿಯಮಗಳ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ನಿಯಮಗಳ ಸಂವಾದಿ ಉಪಬಂಧಗಳ ಮೇರೆಗೆ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

[ಸಂ.ಜಿಎಡಿ 14 ಎಸ್‌ಎಸ್‌ಆರ್ 66]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ವೆಸರಿನಲ್ಲಿ,

ಡಬ್ಲ್ಯೂ.ಎ. ಸ್ಮಿತ್,

ಅಧೀನ ಕಾರ್ಯದರ್ಶಿ.

ಮೈಸೂರು ಸರ್ಕಾರ

ಅಧಿಸೂಚನೆ

ಸಂ:ಜಿಎಡಿ 96 ಎಸ್‌ಎಸ್‌ಆರ್ 66, ಬೆಂಗಳೂರು, ದಿನಾಂಕ 15-9-1966.

ಮೈಸೂರು ರಾಜ್ಯಪಾಲರು, ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಮತ್ತು ಈ ಬಗ್ಗೆ ಅವರನ್ನು ಶಕ್ತಗೊಳಿಸುವ ಇತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಮೈಸೂರು ಸಿವಿಲ್ ಸೇವಾ ನಿಯಮಗಳು (ನಡತೆ) ತಿದ್ದುಪಡಿ ನಿಯಮಗಳು, 1966 ಎಂದು ಕರೆಯತಕ್ಕದ್ದು.

(2) ಅವು ಕೂಡಲೇ ಜಾರಿಗೆ ಬರತಕ್ಕದ್ದು.

2. **ನಿಯಮ 8ರ ತಿದ್ದುಪಡಿ.-** ಮೈಸೂರು ಸಿವಿಲ್ ಸೇವಾ (ನಡತೆ) ತಿದ್ದುಪಡಿ ನಿಯಮಗಳು, 1966ರ ನಿಯಮ 8 ರಲ್ಲಿ,-

(1) (ii) ನೇ ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ii) ಎಷ್ಟೇ ಸಂಖ್ಯೆಯ ಸರ್ಕಾರಿ ನೌಕರರೊಡನೆ ಸೇರಿ ಯಾವುದೇ ಬಗೆಯ ಮುಷ್ಕರಕ್ಕೆ ತೊಡಗತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಅದಕ್ಕೆ ಪ್ರೇರೇಪಣೆ ಮಾಡತಕ್ಕದ್ದಲ್ಲ, ಪ್ರಚೋದನೆ ಮಾಡತಕ್ಕದ್ದಲ್ಲ ಅಥವಾ ದುಷ್ಪ್ರೇರಣೆ ಮಾಡತಕ್ಕದ್ದಲ್ಲ."

(2) ನಿಯಮದ ಕೊನೆಯಲ್ಲಿ, ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ:-

ವಿವರಣೆ:- ಈ ನಿಯಮದ ಉದ್ದೇಶಗಳಿಗಾಗಿ "ಮುಷ್ಕರ" ಎಂದರೆ (ಕರ್ತವ್ಯದಿಂದ ಅನಧಿಕೃತವಾಗಿ ಗೈರು ಹಾಜರಾಗುವುದೂ ಸೇರಿದಂತೆ) ಸರ್ಕಾರಿ ನೌಕರರ ಒಂದು ಗುಂಪು ಒಟ್ಟಾಗಿ ಸೇರಿಕೊಂಡು ಕೆಲಸ ಮಾಡುವುದನ್ನು ನಿಲ್ಲಿಸುವುದು ಅಥವಾ ಎಷ್ಟೇ ಸಂಖ್ಯೆಯ ಸರ್ಕಾರಿ ನೌಕರರು ಒಟ್ಟಾಗಿ ಸೇರಿ ಅಥವಾ ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ಕೆಲಸ ಮಾಡಲು ನಿರಾಕರಿಸುವುದು ಎಂದು ಅರ್ಥ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ತಿಪ್ಪಾಜಿರಾವ್,

ಸರ್ಕಾರದ ಉಪ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವೆಗಳು).

ಮೈಸೂರು ಸರ್ಕಾರ

ಅಧಿಕೃತ ಜ್ಞಾಪನ

ಸಂ: ಜಿಎಡಿ 9 ಎಸ್‌ಎಸ್‌ಆರ್ 67, ಬೆಂಗಳೂರು, ದಿನಾಂಕ 18-12-1967

ವಿಷಯ : ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು-ಸರ್ಕಾರಿ ನೌಕರರು ಆರ್ಜಿಸಿದ ಅಥವಾ ಹೊಂದಿರುವ ಚರ, ಸ್ಥಿರ ಮತ್ತು ಬೆಲೆಬಾಳುವ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಿವರಪಟ್ಟಿಕೆ

ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 23ನೇ ನಿಯಮದ (1)ನೇ ಉಪನಿಯಮದ ಮೇರೆಗೆ ಪ್ರತಿಯೊಬ್ಬ ಸರ್ಕಾರಿ ನೌಕರನು, ಯಾವುದೇ ಸೇವೆಗೆ ಅಥವಾ ಹುದ್ದೆಗೆ ಮೊದಲು ನೇಮಕಗೊಂಡಾಗ ಮತ್ತು ಆ ತರುವಾಯ ಪ್ರತಿ 12 ತಿಂಗಳಿಗೊಮ್ಮೆ ಆತನ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಬಗ್ಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ:-

(ಎ) ತನಗೆ ಪಿತ್ರಾರ್ಜಿತವಾಗಿ ಬಂದ ಅಥವಾ ತಾನು ಒಡೆತನ ಹೊಂದಿರುವ ಅಥವಾ ಆರ್ಜಿಸಿದ ಅಥವಾ ತನ್ನ ಸ್ವಂತ ಹೆಸರಿನಲ್ಲಾಗಲೀ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಾಗಲೀ ಅಥವಾ ಇತರ ಯಾರೇ ವ್ಯಕ್ತಿಯ ಹೆಸರಿನಲ್ಲಾಗಲೀ, ಗುತ್ತಿಗೆ ಅಥವಾ ಅಡಮಾನದ ಮೇಲೆ ಅವನು ಹೊಂದಿರುವ ಸ್ಥಿರಸ್ವತ್ತು;

(ಬಿ) ತನಗೆ ಪಿತ್ರಾರ್ಜಿತವಾಗಿ ಬಂದ ಅಥವಾ ಅದೇ ರೀತಿ ಅವನು ಒಡೆತನ ಹೊಂದಿದ, ಆರ್ಜಿಸಿದ ಅಥವಾ ಹೊಂದಿದ ಷೇರುಗಳು, ಡಿಬೆಂಚರುಗಳು ಮತ್ತು ಬ್ಯಾಂಕ್ ಠೇವಣಿಗಳೂ ಸೇರಿದಂತೆ ನಗದು;

(ಸಿ) ತನಗೆ ಪಿತ್ರಾರ್ಜಿತವಾಗಿ ಬಂದ ಅಥವಾ ಅದೇ ರೀತಿ ಅವನು ಒಡೆತನ ಹೊಂದಿದ, ಆರ್ಜಿಸಿದ ಅಥವಾ ಹೊಂದಿದ ಇತರ ಚರ ಸ್ವತ್ತು;

(ಡಿ) ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವನು ಮಾಡಿಕೊಂಡ ಸಾಲಗಳು ಅಥವಾ ಹೊತ್ತಿರುವ ಇತರ ಹೊಣೆಗಾರಿಕೆಗಳು

-ಇವುಗಳನ್ನು ಕುರಿತು ಪೂರ್ಣ ವಿವರಗಳನ್ನು ನೀಡಿ ವಿವರ ಪಟ್ಟಿಕೆಯನ್ನು ಸಲ್ಲಿಸಲು ಅಗತ್ಯಪಡಿಸಲಾಗಿದೆ.

ವಿವರಪಟ್ಟಿಕೆಯನ್ನು ರಾಜ್ಯ ಸರ್ಕಾರದ ಗೆಜೆಟೆಡ್ ಮತ್ತು ನಾನ್-ಗೆಜೆಟೆಡ್ ಅಧಿಕಾರಿಗಳು ಮೊಹರು ಮಾಡಿದ ಪ್ರತ್ಯೇಕ ಲಕೋಟೆಗಳಲ್ಲಿ ಪ್ರತಿ ವರ್ಷದ ಜನವರಿ ತಿಂಗಳಲ್ಲಿ ಇದಕ್ಕೆ ಲಗತ್ತಿಸಲಾದ ನಮೂನೆಯಲ್ಲಿ ನಿಯಮಿಸಿದ ಪ್ರಾಧಿಕಾರಕ್ಕೆ/ ಸರ್ಕಾರಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ನಿರ್ದೇಶಿಸಲಾಗಿದೆ. ಹೊಸದಾಗಿ ಸೇರಿರುವವರ ಸಂಬಂಧದಲ್ಲಿ ವಿವರಪಟ್ಟಿಕೆಯನ್ನು ಅವರ ಮೊದಲ ನೇಮಕದ ಒಂದು ತಿಂಗಳೊಳಗೆ ಮತ್ತು ತರುವಾಯ ಪ್ರತಿವರ್ಷದ ಜನವರಿ ತಿಂಗಳಲ್ಲಿ ಸಲ್ಲಿಸತಕ್ಕದ್ದು.

ವಿವರಪಟ್ಟಿಕೆಗಳನ್ನು ರಹಸ್ಯವೆಂಬುದಾಗಿ ಪರಿಗಣಿಸತಕ್ಕದ್ದು ಮತ್ತು ಅವುಗಳನ್ನು ಸಂಬಂಧಪಟ್ಟ ಸರ್ಕಾರಿ ನೌಕರರ ರಹಸ್ಯ ವರದಿಗಳನ್ನು ಇಟ್ಟುಕೊಂಡು ಬರಲು ಯಾವ ಅಧಿಕಾರಿಗಳನ್ನು ಅಗತ್ಯಪಡಿಸಲಾಗಿದೆಯೋ ಆ ಅಧಿಕಾರಿಗಳ ಅಭಿರಕ್ಷೆಯಲ್ಲಿ ಇಡತಕ್ಕದ್ದು. ವಿವರಪಟ್ಟಿಕೆಗಳನ್ನು ರಹಸ್ಯ ವರದಿಯೊಂದಿಗೆ ಸಲ್ಲಿಸದೆ ಅವುಗಳನ್ನು ಪ್ರತ್ಯೇಕವಾಗಿ ಇಡತಕ್ಕದ್ದು.

ಸರ್ಕಾರಿ ಆದೇಶ ಸಂಖ್ಯೆ ಜಿಎಡಿ 21 ಎಸ್ಆರ್‌ಸಿ 75, ದಿನಾಂಕ 14-11-1975ಕ್ಕೆ ಅನುಬಂಧ

(ಅಧಿಕೃತ ಜ್ಞಾಪನ ಪತ್ರ ಸಂ ಜಿಎಡಿ 9 ಎಸ್ಎಸ್ಆರ್ 67, ದಿನಾಂಕ 18-12-1967ರಲ್ಲಿ ನಿಯಮಿಸಲಾದ ನಮೂನೆಯ ಪ್ರತಿ)

ನಮೂನೆ

19---------- ನೇ ವರ್ಷದ ಆಸ್ತಿಗಳ ಹಾಗೂ ಹೊಣೆಗಾರಿಕೆಗಳ ವಿವರ ಪತ್ರ

(ನಿಯಮ 23)

1. ಅಧಿಕಾರಿಯ ಹೆಸರು
2. ಈಗ ಧಾರಣ ಮಾಡಿರುವ ಹುದ್ದೆ
3. ಸರ್ಕಾರಿ ಸೇವೆಗೆ ಸೇರಿದ ದಿನಾಂಕ
4. ಈಗಿನ ವೇತನ
5. ಆಸ್ತಿಗಳು

(i) ಸ್ಥಿರ ಸ್ವತ್ತು:-
ಪಿತ್ರಾರ್ಜಿತವೇ ಅಥವಾ ಸ್ವಂತದ್ದೇ ಅಥವಾ ಗುತ್ತಿಗೆ ಅಥವಾ
ಅಡಮಾನದ ಮೇರೆಗೆ ಹೊಂದಲಾಗಿದೆಯೇ?

(ಎ) ಬಾಗಾಯ್ತು ಜಮೀನು ಮತ್ತು ಪ್ಲಾಂಟೇಷನ್ ಜಮೀನು.-

(i) ಯಾರ ಹೆಸರಿನಲ್ಲಿ ಹೊಂದಲಾಗಿದೆ.
(ಸ್ವಂತ ಹೆಸರಿನಲ್ಲಿ ಇಲ್ಲದಿದ್ದರೆ, ಯಾರ ಹೆಸರಿನಲ್ಲಿ ಹೊಂದಲಾಗಿದೆ ತಿಳಿಸಿ ಹಾಗೂ ಸರ್ಕಾರಿ ನೌಕರನೊಂದಿಗೆ ಆತನ ಅಥವಾ ಆಕೆಯ ಸಂಬಂಧ)

(ii) ಅದು ಇರುವ ಸ್ಥಳ
(ಜಿಲ್ಲೆ, ತಾಲೂಕು ಹಾಗೂ ಗ್ರಾಮ ಅಥವಾ ಪಟ್ಟಣ)

(iii) ಸರ್ವೇ ನಂಬರ್

(iv) ವಿಸ್ತೀರ್ಣ

(v) ಆದಾಯ

(vi) ಸಂದಾಯ ಮಾಡಿದ ಬೆಲೆ

(vii) ಅಂದಾಜು ಮೌಲ್ಯ

(viii) ಸ್ವಂತದ್ದಾದರೆ, ಅದನ್ನು ಹೇಗೆ ಆರ್ಜಿಸಲಾಗಿದೆ (ಖರೀದಿ, ದಾನ ಅಥವಾ ಪಿತ್ರಾರ್ಜಿತ)

ಅಥವಾ

ಗುತ್ತಿಗೆ ಅಥವಾ ಅಡಮಾನದ ಮೇಲೆ ಹೊಂದಿದ್ದರೆ, ಗುತ್ತಿಗೆ ಅಥವಾ ಅಡಮಾನದ ವಿವರಗಳು

(ಬಿ) ನೀರಿನ ಮೂಲವಿರುವ ಭೂಮಿ, ತರಿ ಅಥವಾ ನೀರಾವರಿ ಭೂಮಿ:-

(i) ಯಾರ ಹೆಸರಿನಲ್ಲಿ ಹೊಂದಲಾಗಿದೆ.
(ಸ್ವಂತ ಹೆಸರಿನಲ್ಲಿ ಇಲ್ಲದಿದ್ದರೆ, ಯಾರ ಹೆಸರಿನಲ್ಲಿ ಹೊಂದಲಾಗಿದೆ ತಿಳಿಸಿ ಮತ್ತು ಸರ್ಕಾರಿ ನೌಕರನೊಂದಿಗೆ ಆತನ ಅಥವಾ ಆಕೆಯ ಸಂಬಂಧ)

(ii) ಇರುವ ಸ್ಥಳ
(ಜಿಲ್ಲೆ, ತಾಲೂಕು ಹಾಗೂ ಗ್ರಾಮ ಅಥವಾ ಪಟ್ಟಣ)

(iii) ಸರ್ವೇ ನಂಬರ್

(iv) ವಿಸ್ತೀರ್ಣ

(v) ಆದಾಯ

(vi) ಸಂದಾಯ ಮಾಡಿದ ಬೆಲೆ

(vii) ಅಂದಾಜು ಮೌಲ್ಯ

(viii) ಸ್ವಂತದ್ದಾಗಿದ್ದರೆ, ಅದನ್ನು ಹೇಗೆ ಆರ್ಜಿಸಲಾಗಿದೆ
(ಖರೀದಿ, ದಾನ ಅಥವಾ ಪಿತ್ರಾರ್ಜಿತ)

ಅಥವಾ

ಗುತ್ತಿಗೆ ಅಥವಾ ಅಡಮಾನದ ಮೇಲೆ ಹೊಂದಿದ್ದರೆ, ಗುತ್ತಿಗೆ ಅಥವಾ ಅಡಮಾನದ ವಿವರಗಳು

(ಸಿ) ಒಣ ಅಥವಾ ಖುಷ್ಕಿ ಜಮೀನು:

(i) ಯಾರ ಹೆಸರಿನಲ್ಲಿ ಹೊಂದಲಾಗಿದೆ.
(ಸ್ವಂತ ಹೆಸರಿನಲ್ಲಿ ಇಲ್ಲದಿದ್ದರೆ, ಯಾರ ಹೆಸರಿನಲ್ಲಿ ಹೊಂದಲಾಗಿದೆ ತಿಳಿಸಿ ಹಾಗೂ ಸರ್ಕಾರಿ ನೌಕರನೊಂದಿಗೆ ಆತನ ಅಥವಾ ಆಕೆಯ ಸಂಬಂಧ)

(ii) ಇರುವ ಸ್ಥಳ
(ಜಿಲ್ಲೆ, ತಾಲೂಕು ಹಾಗೂ ಗ್ರಾಮ ಅಥವಾ ಪಟ್ಟಣ)

(iii) ಸರ್ವೇ ನಂಬರ್

(iv) ವಿಸ್ತೀರ್ಣ

(v) ಆದಾಯ

(vi) ಸಂದಾಯ ಮಾಡಿದ ಬೆಲೆ

(vii) ಅಂದಾಜು ಮೌಲ್ಯ

(viii) ಸ್ವಂತದ್ದಾದರೆ, ಅದನ್ನು ಹೇಗೆ ಆರ್ಜಿಸಲಾಗಿದೆ (ಖರೀದಿ, ದಾನ ಅಥವಾ ಪಿತ್ರಾರ್ಜಿತ)

ಅಥವಾ

ಗುತ್ತಿಗೆ ಅಥವಾ ಅಡಮಾನದ ಮೇಲೆ ಹೊಂದಿದ್ದರೆ ಗುತ್ತಿಗೆ ಅಥವಾ ಅಡಮಾನದ ವಿವರಗಳು

(ಡಿ) ಮನೆ ಸ್ವತ್ತು ಮತ್ತು ಕಟ್ಟಡ:-

(i) ಯಾರ ಹೆಸರಿನಲ್ಲಿ ಹೊಂದಲಾಗಿದೆ.

(ಸ್ವಂತ ಹೆಸರಿನಲ್ಲಿ ಇಲ್ಲದಿದ್ದರೆ, ಯಾರ ಹೆಸರಿನಲ್ಲಿ ಹೊಂದಲಾಗಿದೆ ತಿಳಿಸಿ ಹಾಗೂ ಸರ್ಕಾರಿ ನೌಕರನೊಂದಿಗೆ ಆತನ ಅಥವಾ ಆಕೆಯ ಸಂಬಂಧ)

(ii) ಇರುವ ಸ್ಥಳ

(ಜಿಲ್ಲೆ, ತಾಲೂಕು ಹಾಗೂ ಗ್ರಾಮ ಅಥವಾ ಪಟ್ಟಣ)

(iii) ಸರ್ವೇ ನಂಬರ್

(iv) ವಿಸ್ತೀರ್ಣ

(v) ಆದಾಯ

(vi) ಸಂದಾಯ ಮಾಡಿದ ಬೆಲೆ

(vii) ಅಂದಾಜು ಮೌಲ್ಯ

(viii) ಸ್ವಂತದ್ದಾಗಿದ್ದರೆ, ಅದನ್ನು ಹೇಗೆ ಆರ್ಜಿಸಲಾಗಿದೆ (ಖರೀದಿ, ದಾನ ಅಥವಾ ಪಿತ್ರಾರ್ಜಿತ)

ಅಥವಾ

ಗುತ್ತಿಗೆ ಅಥವಾ ಅಡಮಾನದ ಮೇಲೆ ಹೊಂದಿದ್ದರೆ, ಗುತ್ತಿಗೆ ಅಥವಾ ಅಡಮಾನದ ವಿವರಗಳು

(2) ಷೇರುಗಳು, ಡಿಬೆಂಚರುಗಳು, ಭದ್ರತಾ ಪತ್ರಗಳು ಹಾಗೂ ಬ್ಯಾಂಕು ಠೇವಣಿಗಳು:

ಷೇರುಗಳು, ಡಿಬೆಂಚರುಗಳು, ಭದ್ರತಾ ಪತ್ರಗಳು, ನಗದು ಹಾಗೂ ಬ್ಯಾಂಕ್ ಠೇವಣಿಗಳನ್ನು (ಪ್ರತ್ಯೇಕವಾಗಿ ಕೊಡಬೇಕು)

(i) ಯಾರ ಹೆಸರಿನಲ್ಲಿ ಹೊಂದಲಾಗಿದೆ ಅಥವಾ ಮಾಡಲಾಗಿದೆ:-

(ಸ್ವಂತ ಹೆಸರಿನಲ್ಲಿ ಇಲ್ಲದಿದ್ದರೆ, ಯಾರ ಹೆಸರಿನಲ್ಲಿ ಅದನ್ನು ಹೊಂದಲಾಗಿದೆ ತಿಳಿಸಿ ಅಥವಾ ಮಾಡಲಾಗಿದೆ ತಿಳಿಸಿ ಮತ್ತು ಸರ್ಕಾರಿ ನೌಕರನೊಂದಿಗೆ ಆತನ ಅಥವಾ ಆಕೆಯ ಸಂಬಂಧ)

(ii) ಮೌಲ್ಯ

(iii) ಬ್ಯಾಂಕು ಅಥವಾ ಕಂಪನಿಯ ಹೆಸರು

(iv) ಹೇಗೆ ಆರ್ಜಿಸಲಾಗಿದೆ

(v) ಆದಾಯ

(3) (2)ನೇ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಲಾದವುಗಳನ್ನು ಹೊರತುಪಡಿಸಿದ ಚರ ಸ್ವತ್ತುಗಳು:-

(ಎ) ವರ್ಣನೆ ಅಥವಾ ವಿಧ

(23ನೇ ನಿಯಮದ ವಿವರಣೆಯನ್ನು ನೋಡಿ)

(ಬಿ) ಹೇಗೆ ಆರ್ಜಿಸಲಾಗಿದೆ

(ಸಿ) ಅಂದಾಜು ಮೌಲ್ಯ

(4) (ಎ) ವಿಮಾ ಪಾಲಿಸಿಗಳು

(i) ಪಾಲಿಸಿ ಸಂಖ್ಯೆ ಹಾಗೂ ಪಾಲಿಸಿಯ ದಿನಾಂಕ

(ii) ವಿಮಾ ಕಂಪನಿಯ ಹೆಸರು

(iii) ವಿಮೆ ಮಾಡಲಾದ ಮೊತ್ತ ಹಾಗೂ ಅವಧಿ ಪೂರ್ಣಗೊಳ್ಳುವ ದಿನಾಂಕ

(iv) ವಾರ್ಷಿಕ ಕಂತಿನ ಮೊತ್ತ

(**ಸೂಚನೆ:-** ಸರ್ಕಾರಿ ನೌಕರನು ಕುಟುಂಬದ ಸದಸ್ಯರ ಪಾಲಿಸಿಗಳ ಕಂತನ್ನು ಸಂದಾಯ ಮಾಡುತ್ತಿದ್ದರೆ ಅವುಗಳ ವಿವರಗಳನ್ನು ಸಹ ಸೇರಿಸತಕ್ಕದ್ದು).

(ಬಿ) ಭವಿಷ್ಯ ನಿಧಿ

(i) ಭವಿಷ್ಯ ನಿಧಿಯ ಬಗೆ - ಪಿಪಿಎಫ್/ ಜಿಪಿಎಫ್, ಸಿಪಿಎಫ್‌ನ ಖಾತೆ ಸಂಖ್ಯೆ

(ii) ಲೆಕ್ಕಪರಿಶೋಧನಾಧಿಕಾರಿಯು. ಲೆಕ್ಕಾಧಿಕಾರಿಯು. ಕೊನೆಯದಾಗಿ ವರದಿ ಮಾಡಲಾದಂತೆ ಮುಕ್ತಾಯದ ಶಿಲ್ಕು, ಅಂಥ ಶಿಲ್ಕಿನ ದಿನಾಂಕದೊಂದಿಗೆ;

(iii) ತರುವಾಯ ಸಲ್ಲಿಸಿದ ವಂತಿಗೆಗಳು;

(iv) ಒಟ್ಟು.

(ಸೂಚನೆ:- ಸರ್ಕಾರಿ ನೌಕರನು ಆ ಕುಟುಂಬದ ಸದಸ್ಯರ ಹೆಸರುಗಳಲ್ಲಿ ವಂತಿಗೆಗಳನ್ನು ಸಂದಾಯ ಮಾಡುತ್ತಿದ್ದರೆ, ಪಿಪಿಎಫ್‌ಗೆ ಸಲ್ಲಿಸಿದ ವಂತಿಗೆಗಳ ವಿವರಗಳನ್ನು ಸಹ ಸೇರಿಸತಕ್ಕದ್ದು.)

ಹೊಣೆಗಾರಿಕೆಗಳು

(1) ಋಣಗಳು:

(ಎ) ಸಾಲ ಕೊಟ್ಟವನ ಹೆಸರು ಮತ್ತು ವಿಳಾಸ

(ಬಿ) ಮೊತ್ತ

(ಸಿ) ಸಾಲ ಪಡೆದ ದಿನಾಂಕ

(2) ಇತರೆ ಹೊಣೆಗಾರಿಕೆಗಳು:-

(ಎ) ಸಾಲ ಕೊಟ್ಟವನ ಹೆಸರು ಮತ್ತು ವಿಳಾಸ

(ಬಿ) ಮೊತ್ತ

(ಸಿ) ಹೊಣೆಗಾರಿಕೆಯ ಸ್ವರೂಪ

(ಡಿ) ದಿನಾಂಕ

--------- ಎಂಬ ನಾನು ಮೇಲ್ಕಂಡ ಪ್ಯಾರಾಗಳಲ್ಲಿ ಹೇಳಿದ ಮಾಹಿತಿಯು ನಿಜವಾದುದೆಂದು ಹಾಗೂ ಸರಿಯಾದುದು ಎಂದು ಹಾಗೂ ಮೇಲ್ಕಂಡ ಪ್ಯಾರಾಗಳಲ್ಲಿ ಏನನ್ನು ತಿಳಿಸಿದ್ದೇನೆಯೋ ಅದನ್ನು ಹೊರತುಪಡಿಸಿ, ಇತರ ಯಾವುದೇ ಆಸ್ತಿಗಳನ್ನು ಅಥವಾ ಹೊಣೆಗಾರಿಕೆಗಳನ್ನು ನನ್ನ ಹೆಸರಿನಲ್ಲಾಗಲೀ ಅಥವಾ ಇತರ ಯಾರೇ ವ್ಯಕ್ತಿಯ ಹೆಸರಿನಲ್ಲಾಗಲೀ ಒಡೆತನ ಹೊಂದಿರುವುದಿಲ್ಲವೆಂದು ಅಥವಾ ಹೊಂದಿರುವುದಿಲ್ಲವೆಂದು ಅಥವಾ ಅವು ಒಳಪಟ್ಟಿಲ್ಲವೆಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಘೋಷಿಸುತ್ತೇನೆ.

ಸ್ಥಳ: ಸಹಿ

ದಿನಾಂಕ: ಪದನಾಮ

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ

ಬೆಂಗಳೂರು, ದಿನಾಂಕ 4ನೇ ಏಪ್ರಿಲ್ 1968

ಜಿ.ಎಸ್.ಆರ್. 126.- ಮೈಸೂರು ರಾಜ್ಯಪಾಲರು, ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಹಾಗೂ ಈ ಬಗ್ಗೆ ಅವರನ್ನು ಶಕ್ತಗೊಳಿಸುವ ಇತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು ಮೈಸೂರು ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 1968 ಎಂದು ಕರೆಯತಕ್ಕದ್ದು.

(2) ಅವು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **7ನೇ ನಿಯಮವನ್ನು ಬಿಟ್ಟುಬಿಡುವುದು.**- ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 7ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

[ಸಂ.ಜಿಎಡಿ 43 ಎಸ್‌ಎಸ್ ಆರ್ 67]

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಬ್ಲ್ಯೂ ಎ ಸ್ಮಿತ್

ಅಧೀನ ಕಾರ್ಯದರ್ಶಿ.

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ

ಬೆಂಗಳೂರು, ದಿನಾಂಕ 19ನೇ ಆಗಸ್ಟ್ 1968

ಜಿ.ಎಸ್.ಆರ್.304.– ಮೈಸೂರಿನ ರಾಜ್ಯಪಾಲರು, ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಹಾಗೂ ಈ ಬಗ್ಗೆ ಅವರನ್ನು ಶಕ್ತಗೊಳಿಸುವ ಇತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:–

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಮೈಸೂರು ಸಿವಿಲ್ ಸೇವಾ (ನಡತೆ) (ಎರಡನೇ ತಿದ್ದುಪಡಿ) ನಿಯಮಗಳು, 1968 ಎಂದು ಕರೆಯತಕ್ಕದ್ದು.

(2) ಅವು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **9ನೇ ನಿಯಮದ ತಿದ್ದುಪಡಿ.–** ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 9ನೇ ನಿಯಮದಲ್ಲಿ, ಪರಂತುಕವನ್ನು ಒಳಗೊಂಡಂತೆ (ii)ನೇ ಖಂಡದ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ii) ಯಾರೇ ಸರ್ಕಾರಿ ನೌಕರನು, ಸರ್ಕಾರದ ಅಥವಾ ನಿಯಮಿಸಿದ ಪ್ರಾಧಿಕಾರದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಅಥವಾ ತನ್ನ ಕರ್ತವ್ಯಗಳ ಪ್ರಾಮಾಣಿಕ ನಿರ್ವಹಣೆಯ ಸಂದರ್ಭದಲ್ಲಿ ಹೊರತು,–

(ಎ) ಪುಸ್ತಕವನ್ನು ತಾನೇ ಅಥವಾ ಪ್ರಕಾಶಕರ ಮೂಲಕ ಪ್ರಕಟಿಸತಕ್ಕದ್ದಲ್ಲ ಅಥವಾ ಪುಸ್ತಕಕ್ಕೆ ಅಥವಾ ಲೇಖನಗಳ ಸಂಕಲನಕ್ಕೆ ಲೇಖನವನ್ನು ಬರೆದುಕೊಡತಕ್ಕದ್ದಲ್ಲ; ಅಥವಾ

(ಬಿ) ಆಕಾಶವಾಣಿ ಪ್ರಸಾರದಲ್ಲಿ ಭಾಗವಹಿಸತಕ್ಕದ್ದಲ್ಲ ಅಥವಾ ಯಾವುದೇ ವೃತ್ತ ಪತ್ರಿಕೆಗೆ ಅಥವಾ ನಿಯತಕಾಲಿಕೆಗೆ ತನ್ನ ಹೆಸರಿನಲ್ಲಾಗಲೀ ಅಥವಾ ಅನಾಮಧೇಯವಾಗಿಯಾಗಲಿ ಅಥವಾ ಗುಪ್ತನಾಮದಿಂದಾಗಲೀ ಅಥವಾ ಬೇರೊಬ್ಬ ವ್ಯಕ್ತಿಯ ಹೆಸರಿನಲ್ಲಾಗಲಿ ಲೇಖನವನ್ನು ಬರೆಯತಕ್ಕದ್ದಲ್ಲ ಅಥವಾ ಪತ್ರವನ್ನು ಬರೆಯತಕ್ಕದ್ದಲ್ಲ:

ಪರಂತು,–

(i) ಅಂಥ ಪ್ರಕಟಣೆಯು ಪ್ರಕಾಶಕರ ಮೂಲಕ ಆಗಿದ್ದರೆ ಮತ್ತು ಅದು ಸಂಪೂರ್ಣವಾಗಿ ಸಾಹಿತ್ಯಿಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದಾಗಿದ್ದರೆ; ಅಥವಾ

(ii) ಅಂಥ ಲೇಖನವು, ಅಥವಾ ಪ್ರಸಾರವು ಅಥವಾ ಬರವಣಿಗೆಯು ಸಂಪೂರ್ಣವಾಗಿ ಸಾಹಿತ್ಯಿಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ್ದಾಗಿದ್ದರೆ

– ಅಂಥ ಯಾವುದೇ ಅನುಮತಿಯು ಅವಶ್ಯವಿರತಕ್ಕದ್ದಲ್ಲ."

[ಸಂ.ಜಿಎಡಿ 34 ಎಸ್‌ಎಸ್‌ಆರ್ 68]

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಬ್ಲ್ಯೂ ಎ ಸ್ಮಿತ್

ಅಧೀನ ಕಾರ್ಯದರ್ಶಿ.

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ

ಬೆಂಗಳೂರು, ದಿನಾಂಕ 9ನೇ ಡಿಸೆಂಬರ್ 1971

ಜಿ.ಎಸ್.ಆರ್. 408.– ಮೈಸೂರು ರಾಜ್ಯಪಾಲರು, ಭಾರತ ರಾಷ್ಟ್ರಪತಿಯವರ ಆದೇಶ ಜಿಎಸ್‌ಆರ್ 458 ದಿನಾಂಕ 27ನೇ ಮಾರ್ಚ್ 1971ರೊಂದಿಗೆ ಓದಲಾದಂತೆ ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:–

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಮೈಸೂರು ಸಿವಿಲ್ ಸೇವಾ (ನಡತೆ) (ಮೊದಲನೇ ತಿದ್ದುಪಡಿ) ನಿಯಮಗಳು, 1971 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. 23ನೇ ನಿಯಮಕ್ಕೆ ತಿದ್ದುಪಡಿ.– ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 23ನೇ ನಿಯಮದ (3)ನೇ ಉಪನಿಯಮದ ತರುವಾಯ, ಈ ಮುಂದಿನ ಉಪ-ನಿಯಮವನ್ನು ಸೇರಿಸತಕ್ಕದ್ದು, ಎಂದರೆ:-

"(3ಎ) ಪ್ರತಿಯೊಬ್ಬ ಸರ್ಕಾರಿ ನೌಕರನು, ತನ್ನ ಸಂಬಳ ಮತ್ತು ಭತ್ಯೆಗಳು, ವಿಮೆ ಅಥವಾ ಭವಿಷ್ಯನಿಧಿಯನ್ನು ಹೊರತುಪಡಿಸಿ ಇತರ ಮೂಲಗಳಿಂದ ತಾನು ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಸ್ವೀಕರಿಸಿದ ನಗದಿನ ಸಂಬಂಧದಲ್ಲಿನ ಪ್ರತಿಯೊಂದು ವ್ಯವಹಾರವನ್ನು, ಯಾವುದೇ ವರ್ಗ–I ಅಥವಾ ವರ್ಗ–II ರ ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನ ಸಂಬಂಧದಲ್ಲಿ ಅಂಥ ನಗದು 1000 ರೂಪಾಯಿಗಳನ್ನು ಮೀರಿದ್ದರೆ ಅಥವಾ ಯಾವುದೇ ವರ್ಗ– III ಅಥವಾ ವರ್ಗ– IV ರ ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 500 ರೂಪಾಯಿಗಳನ್ನು ಮೀರಿದರೆ ನಿಯಮಿಸಿದ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು."

[ಸಂ.ಜಿಎಡಿ 14 ಎಸ್‌ಆರ್‌ಸಿ 67]

ಭಾರತ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಚ್.ಪಿ. ಧರಣೇಂದ್ರನಾಥ್,

ಸರ್ಕಾರದ ಅಧೀನ ಕಾರ್ಯದರ್ಶಿ

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು)

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ

ಬೆಂಗಳೂರು, ದಿನಾಂಕ 26ನೇ ಮೇ 1972

ಜಿ.ಎಸ್.ಆರ್.328.– ಮೈಸೂರಿನ ರಾಜ್ಯಪಾಲರು, ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:–

1. ಹೆಸರು ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಮೈಸೂರು ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 1972 ಎಂದು ಕರೆಯತಕ್ಕದ್ದು.

(2) ಅವು, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ *ಜಾರಿಗೆ ಬರತಕ್ಕದ್ದು.

2. 1ನೇ ನಿಯಮಕ್ಕೆ ತಿದ್ದುಪಡಿ.– ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 1ನೇ ನಿಯಮದ (3)ನೇ ಉಪನಿಯಮದ ಪರಂತುಕದ ತರುವಾಯ ಈ ಮುಂದಿನ ಹೆಚ್ಚಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತೂ ಪರಂತು, ನಿಯಮ 9, 14, 16 ಮತ್ತು 23 ಇವುಗಳು ಪೂರ್ಣಕಾಲಿಕ ಉದ್ಯೋಗದಲ್ಲಿರದ ಸರ್ಕಾರಿ ನೌಕರನಿಗೆ ಅನ್ವಯವಾಗತಕ್ಕದ್ದಲ್ಲ".

ಮೈಸೂರು ರಾಜ್ಯಪಾಲರು

[ಸಂ.ಜಿಎಡಿ 4 ಎಸ್‌ಆರ್‌ಸಿ 72]

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಚ್.ಪಿ. ಧರಣೇಂದ್ರನಾಥ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

---

* ಕರ್ನಾಟಕ ರಾಜ್ಯಪತ್ರ ದಿನಾಂಕ 19ನೇ ಅಕ್ಟೋಬರ್ 1972 ಭಾಗ IV 2ಸಿ (i) ರಲ್ಲಿ ಪ್ರಕಟಿಸಲಾಗಿದೆ.

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ

ಬೆಂಗಳೂರು, ದಿನಾಂಕ 9ನೇ ಅಕ್ಟೋಬರ್ 1973

ಜಿ.ಎಸ್.ಆರ್.259.– ಮೈಸೂರು ರಾಜ್ಯಪಾಲರು, ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಮೈಸೂರು ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 1973 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ * ಜಾರಿಗೆ ಬರತಕ್ಕದ್ದು.

2. **10ನೇ ನಿಯಮಕ್ಕೆ ತಿದ್ದುಪಡಿ.–** ಮೈಸೂರು ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 10ನೇ ನಿಯಮದ (1)ನೇ ಖಂಡದ ಪರಂತುಕದ ಬದಲಾಗಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಈ ಖಂಡದಲ್ಲಿ ಒಳಗೊಂಡಿರುವುದು ಯಾವುದೂ, ಸರ್ಕಾರಿ ನೌಕರನು, ಸರ್ಕಾರಿ ನೌಕರರ ಕಾರ್ಮಿಕ ಸಂಘದ ಅಥವಾ ಸಂಘದ ಪದಾಧಿಕಾರಿಯಾಗಿ ಅಂಥ ಸರ್ಕಾರಿ ನೌಕರರ ಸೇವಾ ಸ್ಥಿತಿಗತಿಗಳನ್ನು ರಕ್ಷಿಸುವ ಅಥವಾ ಅವುಗಳಲ್ಲಿ ಸುಧಾರಣೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಗಳಿಗಾಗಿ ವ್ಯಕ್ತಪಡಿಸಿದ ಪ್ರಾಮಾಣಿಕ ಅಭಿಪ್ರಾಯಗಳಿಗೆ ಅನ್ವಯಿಸತಕ್ಕದ್ದಲ್ಲ; ಅಥವಾ".

ಮೈಸೂರು ರಾಜ್ಯಪಾಲರು

(ಸಂ .ಜಿಎಡಿ 6 ಎಸ್ಆರ್‌ಸಿ 73)

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎಂ. ವಾಸುದೇವನ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

---

* ಕರ್ನಾಟಕ ರಾಜ್ಯಪತ್ರ ದಿನಾಂಕ 19ನೇ ಅಕ್ಟೋಬರ್ 1972 ಭಾಗ IV 2ಸಿ (i) ರಲ್ಲಿ ಪ್ರಕಟಿಸಲಾಗಿದೆ.

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ

ಬೆಂಗಳೂರು, ದಿನಾಂಕ 9ನೇ ನವೆಂಬರ್ 1973

ಜಿ.ಎಸ್.ಆರ್. 304.– ಕರ್ನಾಟಕ ರಾಜ್ಯಪಾಲರು, ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ಎರಡನೇ ತಿದ್ದುಪಡಿ) ನಿಯಮಗಳು, 1973 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ * ಜಾರಿಗೆ ಬರತಕ್ಕದ್ದು.

2. **23ನೇ ನಿಯಮಕ್ಕೆ ತಿದ್ದುಪಡಿ.–** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 23ನೇ ನಿಯಮದ ವಿವರಣೆಯ (1)ನೇ ಖಂಡದ (ಎ) ಬಾಬಿನಲ್ಲಿ, "ಸರ್ಕಾರದಿಂದ ಪಡೆದ ಯಾವ ವಿಮಾ ಪಾಲಿಸಿಗಳ ವಾರ್ಷಿಕ ಕಂತು "1000 ರೂಗಳನ್ನು ಅಥವಾ ಒಟ್ಟು ವಾರ್ಷಿಕ ಉಪಲಬ್ಧಿಗಳ ಆರನೇ ಒಂದು ಭಾಗವನ್ನು ಮೀರುವುದೋ ಆ ವಿಮಾ ಪಾಲಿಸಿಗಳು ಇವೆರಡರಲ್ಲಿ ಯಾವುದು ಕಡಿಮೆಯೋ ಅದು" ಎಂಬ ಪದಗಳಿಗೆ, ಅಕ್ಷರಗಳಿಗೆ ಹಾಗೂ ಸಂಖ್ಯೆಗಳ ಬದಲಾಗಿ "ವಿಮಾ ಪಾಲಿಸಿಗಳು, ಭವಿಷ್ಯ ನಿಧಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರು

(ಸಂ. ಜಿಎಡಿ 5 ಎಸ್ಆರ್‌ಸಿ 73)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎಂ. ವಾಸುದೇವನ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

---

* ಕರ್ನಾಟಕ ರಾಜ್ಯಪತ್ರ ದಿನಾಂಕ 6ನೇ ಡಿಸೆಂಬರ್ 1973 ಭಾಗ IV 2 (i) ರಲ್ಲಿ ಪ್ರಕಟವಾಗಿದೆ.

ಕರ್ನಾಟಕ ಸರ್ಕಾರ

ಮುಖ್ಯ ಸಚಿವಾಲಯ

ಸಾಮಾನ್ಯ ಆಡಳಿತ ಇಲಾಖೆ

ರಾಜ್ಯ ಸಿವಿಲ್ ಸೇವೆಗಳ ಕೇಡರ್‌ನಲ್ಲಿರುವ ಅಧಿಕಾರಿಗಳ ವಾರ್ಷಿಕ ಆಸ್ತಿ ವಿವರಣ ಪಟ್ಟಿ - ವಿಮಾ ಪಾಲಿಸಿಗಳ ಹಾಗೂ ಭವಿಷ್ಯನಿಧಿಯ ವಿವರಗಳನ್ನು ಒದಗಿಸುವುದು

ಅಧಿಕೃತ ಜ್ಞಾಪನ ಪತ್ರ

ಓ.ಎಂ. ಸಂಖ್ಯೆ ಜಿಎಡಿ 5 ಎಸ್‌ಆರ್‌ಸಿ 73, ಬೆಂಗಳೂರು, ದಿನಾಂಕ 27ನೇ ನವೆಂಬರ್ 1973

ಅಧಿಕೃತ ಜ್ಞಾಪನ ಪತ್ರ ಸಂ. ಜಿಎಡಿ 9 ಎಸ್‌ಎಸ್‌ಆರ್ 67, ದಿನಾಂಕ 18ನೇ ಡಿಸೆಂಬರ್ 1967, ಇದಕ್ಕೆ ಲಗತ್ತಿಸಲಾದ ನಮೂನೆಯಲ್ಲಿ, ಅಂಕಣ 5(3)ರ ತರುವಾಯ, ಈ ಮುಂದಿನ ಅಂಕಣಗಳನ್ನು ಸೇರಿಸತಕ್ಕದ್ದು, ಎಂದರೆ:-

"(4)(ಎ) **ವಿಮಾ ಪಾಲಿಸಿಗಳು.-**

(i) ಪಾಲಿಸಿ ಸಂಖ್ಯೆ ಹಾಗೂ ಪಾಲಿಸಿ ದಿನಾಂಕ

(ii) ವಿಮಾ ಕಂಪನಿಯ ಹೆಸರು

(iii) ವಿಮೆ ಮಾಡಿಸಿದ ಮೊತ್ತ ಹಾಗೂ ವಾಯಿದೆ ಪೂರ್ಣವಾಗುವ ದಿನಾಂಕ

(iv) ವಾರ್ಷಿಕ ವಿಮಾ ಕಂತಿನ ಮೊತ್ತ

(**ವಿಶೇಷ ಸೂಚನೆ:** ಸರ್ಕಾರಿ ನೌಕರನು ತನ್ನ ಕುಟುಂಬದ ಸದಸ್ಯರ ಪಾಲಿಸಿಗಳ ವಿಮಾ ಕಂತುಗಳನ್ನು ಸಂದಾಯ ಮಾಡುತ್ತಿದ್ದರೆ, ಅವುಗಳ ವಿವರಗಳನ್ನು ಸಹ ಸೇರಿಸತಕ್ಕದ್ದು).

(ಬಿ) ಭವಿಷ್ಯ ನಿಧಿ:

(i) ಭವಿಷ್ಯನಿಧಿಯ ಬಗೆ ಪಿಪಿಎಫ್/ ಜಿಪಿಎಫ್/ ಸಿಪಿಎಫ್ ನ ಖಾತೆಯ ಸಂಖ್ಯೆ;

(ii) ಲೆಕ್ಕ ಪರಿಶೋಧನಾಧಿಕಾರಿಯು/ ಲೆಕ್ಕಾಧಿಕಾರಿಯು ಕೊನೆಯಲ್ಲಿ ವರದಿ ಮಾಡಿದಂತೆ ಮುಕ್ತಾಯ ಶಿಲ್ಕು, ಆ ಶಿಲ್ಕಿನ ದಿನಾಂಕದೊಂದಿಗೆ;

(iii) ತರುವಾಯ ನೀಡಿದ ವಂತಿಗೆಗಳು;

(iv) ಒಟ್ಟು.

(**ವಿಶೇಷ ಸೂಚನೆ:** ಸರ್ಕಾರಿ ನೌಕರನು ತನ್ನ ಕುಟುಂಬದ ಸದಸ್ಯರ ಹೆಸರುಗಳಲ್ಲಿ ಪಿಪಿಎಫ್‌ಗೆ ವಂತಿಗೆಗಳನ್ನು ಸಂದಾಯ ಮಾಡುತ್ತಿದ್ದರೆ, ಆ ವಂತಿಗೆಗಳ ವಿವರಗಳನ್ನೂ ಕೂಡ ಸೇರಿಸತಕ್ಕದ್ದು.)

ಟಿ.ಎಂ. ವಾಸುದೇವನ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

ಕೇಂದ್ರ ಅಧಿನಿಯಮಗಳ ಮತ್ತು ರಾಜ್ಯ ಅಧಿನಿಯಮಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ಸಂವಿಧಾನದ ಮೇರೆಗೆ ರಾಜ್ಯಪಾಲರು ರಚಿಸಿದ ನಿಯಮಗಳು

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ

ಬೆಂಗಳೂರು, ದಿನಾಂಕ 31ನೇ ಡಿಸೆಂಬರ್ 1973

ಜಿ.ಎಸ್.ಆರ್. 26.- ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ನಾಲ್ಕನೇ ತಿದ್ದುಪಡಿ) ನಿಯಮಗಳು, 1973 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **6ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 16ನೇ ನಿಯಮದ (1)ನೇ ಉಪನಿಯಮದ ಪರಂತುಕಕ್ಕೆ ಹಾಗೂ ವಿವರಣೆಗೆ ಬದಲಾಗಿ ಈ ಮುಂದಿನ ಪರಂತುಕಗಳನ್ನು ಹಾಗೂ ವಿವರಣೆಗಳನ್ನು ಸೇರಿಸತಕ್ಕದ್ದು, ಎಂದರೆ:-

ಪರಂತು, ಸರ್ಕಾರಿ ನೌಕರನು, ಅಂಥ ಮಂಜೂರಾತಿಯನ್ನು ಪಡೆಯದೆ ಸಾಮಾಜಿಕ ಅಥವಾ ಧರ್ಮಾರ್ಥ ಸ್ವರೂಪದ ಗೌರವಾರ್ಥ ಕೆಲಸಗಳನ್ನು ಅಥವಾ ಸಾಹಿತ್ಯಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ ಸಾಂದರ್ಭಿಕ ಕೆಲಸಗಳನ್ನು ಈ ಮುಂದಿನ ಷರತ್ತುಗಳಿಗೊಳಪಟ್ಟು ಕೈಗೊಳ್ಳಬಹುದು, ಎಂದರೆ:-

(i) ಅಂಥ ಯಾವುದೇ ಕೆಲಸಗಳನ್ನು ತಾನು ಕೈಗೊಂಡ ಒಂದು ತಿಂಗಳೊಳಗಾಗಿ ಅವನು ಸರ್ಕಾರಕ್ಕೆ ಅದರ ಸಂಪೂರ್ಣ ವಿವರಗಳನ್ನು ವರದಿ ಮಾಡತಕ್ಕದ್ದು;

(ii) ಅದರಿಂದ ಆತನ ಅಧಿಕೃತ ಕರ್ತವ್ಯಗಳಿಗೆ ತೊಂದರೆಯಾಗಬಾರದು; ಮತ್ತು

(iii) ಯಾವುದೇ ಅಂಥ ಕೆಲಸವನ್ನು ಮುಂದುವರೆಸಬಾರದೆಂದು ಸರ್ಕಾರವು ನಿರ್ದೇಶಿಸಿದರೆ ಅವನು ಅಂಥ ಕೆಲಸವನ್ನು ನಿಲ್ಲಿಸತಕ್ಕದ್ದು:

ಮತ್ತೂ ಪರಂತು, ಯಾವುದೇ ಅಂಥ ಕೆಲಸವನ್ನು ಕೈಗೊಳ್ಳುವುದರಲ್ಲಿ ಚುನಾವಣೆ ಮೂಲಕ ತುಂಬಬೇಕಾದ ಪದವನ್ನು ಧಾರಣ ಮಾಡುವುದನ್ನು ಒಳಗೊಂಡಿದ್ದರೆ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಅಂತಹ ಯಾವುದೇ ಪದದ ಚುನಾವಣೆಗೆ ಸ್ಪರ್ಧಿಸತಕ್ಕದ್ದಲ್ಲ.

ವಿವರಣೆ I:- ಎರಡನೇ ಪರಂತುಕದಲ್ಲಿ ಉಲ್ಲೇಖಿಸಲಾದ ಚುನಾವಣೆ ಮೂಲಕ ತುಂಬಬೇಕಾದ ಪದಕ್ಕಾಗಿ ಸ್ಪರ್ಧಿಸುವ ಅಭ್ಯರ್ಥಿಯ ಅಥವಾ ಅಭ್ಯರ್ಥಿಗಳ ಪರವಾಗಿ ಸರ್ಕಾರಿ ನೌಕರನು ಪ್ರಚಾರ ಮಾಡುವುದನ್ನು ಈ ಉಪ ನಿಯಮದ ಉಲ್ಲಂಘನೆಯೆಂದು ಭಾವಿಸತಕ್ಕದ್ದು.

ವಿವರಣೆ *II*:- ಸರ್ಕಾರಿ ನೌಕರನು ತನ್ನ ಹೆಂಡತಿಯ ಅಥವಾ ತನ್ನ ಕುಟುಂಬದ ಯಾರೇ ಇತರ ಸದಸ್ಯನ ಒಡೆತನದಲ್ಲಿರುವ ಅಥವಾ ನಿರ್ವಹಣೆಯಲ್ಲಿರುವ ವ್ಯವಹಾರವನ್ನು ಅಥವಾ ವಿಮಾ ಏಜೆನ್ಸಿಯನ್ನು ಅಥವಾ ಕಮೀಷನ್ ಏಜೆನ್ಸಿಯನ್ನು ಬೆಂಬಲಿಸಿ ಪ್ರಚಾರ ಮಾಡುವುದನ್ನು ಈ ಉಪ ನಿಯಮದ ಉಲ್ಲಂಘನೆಯೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರು

(ಸಂ. ಜಿಎಡಿ 13 ಎಸ್‌ಆರ್‌ಸಿ 73)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎಂ. ವಾಸುದೇವನ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ

ಬೆಂಗಳೂರು, ದಿನಾಂಕ 18ನೇ ಅಕ್ಟೋಬರ್ 1974

ಜಿ.ಎಸ್.ಆರ್. 308.- ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 1974 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **21ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 21ನೇ ನಿಯಮದ (4)ನೇ ಉಪನಿಯಮದ (i) ನೇ ಖಾಜಿನ ಪರಂತುಕದಲ್ಲಿ "**ಒಂದು ಸಣ್ಣ ಮೊತ್ತವನ್ನು**" ಎಂಬ ಪದಗಳ ಬದಲಾಗಿ "**ತನ್ನ ಎಟ್ಟು ತಿಂಗಳ ಉಪಲಬ್ಧಿಗಳನ್ನು ಮೀರದಷ್ಟು ಮೊತ್ತವನ್ನು**" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರು

(ಸಂ. ಜಿಎಡಿ 5 ಎಸ್‌ಆರ್‌ಸಿ 73)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಪಿ. ಜೋಶಿ,

ಸರ್ಕಾರದ ಉಪ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ ಸಂ. ಜಿಎಡಿ 1 ಎಸ್‌ಆರ್‌ಸಿ 75

ಬೆಂಗಳೂರು, ದಿನಾಂಕ 6ನೇ ಅಕ್ಟೋಬರ್ 1975

ಜಿ.ಎಸ್.ಆರ್. 296.– ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:–

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 1975 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಂದು[1] ಅವು ಜಾರಿಗೆ ಬರತಕ್ಕದ್ದು.

1. ಕರ್ನಾಟಕ ರಾಜ್ಯಪತ್ರ ದಿನಾಂಕ 23ನೇ ಅಕ್ಟೋಬರ್ 1975 ಭಾಗ V 2ಸಿ (i) ರಲ್ಲಿ ಪ್ರಕಟಿಸಲಾಗಿದೆ.

2. **16ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) 16ನೇ ನಿಯಮದ (1)ನೇ ಉಪನಿಯಮದಲ್ಲಿ "ಯಾವುದೇ ಇತರ ಉದ್ಯೋಗವನ್ನು ಕೈಗೊಳ್ಳತಕ್ಕದ್ದಲ್ಲ" ಎಂಬ ಪದಗಳಿಗೆ ಬದಲಾಗಿ "ಯಾವುದೇ ಇತರ ಉದ್ಯೋಗಕ್ಕಾಗಿ ಮಾತುಕತೆ ನಡೆಸತಕ್ಕದ್ದಲ್ಲ ಅಥವಾ ಯಾವುದೇ ಇತರ ಉದ್ಯೋಗವನ್ನು ಕೈಗೊಳ್ಳತಕ್ಕದ್ದಲ್ಲ" ಎಂಬ ಪದಗಳನ್ನು ಸೇರಿಸತಕ್ಕದ್ದು.

3. **23ನೇ ನಿಯಮದ ತಿದ್ದುಪಡಿ.–** ಸದರಿ ನಿಯಮಗಳ 23ನೇ ನಿಯಮದ ವಿವರಣೆಯಲ್ಲಿ,– (1) ಖಂಡ (1) ಮತ್ತು (2)ಕ್ಕೆ ಅನುಕ್ರಮವಾಗಿ (2) ಮತ್ತು (3) ಎಂದು ಮರುಸಂಖ್ಯೆ ನೀಡತಕ್ಕದ್ದು ಹಾಗೂ ಹಾಗೆ ಮರುಸಂಖ್ಯೆ ನೀಡಲಾದ (2)ನೇ ಖಂಡಕ್ಕೆ ಮುಂಚೆ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

(i) "ಗುತ್ತಿಗೆ" ಎಂದರೆ ಸರ್ಕಾರಿ ನೌಕರನೊಂದಿಗೆ ಯಾವುದೇ ಅಧಿಕೃತ ವ್ಯವಹಾರಗಳನ್ನು ಹೊಂದಿರುವ ವ್ಯಕ್ತಿಯಿಂದ ಪಡೆದುಕೊಳ್ಳಲಾದುದನ್ನು ಅಥವಾ ಆ ವ್ಯಕ್ತಿಗೆ ನೀಡಲಾಗಿರುವುದನ್ನು ಹೊರತುಪಡಿಸಿ, ವರ್ಷದಿಂದ ವರ್ಷಕ್ಕೆ ಅಥವಾ ಒಂದು ವರ್ಷ ಮೀರಿದ ಯಾವುದೇ ಅವಧಿಗೆ ಅಥವಾ ವಾರ್ಷಿಕ ಬಾಡಿಗೆ ಬರುವಂತಿರುವ ಸ್ಥಿರಾಸ್ತಿಯ ಗುತ್ತಿಗೆ ಎಂದು ಅರ್ಥ.

(2) ಹಾಗೆ ಮರುಸಂಖ್ಯೆ ನೀಡಲಾದ ಖಂಡ (2) ರಲ್ಲಿ "ರೇಡಿಯೋಗ್ರಾಂ" ಎಂಬ ಪದಗಳ ತರುವಾಯ "ದೂರದರ್ಶನ ಸೆಟ್ಟುಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

4. **ಹೊಸ ನಿಯಮ 23ಎ ಸೇರ್ಪಡೆ.–** ಸದರಿ ನಿಯಮಗಳ 23ನೇ ನಿಯಮದ ತರುವಾಯ ಈ ಮುಂದಿನ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

23ಎ. ಭಾರತದ ಹೊರಗೆ ಇರುವ ಸ್ಥಿರ ಸ್ವತ್ತನ್ನು ಆರ್ಜಿಸುವುದಕ್ಕೆ ಮತ್ತು ವಿಲೇ ಮಾಡುವುದಕ್ಕೆ ಮತ್ತು ವಿದೇಶಿಯರು, ಮುಂತಾದವರೊಂದಿಗೆ ವ್ಯವಹಾರಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ನಿರ್ಬಂಧಗಳು.– 23ನೇ ನಿಯಮದ (2)ನೇ ಉಪನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ಸರ್ಕಾರಿ ನೌಕರನು ನಿಯಮಿಸಿದ ಪ್ರಾಧಿಕಾರದ ಪೂರ್ವ ಮಂಜೂರಾತಿ ಪಡೆದ ಹೊರತು,–

(ಎ) ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯರ ಹೆಸರಿನಲ್ಲಿ ಭಾರತದ ಹೊರಗೆ ಇರುವ ಯಾವುದೇ ಸ್ಥಿರ ಸ್ವತ್ತನ್ನು ಖರೀದಿಯ, ಅಡಮಾನದ, ಗುತ್ತಿಗೆಯ, ದಾನದ ಮೂಲಕ ಅಥವಾ ಅನ್ಯಥಾ ಆರ್ಜಿಸತಕ್ಕದ್ದಲ್ಲ;

(ಬಿ) ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಿ, ತಾನು ಆರ್ಜಿಸಿದ ಅಥವಾ ಧಾರಣ ಮಾಡಿದ, ಭಾರತದ ಹೊರಗಿರುವ ಯಾವುದೇ ಸ್ಥಿರಸ್ವತ್ತನ್ನು ಮಾರಾಟದ, ಅಡಮಾನದ, ದಾನದ ಮೂಲಕ ಅಥವಾ ಅನ್ಯಥಾ ವಿಲೇ ಮಾಡತಕ್ಕದ್ದಲ್ಲ ಅಥವಾ ಅವುಗಳ ಸಂಬಂಧದಲ್ಲಿ ಯಾವುದೇ ಗುತ್ತಿಗೆಯನ್ನು ನೀಡತಕ್ಕದ್ದಲ್ಲ;

(ಸಿ) (i) ಯಾವುದೇ ಸ್ಥಿರ ಸ್ವತ್ತನ್ನು ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಿ ಖರೀದಿಯ, ಅಡಮಾನದ, ದಾನದ ಮೂಲಕ ಅಥವಾ ಅನ್ಯಥಾ ಆರ್ಜಿಸಲು;

(ii) ತನ್ನ ಸ್ವಂತ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಿ ಆರ್ಜಿಸಿದ ಅಥವಾ ಧಾರಣ ಮಾಡಿದ ಯಾವುದೇ ಸ್ಥಿರಸ್ವತ್ತನ್ನು, ಮಾರಾಟದ, ಅಡಮಾನದ, ದಾನದ ಮೂಲಕ ಅಥವಾ ಅನ್ಯಥಾ ವಿಲೇ ಮಾಡಲು ಅಥವಾ ಅವುಗಳ ಸಂಬಂಧದಲ್ಲಿ ಯಾವುದೇ ಗುತ್ತಿಗೆಯನ್ನು ನೀಡಲು

– ಯಾರೇ ವಿದೇಶೀಯನೊಂದಿಗೆ, ವಿದೇಶೀ ಸರ್ಕಾರದೊಂದಿಗೆ, ವಿದೇಶೀ ಸಂಘಟನೆಯೊಂದಿಗೆ ಅಥವಾ ಕಾರ್ಸ್ಥಿಯೊಂದಿಗೆ ಯಾವುದೇ ವ್ಯವಹಾರವನ್ನು ನಡೆಸತಕ್ಕದ್ದಲ್ಲ.

ವಿವರಣೆ:– ಈ ನಿಯಮದಲ್ಲಿ 'ನಿಯಮಿಸಿದ ಪ್ರಾಧಿಕಾರ' ಎಂಬುದು 23ನೇ ನಿಯಮದಲ್ಲಿರುವಂಥ ಅರ್ಥವನ್ನೇ ಹೊಂದಿರುತ್ತದೆ.

5. **29ನೇ ನಿಯಮದ ತಿದ್ದುಪಡಿ.–** ಸದರಿ ನಿಯಮಗಳ 29ನೇ ನಿಯಮದಲ್ಲಿ,–

(i) (ಬಿ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಬಿಬಿ) ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಮಾದಕ ಪೇಯವನ್ನು ಅಥವಾ ಮಾದಕ ವಸ್ತುವನ್ನು ಸೇವಿಸತಕ್ಕದ್ದಲ್ಲ".

(ii) ಕೊನೆಯಲ್ಲಿ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ:–

ವಿವರಣೆ:– "ಈ ನಿಯಮದ ಉದ್ದೇಶಕ್ಕಾಗಿ 'ಸಾರ್ವಜನಿಕ ಸ್ಥಳ' ಎಂದರೆ ಹಣ ಪಾವತಿ ಮಾಡಿ ಅಥವಾ ಅನ್ಯಥಾ ಸಾರ್ವಜನಿಕರಿಗೆ ವಾಹನವೂ ಸೇರಿದಂತೆ ಪ್ರವೇಶಾವಕಾಶವಿರುವ ಅಥವಾ ಪ್ರವೇಶವನ್ನು ಅನುಮತಿಸಲಾಗಿರುವ ಯಾವುದೇ ಸಾರ್ವಜನಿಕ ಸ್ಥಳ ಅಥವಾ ಆವರಣಗಳು ಎಂದು ಅರ್ಥ".

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಪಿ. ಜೋಶಿ

ಸರ್ಕಾರದ ಉಪ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

ಕರ್ನಾಟಕ ಸರ್ಕಾರ

ಮುಖ್ಯ ಸಚಿವಾಲಯ

ಸಾಮಾನ್ಯ ಆಡಳಿತ ಇಲಾಖೆ

ಅಧಿಕೃತ ಜ್ಞಾಪನ

ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966 – ಭೂಮಿ, ಸಾಮಗ್ರಿ ಮುಂತಾದವುಗಳ ಖರೀದಿ ಕುರಿತಂತೆ ನಿಯಮಿಸಿದ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ವರದಿಯ ನಮೂನೆ – ನಿಯಮ 23.

ಉಲ್ಲೇಖ: ಅಧಿಕೃತ ಜ್ಞಾಪನ ಸಂ. ಜಿಎಡಿ 7 ಎಸ್‌ಆರ್‌ಸಿ 73, ದಿನಾಂಕ 3ನೇ ಅಕ್ಟೋಬರ್ 1973

ಕಚೇರಿ ಜ್ಞಾಪನ ಸಂಖ್ಯೆ ಜಿಎಡಿ 20 ಎಸ್‌ಆರ್‌ಸಿ 75, ಬೆಂಗಳೂರು,

ದಿನಾಂಕ 22ನೇ ಅಕ್ಟೋಬರ್ 1975

ಮನೆಯನ್ನು ಕಟ್ಟುವುದಕ್ಕಾಗಿ ಅಥವಾ ಅದಕ್ಕೆ ಸೇರ್ಪಡೆ ಮಾಡುವುದಕ್ಕಾಗಿ ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆಯುವುದಕ್ಕಾಗಿ ಅದಕ್ಕೆ ಸಲ್ಲಿಸಬೇಕಾದ ವರದಿಯ/ ಅರ್ಜಿಯ ನಮೂನೆಯನ್ನು ಮತ್ತು ಮನೆಯ ನಿರ್ಮಾಣ ಪೂರ್ಣಗೊಂಡ ತರುವಾಯ ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ, ಕಚೇರಿ ಜ್ಞಾಪನ ಸಂಖ್ಯೆ ಜಿಎಡಿ 7 ಎಸ್‌ಆರ್‌ಸಿ 73, ದಿನಾಂಕ 3ನೇ ಅಕ್ಟೋಬರ್ 1973 ರಲ್ಲಿ ನಿಯಮಿಸಿದ ವರದಿಯ ನಮೂನೆಯನ್ನು ಪರಿಶೀಲಿಸಲಾಗಿದೆ. "ಹಣಕಾಸಿನ ಮೂಲ" ವನ್ನು ಪೂರ್ಣ ವಿವರಗಳೊಂದಿಗೆ ಸೂಚಿಸುವ ಸಲುವಾಗಿ ಒಂದು ಅಂಕಣವನ್ನು ಈ ನಮೂನೆಗಳಲ್ಲಿ ಸೇರಿಸಲು ನಿರ್ಧರಿಸಲಾಗಿದೆ. ತದನುಸಾರವಾಗಿ ಮೇಲೆ ತಿಳಿಸಲಾದ ಕಚೇರಿ ಜ್ಞಾಪನದಲ್ಲಿ ನಿಯಮಿಸಲಾದ ಈಗಿರುವ ನಮೂನೆಗಳಿಗೆ ಬದಲಾಗಿ, ಈ ಕಚೇರಿ ಜ್ಞಾಪನಕ್ಕೆ ಲಗತ್ತಿಸಲಾದ ಪರಿಷ್ಕೃತ ನಮೂನೆ I ಹಾಗೂ ನಮೂನೆ IIನ್ನು ಇನ್ನು ಮುಂದೆ ಬಳಸತಕ್ಕದ್ದು.

ಎನ್. ಪಿ. ಜೋಷಿ

ಸರ್ಕಾರದ ಉಪ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

ನಮೂನೆ I

ಮನೆ ನಿರ್ಮಾಣಕ್ಕಾಗಿ ಅಥವಾ ಅದಕ್ಕೆ ಸೇರ್ಪಡೆ ಮಾಡುವುದಕ್ಕಾಗಿ ನಿಯಮಿಸಿದ ಪ್ರಾಧಿಕಾರಕ್ಕೆ ಅನುಮತಿಗಾಗಿ ಸಲ್ಲಿಸುವ ವರದಿ/ ಅರ್ಜಿಯ ನಮೂನೆ

ಮಾನ್ಯರೇ,

ನಾನು ಮನೆಯನ್ನು ನಿರ್ಮಿಸಲು/ ಅದಕ್ಕೆ ಸೇರ್ಪಡೆ ಮಾಡಲು ಉದ್ದೇಶಿಸಿದ್ದೇನೆಂದು ತಮಗೆ ತಿಳಿಸುತ್ತಿದ್ದೇನೆ. ಮನೆಯ ನಿರ್ಮಾಣಕ್ಕಾಗಿ/ ಮನೆಗೆ ಸೇರ್ಪಡೆ ಮಾಡುವುದಕ್ಕಾಗಿ ನನಗೆ ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

---------- ರಲ್ಲಿ ಮನೆಯ ನಿರ್ಮಾಣಕ್ಕೆ/ ಅದಕ್ಕೆ ಸೇರ್ಪಡೆ ಮಾಡುವುದಕ್ಕಾಗಿ/ ವಿಸ್ತರಣೆಗಾಗಿ ಭೂಮಿ ಮತ್ತು ಸಾಮಗ್ರಿಗಳ ಅಂದಾಜು ವೆಚ್ಚವನ್ನು ಈ ಮುಂದೆ ಕೊಡಲಾಗಿದೆ:-

ಭೂಮಿ

1. ಸ್ಥಳ (ಸರ್ವೆ ನಂ. ಗ್ರಾಮ, ಜಿಲ್ಲೆ, ರಾಜ್ಯ)
2. ವಿಸ್ತೀರ್ಣ
3. ವೆಚ್ಚ

ಕಟ್ಟಡ ನಿರ್ಮಾಣ ಸಾಮಗ್ರಿಗಳು ಇತ್ಯಾದಿ

1. ಇಟ್ಟಿಗೆಗಳು (ದರ/ಪರಿಮಾಣ/ವೆಚ್ಚ)
2. ಸಿಮೆಂಟ್ (ದರ/ಪರಿಮಾಣ/ವೆಚ್ಚ)
3. ಕಬ್ಬಿಣ ಮತ್ತು ಉಕ್ಕು (ದರ/ ಪರಿಮಾಣ/ ವೆಚ್ಚ)
4. ಮರಮುಟ್ಟು (ದರ/ಪರಿಮಾಣ/ವೆಚ್ಚ)
5. ನೈರ್ಮಲ್ಯ ಉಪಕರಣಗಳ ಜೋಡಣೆಗಳು (ವೆಚ್ಚ)
6. ವಿದ್ಯುತ್ ಸಂಪರ್ಕ ಜೋಡಣೆಗಳು (ವೆಚ್ಚ)
7. ಯಾವುದೇ ಇತರ ವಿಶೇಷ ಜೋಡಣೆಗಳು (ವೆಚ್ಚ)
8. ಕಾರ್ಮಿಕ ವೆಚ್ಚಗಳು
9. ಇತರ ವೆಚ್ಚಗಳು, ಯಾವುವಾದರೂ ಇದ್ದರೆ.

ಭೂಮಿಯ ಮತ್ತು ಕಟ್ಟಡದ ನಿರ್ಮಾಣದ ಒಟ್ಟು ವೆಚ್ಚ

2. ಕಟ್ಟಡ ನಿರ್ಮಾಣವನ್ನು ಸ್ವತಃ ನಾನೇ ಮೇಲ್ವಿಚಾರಣೆ ಮಾಡುತ್ತೇನೆ/ನಿರ್ಮಾಣ ಕಾರ್ಯವನ್ನು --------- ರವರು ಮಾಡುತ್ತಾರೆ. ನಾನು ಕಂಟ್ರಾಕ್ಟರ್‌ನೊಂದಿಗೆ ಯಾವುದೇ ಅಧಿಕೃತ ವ್ಯವಹಾರಗಳನ್ನು ಇಟ್ಟುಕೊಂಡಿಲ್ಲ ಅಥವಾ ಇಟ್ಟುಕೊಂಡಿರಲಿಲ್ಲ.

ನಾನು ಕಂಟ್ರಾಕ್ಟರ್‌ನೊಂದಿಗೆ ಅಧಿಕೃತ ವ್ಯವಹಾರವನ್ನು ಇಟ್ಟುಕೊಂಡಿದ್ದೇನೆ/ ಇಟ್ಟುಕೊಂಡಿದ್ದೆ. ಆ ವ್ಯವಹಾರಗಳ ಸ್ವರೂಪ ಈ ಕೆಳಕಂಡಂತಿದೆ.

ಹಿಂದೆ ಆತನೊಂದಿಗೆ ಇಟ್ಟುಕೊಂಡಿದ್ದ ಅಧಿಕೃತ ವ್ಯವಹಾರಗಳು ಈ ಮುಂದಿನಂತೆ ಇವೆ/ ಇದ್ದವು

3. ಉದ್ದೇಶಿತ ಕಟ್ಟಡ ನಿರ್ಮಾಣ ವೆಚ್ಚವನ್ನು ಈ ಮುಂದಿನಂತೆ ಭರಿಸಲಾಗುವುದು:-

ಮೊಬಲಗು

i) ಸ್ವಂತ ಉಳಿತಾಯ
ii) ಸಾಲಗಳು/ ಮುಂಗಡಗಳು, ಪೂರ್ಣ ವಿವರಗಳೊಂದಿಗೆ
iii) ಇತರ ಮೂಲಗಳು, ವಿವರಗಳೊಂದಿಗೆ

ತಮ್ಮ ವಿಶ್ವಾಸಿ

(   )

ಅನ್ವಯವಾಗದ್ದನ್ನು ಹೊಡೆದು ಹಾಕಿ.
ಕಂಟ್ರಾಕ್ಟರನ ಹೆಸರು ಮತ್ತು ವ್ಯವಹಾರದ ಸ್ಥಳವನ್ನು ನಮೂದಿಸಿ.

ನಮೂನೆ - II

ಮನೆಯ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ನಿಯಮಿಸಿದ ಪ್ರಾಧಿಕಾರಿಗೆ ಸಲ್ಲಿಸಬೇಕಾದ ವರದಿಯ ನಮೂನೆ.

ಮಾನ್ಯರೇ,

ನನ್ನ ಪತ್ರ ಸಂಖ್ಯೆ ----------- ದಿನಾಂಕ ---------- ರಲ್ಲಿ, ನಾನು ಮನೆಯನ್ನು ನಿರ್ಮಿಸಲು ಉದ್ದೇಶಿಸಿದ್ದೇನೆಂದು ತಿಳಿಸಿದ್ದೆ/ ಆದೇಶ ಸಂಖ್ಯೆ -------- ದಿನಾಂಕ ------ ರಲ್ಲಿ ಮನೆಯನ್ನು ನಿರ್ಮಿಸುವುದಕ್ಕಾಗಿ ನನಗೆ ಅನುಮತಿಯನ್ನು ನೀಡಲಾಗಿತ್ತು. ಮನೆ ನಿರ್ಮಾಣ ಪೂರ್ಣಗೊಂಡಿದೆ ಮತ್ತು ನಾನು ------------- ರವರು ಯುಕ್ತವಾಗಿ ಪ್ರಮಾಣೀಕರಿಸಿದ ಮೌಲ್ಯನಿರ್ಧರಣೆ ವರದಿಯನ್ನು ಲಗತ್ತಿಸಿದ್ದೇನೆ.

2. ಲಗತ್ತಿಸಲಾದ ಮೌಲ್ಯನಿರ್ಧರಣಾ ವರದಿಯಲ್ಲಿ ಸೂಚಿಸಲಾದ ನಿರ್ಮಾಣ ವೆಚ್ಚಕ್ಕೆ ಈ ಮುಂದಿನಂತೆ ಹಣಕಾಸು ವ್ಯವಸ್ಥೆ ಮಾಡಲಾಗಿದೆ:-

ಮೊಬಲಗು

i) ಸ್ವಂತ ಉಳಿತಾಯ

ii) ಸಾಲಗಳು/ ಮುಂಗಡಗಳು, ಪೂರ್ಣ ವಿವರಗಳೊಂದಿಗೆ

*(ಸಿವಿಲ್ ಇಂಜನಿಯರ್‌ಗಳ ಸಂಸ್ಥೆ ಅಥವಾ ಖ್ಯಾತ ಸಿವಿಲ್ ಇಂಜನಿಯರ್).

ಸೂಚನೆ:- ಮೇಲೆ ಕೊಟ್ಟಿರುವ ಅಂಕಿಗಳ ಮತ್ತು ನಮೂನೆ 1ರಲ್ಲಿ ಕೊಟ್ಟಿರುವ ಅಂಕಿಗಳ ನಡುವೆ ಯಾವುವೇ ವ್ಯತ್ಯಾಸಗಳಿದ್ದರೆ, ಅವುಗಳ ಬಗ್ಗೆ ಸೂಕ್ತವಾದ ವಿವರಣೆ ನೀಡಬೇಕು.

ದಿನಾಂಕ: ---------- ತಮ್ಮ ವಿಶ್ವಾಸಿ,

( )

ಮೌಲ್ಯನಿರ್ಧರಣಾ ವರದಿ

ಶ್ರೀ/ ಶ್ರೀಮತಿ/--------------- # ರವರು ನಿರ್ಮಿಸಿರುವ -----------@ ಮನೆಯ ಮೌಲ್ಯವನ್ನು ನಾನು/ ನಾವು ನಿರ್ಧರಣೆ ಮಾಡಿದ್ದೇನೆ/ವೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ/ ಪ್ರಮಾಣೀಕರಿಸುತ್ತೇವೆ. ಈ ಮುಂದಿನ ಶೀರ್ಷಿಕೆಗಳಲ್ಲಿ ಮನೆಯ ವೆಚ್ಚವನ್ನು ಅಂದಾಜು ಮಾಡಿ ನಾನು/ ನಾವು ಅದರ ಮೌಲ್ಯನಿರ್ಧರಣೆಯನ್ನು ಕೆಳಗೆ ನೀಡಿದ್ದೇನೆ/ ವೆ.

ಶೀರ್ಷಿಕೆ	ವೆಚ್ಚ ರೂ. ಪೈ
1. ಇಟ್ಟಿಗೆಗಳು	
2. ಸಿಮೆಂಟ್	
3. ಕಬ್ಬಿಣ ಮತ್ತು ಉಕ್ಕು	
4. ಮರಮುಟ್ಟು	
5. ನೈರ್ಮಲ್ಯ ಉಪಕರಣಗಳ ಜೋಡಣೆಗಳು	
6. ವಿದ್ಯುತ್ ಸಂಪರ್ಕ ಜೋಡಣೆಗಳು	
7. ಇತರ ಎಲ್ಲಾ ವಿಶೇಷ ಜೋಡಣೆಗಳು	
8. ಕಾರ್ಮಿಕ ವೆಚ್ಚಗಳು	
9. ಎಲ್ಲ ಇತರ ವೆಚ್ಚಗಳು	
ಕಟ್ಟಡದ ಒಟ್ಟು ವೆಚ್ಚ	

ದಿನಾಂಕ -------------- (ಮೌಲ್ಯನಿರ್ಧರಣಾ ತಜ್ಞರ ಸಹಿ)

@ (ಇಲ್ಲಿ ಮನೆಯ ವಿವರಗಳನ್ನು ನಮೂದಿಸಿ)

(ಇಲ್ಲಿ ಸರ್ಕಾರಿ ನೌಕರನ ಹೆಸರು ಇತ್ಯಾದಿ ವಿವರಗಳನ್ನು ನಮೂದಿಸಿ)

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ ಸಂ. ಜಿಎಡಿ 4 ಎಸ್ಆರ್‌ಸಿ 75

ಬೆಂಗಳೂರು, ದಿನಾಂಕ 28ನೇ ಅಕ್ಟೋಬರ್ 1975

ಜಿ.ಎಸ್.ಆರ್. 319.– ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:–

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ಎರಡನೇ ತಿದ್ದುಪಡಿ) ನಿಯಮಗಳು, 1975 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳು ಪ್ರಕಟವಾದ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **27ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 27ನೇ ನಿಯಮದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಸರ್ಕಾರಿ ನೌಕರನಿಗೆ ಕೆಳಗಿನ ಅಧಿಕಾರಿಗಳ ಗಮನ ಸೆಳೆಯಲು ಅಥವಾ ಅವರಿಂದ ಪರಿಹಾರ ಪಡೆಯಲು ಬಳಸಿದ ಎಲ್ಲ ಅವಕಾಶಗಳು ಮುಗಿದಾಗ ಅಥವಾ ಮೂರು ತಿಂಗಳ ಅವಧಿಯೊಳಗಾಗಿ ಅವನ ಮನವಿಗೆ ಉತ್ತರ ಬಾರದಿದ್ದರೆ ಅವನು ತನ್ನ ಮನವಿಯ ಒಂದು ಮುಂಗಡ ಪ್ರತಿಯನ್ನು ಸಂಬಂಧಪಟ್ಟ ಸಚಿವರಿಗೆ ಸಲ್ಲಿಸಬಹುದು".

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸೈಯ್ಯದ್ ಕರೀಮುಲ್ಲಾ ಖಾದ್ರಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

ಸಾಮಾನ್ಯ ಆಡಳಿತ ಸಚಿವಾಲಯ

ಅಧಿಸೂಚನೆ ಜಿಎಡಿ 12 ಎಸ್ಆರ್ ಸಿ 75

ಬೆಂಗಳೂರು, ದಿನಾಂಕ 1ನೇ ಡಿಸೆಂಬರ್ 1975

ಜಿ.ಎಸ್.ಆರ್.355.– ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:–

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ಮೂರನೇ ತಿದ್ದುಪಡಿ) ನಿಯಮಗಳು, 1975 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ* ಪ್ರಕಟವಾದ ದಿನಾಂಕದಂದು ಅವು ಜಾರಿಗೆ ಬರತಕ್ಕದ್ದು.

2. **23ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ನಿಯಮ 23ರ ವಿವರಣೆಯಲ್ಲಿ:–

(3) ನೇ ಖಂಡದ (ಎ) ಉಪಖಂಡದ (i), (ii), (iii) ಪ್ಯಾರಾಗಳಿಗೆ ಅನುಕ್ರಮವಾಗಿ (ii), (iii), (iv) ಎಂದು ಮರು ಸಂಖ್ಯೆ ನೀಡತಕ್ಕದ್ದು ಹಾಗೂ ಹಾಗೆ ಮರುಸಂಖ್ಯೆ ನೀಡಲಾದ (ii)ನೇ ಪ್ಯಾರಾಕ್ಕೆ ಮುಂಚೆ ಈ ಮುಂದಿನ ಪ್ಯಾರಾವನ್ನು ಸೇರಿಸತಕ್ಕದ್ದು, ಎಂದರೆ:–

(i) "ಕರ್ನಾಟಕ ನ್ಯಾಯಾಂಗ ಸೇವೆಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ".

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸೈಯ್ಯದ್ ಕರೀಮುಲ್ಲಾ ಖಾದ್ರಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಾಮಾನ್ಯ ಆಡಳಿತ ಇಲಾಖೆ (ಸೇವಾ ನಿಯಮಗಳು).

---

*ಕರ್ನಾಟಕ ರಾಜ್ಯಪತ್ರ ದಿನಾಂಕ 11ನೇ ಡಿಸೆಂಬರ್ 1975, ಭಾಗ IV 2 ಸಿ (i)ರಲ್ಲಿ ಪ್ರಕಟವಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ ಸಿಆಸುಇ 4 ಎಸ್‌ಆರ್‌ಸಿ 76

ಬೆಂಗಳೂರು, ದಿನಾಂಕ 2ನೇ ನವೆಂಬರ್ 1976

ಜಿ.ಎಸ್.ಆರ್.383.– ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:–

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ಯಮಗಳು, 1976 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಂದು ಅವು ಜಾರಿಗೆ ಬರತಕ್ಕದ್ದು.

ರ್ನಾಟಕ ರಾಜ್ಯಪತ್ರ ದಿನಾಂಕ 11ನೇ ಡಿಸೆಂಬರ್ 1975, ಭಾಗ IV 2 ಸಿ (i) ರಲ್ಲಿ ಪ್ರಕಟವಾಗಿದೆ.

2. **4ನೇ ನಿಯಮದ ತಿದ್ದುಪಡಿ.–** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) 4ನೇ ನಿಯಮದಲ್ಲಿ "**ಖಾಸಗಿ ಉದ್ಯಮದಲ್ಲಿ ಮತ್ತು ಉದ್ಯಮದಲ್ಲಿ**" ಎಂಬ ಪದಗಳು ಬಂದಿರುವ ಕಡೆಗಳಲ್ಲೆಲ್ಲಾ ಅವುಗಳಿಗೆ ಬದಲಾಗಿ "**ಕಂಪನಿಯಲ್ಲಿ ಅಥವಾ ಫರ್ಮ್‌ನಲ್ಲಿ**" ಎಂಬ ಪದಗಳನ್ನು ೇರಿಸತಕ್ಕದ್ದು.

3. **14ನೇ ನಿಯಮದ ತಿದ್ದುಪಡಿ.–** ಸದರಿ ನಿಯಮಗಳ 14ನೇ ನಿಯಮದಲ್ಲಿ,–

(1) ಉಪನಿಯಮ (1) ರಲ್ಲಿ "**ಅವನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು**" ಎಂಬ **ಪದಗಳಿಗೆ** ದಲಾಗಿ "**ಅವನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಇತರ ಯಾರೇ ವ್ಯಕ್ತಿಯು**" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) ಉಪನಿಯಮ (4) ರಲ್ಲಿ "**ಒಬ್ಬ ಸರ್ಕಾರಿ ನೌಕರನು ---------- ಸ್ವೀಕರಿಸತಕ್ಕದ್ದಲ್ಲ**" ಎಂಬ ಪದಗಳ ರುವಾಯ "**ಅಥವಾ ಅವನ ಕುಟುಂಬದ ಯಾರೇ ಸದಸ್ಯನು ಅಥವಾ ಅವನ ಪರವಾಗಿ ಕಾರ್ಯನಿರ್ವಹಿಸುವ ಯಾರೇ ತರ ವ್ಯಕ್ತಿಯು ಸ್ವೀಕರಿಸಲು ಅನುಮತಿಸತಕ್ಕದ್ದಲ್ಲ**" ಎಂಬ ಪದಗಳನ್ನು ಸೇರಿಸತಕ್ಕದ್ದು.

4. **ಹೊಸ 14ಎ ನಿಯಮದ ಸೇರ್ಪಡೆ.–** ಸದರಿ ನಿಯಮಗಳ 14ನೇ ನಿಯಮದ ತರುವಾಯ ಮುಂದಿನ ಯಮವನ್ನು ಸೇರಿಸತಕ್ಕದ್ದು, ಎಂದರೆ:–

"14ಎ. **ವಧು/ ವರದಕ್ಷಿಣೆ.–** ಯಾರೇ ಸರ್ಕಾರಿ ನೌಕರನು,–

(i) ವಧು/ವರದಕ್ಷಿಣೆಯನ್ನು ಕೊಡತಕ್ಕದ್ದಲ್ಲ ಅಥವಾ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಕೊಡಲು ಅಥವಾ ತೆಗೆದುಕೊಳ್ಳಲು ದುಷ್ಪ್ರೇರಿಸತಕ್ಕದ್ದಲ್ಲ; ಅಥವಾ

(ii) ವಧುವಿನ ಅಥವಾ ಸಂದರ್ಭಾನುಸಾರ ವರನ ತಂದೆ ತಾಯಿಯರನ್ನು ಅಥವಾ ಪೋಷಕರನ್ನು ವಧು/ ವರದಕ್ಷಿಣೆಯನ್ನು ಕೊಡುವಂತೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಒತ್ತಾಯಪಡಿಸತಕ್ಕದ್ದಲ್ಲ.

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ ವಧು/ವರದಕ್ಷಿಣೆಯು, ವಧು/ವರದಕ್ಷಿಣೆ ನಿಷೇಧ ಅಧಿನಿಯಮ, 961 (1961ರ ಕೇಂದ್ರ ಅಧಿನಿಯಮ 28) ರಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸೈಯ್ಯದ್ ಕರೀಮುಲ್ಲಾ ಖಾದ್ರಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು).

IVA -F5-B/B

ಕರ್ನಾಟಕ ಸರ್ಕಾರ

ಅಧಿಸೂಚನೆ

ಸಂ. ಡಿಪಿಎಆರ್ 21 ಎಸ್‌ಆರ್‌ಸಿ 76, ಬೆಂಗಳೂರು, ದಿನಾಂಕ 15ನೇ ಜನವರಿ 1977

ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 1977 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಂದು ಅವು ಜಾರಿಗೆ ಬರತಕ್ಕದ್ದು.

2. **ಹೊಸ ನಿಯಮದ ಸೇರ್ಪಡೆ.**- ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ನಿಯಮ 28ರ ತರುವಾಯ ಈ ಮುಂದಿನ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:-

"28ಎ. **ಸರ್ಕಾರಿ ನೌಕರರು ಚಿಕ್ಕ ಕುಟುಂಬವನ್ನು ಹೊಂದಿರುವುದು:**- ಪ್ರತಿಯೊಬ್ಬ ಸರ್ಕಾರಿ ನೌಕರನು ತನ್ನ ಮಕ್ಕಳ ಸಂಖ್ಯೆಯು ಮೂರನ್ನು ಮೀರದಂತೆ ನೋಡಿಕೊಳ್ಳತಕ್ಕದ್ದು:

ಪರಂತು, 1978ರ ಜನವರಿ 31 ರಂದು ಇದ್ದಂತೆ ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ಸರ್ಕಾರಿ ನೌಕರನಿಗೆ ಈ ನಿಯಮದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ:

ಮತ್ತೂ ಪರಂತು, ಹಿಂದಿನ ಪರಂತುಕದಲ್ಲಿ ಉಲ್ಲೇಖಿಸಲಾದ ಸರ್ಕಾರಿ ನೌಕರನು ತನ್ನ ಮಕ್ಕಳ ಸಂಖ್ಯೆಯು ಆ ದಿನಾಂಕದಂದು ಇದ್ದ ಸಂಖ್ಯೆಯನ್ನು ಮೀರದಂತೆ ನೋಡಿಕೊಳ್ಳತಕ್ಕದ್ದು."

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸೈಯ್ಯದ್ ಕರೀಮುಲ್ಲಾ ಖಾದ್ರಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,

(ಸೇವಾ ನಿಯಮಗಳು).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ ಸಂಖ್ಯೆ ಸಿಆಸುಇ 14 ಎಸ್‌ಆರ್‌ಸಿ 77

ಬೆಂಗಳೂರು, ದಿನಾಂಕ 8ನೇ ನವೆಂಬರ್ 1977

ಜಿ.ಎಸ್.ಆರ್.340.- ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ಎರಡನೇ ತಿದ್ದುಪಡಿ) ನಿಯಮಗಳು, 1977 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಂದು* ಅವು ಜಾರಿಗೆ ಬರತಕ್ಕದ್ದು.

2. **28ಎ ನಿಯಮವನ್ನು ಬಿಟ್ಟುಬಿಡುವುದು.**- ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 28ಎ ನಿಯಮವನ್ನು ಬಿಟ್ಟುಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಬಿ. ಬಜಂತ್ರಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

(ಸೇವಾ ನಿಯಮಗಳು).

* ಕರ್ನಾಟಕ ರಾಜ್ಯಪತ್ರ ದಿನಾಂಕ 24ನೇ ನವೆಂಬರ್ 1977 ಭಾಗ IV 2 ಸಿ (i) ರಲ್ಲಿ ಪ್ರಕಟವಾಗಿದೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ ಸಿಆಸುಇ 2 ಎಸ್‌ಆರ್‌ಸಿ 78

ಬೆಂಗಳೂರು, ದಿನಾಂಕ 28ನೇ ಸೆಪ್ಟೆಂಬರ್ 1978

ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತಾರೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 1978 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ* ಪ್ರಕಟವಾದ ದಿನಾಂಕದಂದು ಅವು ಜಾರಿಗೆ ಬರತಕ್ಕದ್ದು.

2. **21ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 21ನೇ ನಿಯಮದ (4)ನೇ ಉಪನಿಯಮದ (i)ನೇ ಖಂಡದಲ್ಲಿ "**ಯಾರೇ ಸರ್ಕಾರಿ ನೌಕರನು**" ಎಂಬ ಪದಗಳ ತರುವಾಯ "**ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಮತ್ತು**" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಬಿ. ಬಜಂತ್ರಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು).

---

* ದಿನಾಂಕ 1978ರ 12ನೇ ಅಕ್ಟೋಬರ್ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ ಸಂಖ್ಯೆ ಸಿಆಸುಇ 4 ಎಸ್‌ಆರ್‌ಸಿ 85

ಬೆಂಗಳೂರು, ದಿನಾಂಕ 30ನೇ ಡಿಸೆಂಬರ್ 1985

ಭಾರತ ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೂಲಕ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಅಶೋಕ್‌ನಾಥ್ ಬ್ಯಾನರ್ಜಿ, ಎಂಬ ನಾನು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತೇನೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 1985 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಂದು* ಅವು ಜಾರಿಗೆ ಬರತಕ್ಕದ್ದು.

* ಕರ್ನಾಟಕ ರಾಜ್ಯಪತ್ರ ದಿನಾಂಕ 27ನೇ ಮಾರ್ಚ್ 1986, ಭಾಗ IV 2 ಸಿ (i) ರಲ್ಲಿ ಪ್ರಕಟವಾಗಿದೆ.

2. **14ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) 14ನೇ ನಿಯಮದಲ್ಲಿ:-

"(1). (2)ನೇ ಉಪನಿಯಮದಲ್ಲಿ (i)ನೇ, (ii)ನೇ, (iii)ನೇ ಬಾಬುಗಳಿಗೆ ಬದಲಾಗಿ ಈ ಮುಂದಿನ ಬಾಬುಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು, ಎಂದರೆ:-

(i) ಯಾವುದೇ 'ಎ' ಅಥವಾ 'ಬಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 1000 ರೂಪಾಯಿಗಿಂತ;

(ii) ಯಾವುದೇ 'ಸಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 500 ರೂಪಾಯಿಗಿಂತ;

(iii) ಯಾವುದೇ 'ಡಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 250 ರೂಪಾಯಿಗಿಂತ.

(2) (3)ನೇ ಉಪನಿಯಮದಲ್ಲಿ (i)ನೇ, (ii)ನೇ ಮತ್ತು (iii)ನೇ ಬಾಬುಗಳಿಗೆ ಬದಲಾಗಿ ಈ ಮುಂದಿನ ಬಾಬುಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು.

"(i) ಯಾವುದೇ 'ಎ' ಅಥವಾ 'ಬಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 500 ರೂಪಾಯಿಗಿಂತ;

(ii) ಯಾವುದೇ` 'ಸಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 200 ರೂಪಾಯಿಗಿಂತ;

(iii) ಯಾವುದೇ 'ಡಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 100 ರೂಪಾಯಿಗಿಂತ."

(3) (4)ನೇ ಉಪನಿಯಮದಲ್ಲಿ (i)ನೇ, ಮತ್ತು (ii)ನೇ ಬಾಬುಗಳಿಗೆ ಬದಲಾಗಿ ಈ ಮುಂದಿನ ಬಾಬುಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು, ಎಂದರೆ:-

"(i) ಯಾವುದೇ 'ಎ' ಅಥವಾ 'ಬಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 150 ರೂಪಾಯಿಗಿಂತ; ಮತ್ತು

(ii) ಯಾವುದೇ 'ಸಿ' ಅಥವಾ 'ಡಿ' ಸಮೂಹದ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರನ ಸಂದರ್ಭದಲ್ಲಿ 50 ರೂಪಾಯಿಗಿಂತ".

3. **23ನೇ ನಿಯಮದ ತಿದ್ದುಪಡಿ**.- ಸದರಿ ನಿಯಮಗಳ 23ನೇ ನಿಯಮದಲ್ಲಿ,-

(i) "**1000 ರೂಪಾಯಿ**" ಎಂಬ ಅಕ್ಷರಗಳು ಹಾಗೂ ಅಂಕಿಗಳು, ಅವು ಬಂದಿರುವ ಕಡೆಗಳಲೆಲ್ಲಾ ಅವುಗಳಿಗೆ ಬದಲಾಗಿ "**ಎರಡು ಸಾವಿರ ರೂಪಾಯಿ**" ಎಂಬ ಪದಗಳನ್ನು ಹಾಗೂ "**500 ರೂಪಾಯಿ**" ಎಂಬ ಅಕ್ಷರ ಹಾಗೂ ಅಂಕಿಗಳು ಬಂದಿರುವ ಎರಡೂ ಕಡೆಗಳಲ್ಲಿ ಅವುಗಳಿಗೆ ಬದಲಾಗಿ "**1000 ರೂಪಾಯಿ**" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) "**ವರ್ಗ *I*** " **ವರ್ಗ *II*** " **ವರ್ಗ *III*** " ಹಾಗೂ " **ವರ್ಗ *IV*** " ಎಂಬ ಪದಗಳು ಹಾಗೂ ಅಂಕಿಗಳು, ಅವು ಬಂದಿರುವ ಕಡೆಗಳಲ್ಲೆಲ್ಲಾ ಅವುಗಳಿಗೆ ಬದಲಾಗಿ "ಸಮೂಹ ಎ" "ಸಮೂಹ ಬಿ" "ಸಮೂಹ ಸಿ" ಹಾಗೂ " ಸಮೂಹ ಡಿ" ಎಂಬ ಪದಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರು
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ.ಕೆ. ಸಂಗೋರಾಮ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ ಸಂ. ಸಿಆಸುಇ 11 ಎಸ್‌ಆರ್‌ಸಿ 92

ಬೆಂಗಳೂರು, ದಿನಾಂಕ 25/26ನೇ ಮಾರ್ಚ್ 1994

ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ಈ ಮುಂದಿನ ನಿಯಮಗಳ ಕರಡನ್ನು ಆದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 30 ದಿವಸಗಳೊಳಗೆ

ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ 1994ರ ಫೆಬ್ರವರಿ 10ರ ಕರ್ನಾಟಕ ರಾಜ್ಯಪತ್ರದ ವಿಭಾಗ 2ಸಿ (i) ರ ಭಾಗ IV ರಲ್ಲಿ, ಅಧಿಸೂಚನೆ ಸಂಖ್ಯೆ ಡಿಪಿಎಆರ್ 11 ಎಸ್‌ಆರ್‌ಸಿ 92, ದಿನಾಂಕ 11ನೇ ಫೆಬ್ರವರಿ 1994 ರಲ್ಲಿ, ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ ಸಂಖ್ಯೆ 1990ರ 14)ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಿರುವುದರಿಂದ;

ಆ ರಾಜ್ಯಪತ್ರವನ್ನು ದಿನಾಂಕ 1994 ಫೆಬ್ರವರಿ 11ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದಿಲ್ಲವಾದ್ದರಿಂದ;

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ 1990ರ 14)ರ 8ನೇ ಪ್ರಕರಣದೊಂದಿಗೆ ಓದಿಕೊಂಡ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 1994 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಅವು ಜಾರಿಗೆ ಬರತಕ್ಕದ್ದು.

2. **23ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ 23ನೇ ನಿಯಮದ (1)ನೇ ಉಪ ನಿಯಮದಲ್ಲಿ "**ಪ್ರತಿ ಹನ್ನೆರಡು ತಿಂಗಳ ಅಂತರದಲ್ಲಿ**" ಎಂಬ ಪದಗಳಿಗೆ ಮುಂಚೆ "**ಮಾರ್ಚ್ 31ಕ್ಕೆ ಅಂತ್ಯಗೊಳ್ಳುವ**" ಎಂಬ ಪದಗಳನ್ನು ಹಾಗೂ ಅಂಕಿಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಲ್. ಜಯರಾಂ,

ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರಭಾರ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

(ಸೇವಾ ನಿಯಮಗಳು).

ನಮೂನೆ – *I*

ಕರ್ನಾಟಕ ಸರ್ಕಾರ

20 ---------- ನೇ ಸಾಲಿಗೆ ಸಂಬಂಧಿಸಿದ ಸ್ಥಿರಾಸ್ತಿ ವಿವರಣಪಟ್ಟಿ

(31.3.------ ರಂದು ಇದ್ದ ಸ್ಥಿತಿ)

1.ಅಧಿಕಾರಿಯ ಹೆಸರು (ಪೂರ್ಣ ಹೆಸರು ಮತ್ತು ಅಧಿಕಾರಿಯು ಯಾವ ಸೇವೆಗೆ ಸೇರಿದವರಾಗಿದ್ದಾರೆ)
2.ಪ್ರಸ್ತುತ ಧಾರಣ ಮಾಡಿರುವ ಹುದ್ದೆ
3. ಪ್ರಸ್ತುತ ವೇತನ

ಆಸ್ತಿಯಿರುವ ಜಿಲ್ಲೆ, ಉಪ ವಿಭಾಗ, ತಾಲ್ಲೂಕು, ಗ್ರಾಮದ ಹೆಸರು	ಭೂಮಿ, ಆಸ್ತಿ/ ಮನೆ ಮತ್ತು ಇತರ ಕಟ್ಟಡದ ಹೆಸರು ಮತ್ತು ವಿವರಗಳು, ಪಾವತಿಸಿರುವ ಬೆಲೆ	ಈಗಿನ ಮೌಲ್ಯ (ಅಂದಾಜು)	ಸರ್ಕಾರಿ ನೌಕರನ ಹೆಸರಿನಲ್ಲಿಲ್ಲದಿದ್ದರೆ ಯಾರ ಹೆಸರಿನಲ್ಲಿದೆ ಮತ್ತು ಸರ್ಕಾರಿ ನೌಕರನೊಂದಿಗೆ ಅವರಿಗಿರುವ ಸಂಬಂಧ ತಿಳಿಸಿ	ಹೇಗೆ ಆರ್ಜಿಸಲಾಯಿತು, ಖರೀದಿಯ ಮೂಲಕವೇ, ಗುತ್ತಿಗೆಯ ಮೂಲಕವೇ, ಅಡಮಾನದ ಮೂಲಕವೇ, ಪಿತ್ರಾರ್ಜಿತವೇ, ದಾನದ ಮೂಲಕವೇ ಅಥವಾ ಬೇರೆ ರೀತಿಯಲ್ಲಿ ಆರ್ಜಿಸಿದ್ದೇ? ಆರ್ಜಿಸಿದ ದಿನಾಂಕ	ಆಸ್ತಿಯಿಂದ ಬಂದ ವಾರ್ಷಿಕ ಆದಾಯ	ಷರಾ
1	2	3	4	5	6	7

ಸಹಿ/–

ಹುದ್ದೆ

ನಮೂನೆ – *II*

20-------- ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಸಂಬಂಧಿಸಿದ ಚರಾಸ್ತಿ ವಿವರಣಪಟ್ಟಿ (31–3–20----- ರಂದು ಇದ್ದಂತೆ)

1.ಹೆಸರು

2.ಪದನಾಮ

3.ವೇತನ ಶ್ರೇಣಿ ಮತ್ತು ಈಗಿನ ವೇತನ

ಕ್ರಮ ಸಂಖ್ಯೆ	ಬ್ಯಾಂಕುಗಳು/ ಅಂಚೆ ಕಚೇರಿಯಲ್ಲಿ ಹೊಂದಿರುವ ಖಾತೆಗಳು/ ಸ್ಟಾಕುಗಳು/ಷೇರುಗಳು/ ಡಿಬೆಂಚರುಗಳೂ ಸೇರಿದಂತೆ ಚರಾಸ್ತಿಗಳ ವಿವರಗಳು	ಚರಾಸ್ತಿಯ ಮೌಲ್ಯ	ಖರೀದಿ/ ವಿಲೇವಾರಿಯ ದಿನಾಂಕ	ಅಂಕಣ ಸಂ. 2ರಲ್ಲಿ ಹೇಳಿರುವ ಚರಾಸ್ತಿಯನ್ನು ಖರೀದಿಸುವುದಕ್ಕೆ ಇದ್ದ ಆದಾಯದ ಮೂಲಗಳು	ಆಸ್ತಿಯನ್ನು ಆರ್ಜಿಸಿದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದ ದಿನಾಂಕ	ಷರಾ
1	2	3	4	5	6	7

ಸಹಿ/–

ಪದನಾಮ

ಭಾಗ – *I*

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ:– ಆಸ್ತಿ ಮತ್ತು ಋಣ ಪಟ್ಟಿಗಳ ನಮೂನೆಯನ್ನು ಬದಲಾಯಿಸುವ ಮತ್ತು ಆರ್ಥಿಕ ವರ್ಷವನ್ನು ಬದಲಾಯಿಸುವ ಬಗ್ಗೆ.

ಉಲ್ಲೇಖ:– ಇದೇ ಸಮ ಸಂಖ್ಯೆ ಅಧಿಸೂಚನೆ ದಿನಾಂಕ 25/26ನೇ ಮಾರ್ಚ್ 1994.

ಅಧಿಕೃತ ಜ್ಞಾಪನ

ಸಂಖ್ಯೆ ಸಿಆಸುಇ 11 ಸೇನಿಸಿ 92, ಬೆಂಗಳೂರು, ದಿನಾಂಕ 26ನೇ ಏಪ್ರಿಲ್ 1994

ಉಲ್ಲೇಖಿತ ಅಧಿಸೂಚನೆಯನ್ನು ಹೊರಡಿಸುವ ಮೊದಲು, ಕರ್ನಾಟಕ ನಾಗರಿಕ ಸೇವೆಗಳು (ನಡತೆ) ನಿಯಮಗಳು, 1966 ನಿಯಮ 23ರಲ್ಲಿ ರಾಜ್ಯ ಸರ್ಕಾರದ ಎಲ್ಲಾ ನೌಕರರು ತಮ್ಮ ಆಸ್ತಿ ಮತ್ತು ದಾಯಿತ್ವಗಳ ವಿವರಣೆಯನ್ನು ಪ್ರತಿ ವರ್ಷವೂ ಡಿಸೆಂಬರ್ 31 ಅಂತ್ಯಕ್ಕೆ ನಿಗದಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ತಿಳಿಸಿದೆ.

2. ಸದರಿ ನಿಯಮ 23ಕ್ಕೆ ಇದೇ ಸಮ ಸಂಖ್ಯೆಯ ದಿನಾಂಕ 26ನೇ ಮಾರ್ಚ್ 1994ರ ಅಧಿಸೂಚನೆಯಲ್ಲಿ, ಡಿಸೆಂಬರ್ 31ರ ಅಂತ್ಯಕ್ಕೆ ಬದಲಾಗಿ ಪ್ರತಿ ವರ್ಷವೂ ಮಾರ್ಚ್ 31ರ ಅಂತ್ಯಕ್ಕೆ ಸಲ್ಲಿಸಲು ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿಯು ದಿನಾಂಕ 28ನೇ ಮಾರ್ಚ್ 1994ರಿಂದ ಜಾರಿಗೆ ಬಂದಿದೆ.

3. ಈ ಹಿಂದೆ ಅಧಿಸೂಚನೆ ಸಂಖ್ಯೆ ಜಿಎಡಿ 20 ಎಸ್‌ಆರ್‌ಸಿ 75, ದಿನಾಂಕ 14ನೇ ಡಿಸೆಂಬರ್ 1975ರಲ್ಲಿ ನಿಗದಿಪಡಿಸಲಾಗಿದ್ದ ನಮೂನೆಯಲ್ಲಿ ಎಲ್ಲಾ ರಾಜ್ಯ ಸರ್ಕಾರಿ ನೌಕರರು ತಮ್ಮ ಆಸ್ತಿ ಮತ್ತು ದಾಯಿತ್ವಗಳನ್ನು ಸಲ್ಲಿಸಲಾಗುತ್ತಿದ್ದು, ಸದರಿ ನಮೂನೆಯನ್ನು ಸಹ ಮಾರ್ಪಡಿಸಿದೆ. ಇನ್ನು ಮುಂದೆ ಎಲ್ಲಾ ರಾಜ್ಯ ಸರ್ಕಾರಿ ನೌಕರರು ಮಾರ್ಪಡಿಸಲಾದ, ಈ ಅಧಿಕೃತ ಜ್ಞಾಪನಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರ ಆಸ್ತಿ ಮತ್ತು ದಾಯಿತ್ವಗಳ ವಿವರಣೆಯನ್ನು ಸಲ್ಲಿಸಬೇಕಾಗಿರುತ್ತದೆ.

4. ಎಲ್ಲಾ ಇಲಾಖಾ ಮುಖ್ಯಸ್ಥರು ಈ ಮೇಲೆ ಹೇಳಿದ ಹಿನ್ನೆಲೆಯಲ್ಲಿ ತಮ್ಮ ಅಧೀನದಲ್ಲಿರುವ ಸಿಬ್ಬಂದಿ ವರ್ಗದವರ ಗಮನಕ್ಕೆ ತರುವಂತೆಯು ಹಾಗೂ ಮಾರ್ಪಡಿಸಿರುವ ನಮೂನೆಯಲ್ಲಿ ವಿವರಗಳನ್ನು ಪಡೆಯುವಂತೆಯೂ ಸೂಚಿಸಿದೆ.

ರಿನ್‌ಸಾಂಗ

ಸರ್ಕಾರದ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ.

ಕರ್ನಾಟಕ ಸರ್ಕಾರ

ಅಧಿಸೂಚನೆ

ಸಂ. ಡಿಪಿಎಆರ್ 3 ಎಸ್‌ಆರ್‌ಸಿ 97, ಬೆಂಗಳೂರು, ದಿನಾಂಕ 11–11–1997

ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳ ಕರಡನ್ನು, ಕರ್ನಾಟಕ ಸಿವಿಲ್ ಸೇವಾ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ 1990ರ 14) ರ 3ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ, ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗೆ ಆಕ್ಷೇಪಣೆಗಳನ್ನು/ ಸಲಹೆಗಳನ್ನು ಆಹ್ವಾನಿಸಿ ಕರ್ನಾಟಕ ರಾಜ್ಯಪತ್ರದ ಭಾಗ IV ರ ಪ್ರಕರಣದ 2(ಸಿ) (i) ನಲ್ಲಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಆರ್‌ಸಿ 97, ದಿನಾಂಕ 21–7–1997ರಂದು ಪ್ರಕಟಿಸಿರುವುದರಿಂದ;

ಮತ್ತು ಆ ರಾಜ್ಯಪತ್ರವನ್ನು 25–9–1997ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಸಂಬಂಧದಲ್ಲಿ ರಾಜ್ಯಸರ್ಕಾರಕ್ಕೆ ಯಾವುದೇ ಸಲಹೆಗಳು ಮತ್ತು ಆಕ್ಷೇಪಣೆಗಳು ಬಂದಿಲ್ಲವಾದರಿಂದ.

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ 1990ರ 14)ರ 8ನೇ ಪ್ರಕರಣದೊಂದಿಗೆ ಓದಿಕೊಂಡ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) (-------ತಿದ್ದುಪಡಿ) ನಿಯಮಗಳು, 1997 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ* ಅವು ಜಾರಿಗೆ ಬರತಕ್ಕದ್ದು.

* ಕರ್ನಾಟಕ ವಿಶೇಷ ರಾಜ್ಯಪತ್ರ ದಿನಾಂಕ 19ನೇ ನವೆಂಬರ್ 1997ರಲ್ಲಿ ಪ್ರಕಟವಾಗಿದೆ.

2. **ಹೊಸ 29ಎ ನಿಯಮದ ಸೇರ್ಪಡೆ.-** ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ನಿಯಮ 29ರ ತರುವಾಯ ಈ ಮುಂದಿನ ನಿಯಮವನ್ನು ಸೇರಿಸತಕ್ಕದ್ದು ಎಂದರೆ:-

"**29ಎ. ಮಕ್ಕಳ ನಿಯೋಜನೆ.-** ಯಾರೇ ಸರ್ಕಾರಿ ನೌಕರನು ಗೃಹ ಕೃತ್ಯದಲ್ಲಿ ಸಹಾಯ ಮಾಡುವುದಕ್ಕಾಗಿ ಹದಿನಾಲ್ಕು ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವುದೇ ಮಗುವನ್ನು ಕೆಲಸಕ್ಕೆ ಇಟ್ಟುಕೊಳ್ಳತಕ್ಕದ್ದಲ್ಲ;

(2) ಯಾರೇ ಸರ್ಕಾರಿ ನೌಕರನು (1)ನೇ ಉಪನಿಯಮವನ್ನು ಉಲ್ಲಂಘನೆ ಮಾಡುವುದು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 ರ 8ನೇ ನಿಯಮದ (v) ರಿಂದ (viii)ರ ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ದಂಡನೆಗೆ ಒಳಪಡುವ ದುರ್ನಡತೆ ಎನಿಸಿಕೊಳ್ಳುತ್ತದೆ.

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಲ್. ಜಯರಾಂ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

(ಸೇವಾ ನಿಯಮಗಳು).

ಕರ್ನಾಟಕ ಸರ್ಕಾರ

ಅಧಿಸೂಚನೆ

ಸಂ. ಡಿಪಿಎಆರ್ 14 ಎಸ್‌ಆರ್‌ಸಿ 97, ಬೆಂಗಳೂರು, ದಿನಾಂಕ 17-6-1998

